ಸಂಪುಟ: 04 ಸಂಚಿಕೆ: 136 ಪುಟಗಳು: 08 ಸೋಮವಾರ 29 ಜುಲೈ 2024
www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**
ಮಕ್ಕಳಿಗೆ ಸುರಕ್ಷಿತವಾಗಿ ಬದುಕಲು ಬೇಕಾದ ಭೂಮಂಡಲದ ಪರಿಸರವನ್ನು ರಕ್ಷಿಸುವುದು ಅವರಿಗಾಗಿ ಹಣ, ಆಸ್ತಿ ಕೊಡಿಡುವುದಕ್ಕಿಂತ ಮಿಗಿಲು.

## ವಿಜಯೇಂದ್ರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ರಮೇಶ್ ಜಾರಕಿಹೊಳಿ

• ಉದಯವಾಹಿನಿ, ಗೋಕಾಕ್

ವಾಲ್ಮೀಕಿ ನಿಗಮದಲ್ಲಿ ಹಗರಣ, ಮುಡಾ ಅಕ್ರಮ ಪ್ರಕರಣ ಖಂಡಿಸಿ ಈಗಾಗಲೇ ಬಿಜೆಪಿ ನಾಯಕರು ಸರ್ಕಾರದ ವಿರುದ್ಧ ಹೋರಾಟ ನಡೆಸಿದ್ದೇವೆ. ಮುಂಬರುವ ದಿನಗಳಲ್ಲಿ ಹೈಕಮಾಂಡ್ ಜೊತೆ ಚರ್ಚಿಸಿ ಶಾಸಕ ಯತ್ನಾಳ್ ಜೊತೆ ಸೇರಿ ಪಾದಯಾತ್ರೆ ಮಾಡುವುದಾಗಿ ಮಾಜಿ ಸಚಿವ ರಮೇಶ್ ಜಾರಕಿಹೊಳಿ ತಿಳಿಸಿದ್ದಾರೆ.

ಗೋಕಾಕ್‌ನಲ್ಲಿ ಮಾತನಾಡಿದ ಶಾಸಕ ರಮೇಶ್ ಜಾರಕಿಹೊಳಿ, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅವ್ಯವಹಾರ ಇಡೀ ರಾಜ್ಯದಲ್ಲಿಯೇ ನಡೆದ ಅತಿದೊಡ್ಡ ಹಗರಣವಾಗಿದೆ. ದಲಿತರ ಹಣವನ್ನು ನುಂಗಿ ನೀರು ಕುಡಿಯಲಾಗಿದೆ. ಈ ಬಗ್ಗೆ ಹೈಕಮಾಂಡ್ ಜೊತೆ ಚರ್ಚಿಸಿ ಅನುಮತಿ ಪಡೆದು ಯತ್ನಾಳ್ ಹಾಗೂ ಇನ್ನು ಕೆಲ ನಾಯಕರೊಂದಿಗೆ ಸೇರಿ ಪಾದಯಾತ್ರೆ ಮಾಡುತ್ತೇವೆ ಎಂದರು.

ಇದೇ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ರಮೇಶ್ ಜಾರಕಿಹೊಳಿ, ನಾನು ಅವರೊಂದಿಗೆ ಮಾತನಾಡಲ್ಲ. ವಿಜೇಂದ್ರ ಅವರನ್ನು ರಾಜ್ಯಾಧ್ಯಕ್ಷ ಎಂದು ಒಪ್ಪಿಕೊಂಡಿಲ್ಲ. ನಾನು ನೇರವಾಗಿ ಹೈಕಮಾಂಡ್ ಜೊತೆ ಮಾತನಾಡುತ್ತೇನೆ. ಬೇರೆ ಯಾರ ಬಳಿಯೂ ಮಾತನಾಡುವುದಿಲ್ಲ ಎಂದರು.

## ಮುಡಾ ಹಗರಣ: ಆ. 3ರಿಂದ ಮೈಸೂರಿಗೆ ಪಾದಯಾತ್ರೆ

• ಉದಯವಾಹಿನಿ, ಮೈಸೂರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ನಡೆದಿದೆ ಎನ್ನಲಾದ ಹಗರಣಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಬಿಜೆಪಿ, ಜೆಡಿಎಸ್ ಜಂಟಿಯಾಗಿ ಆಗಸ್ಟ್ 3ರಂದು ಕಾಲ್ನಡಿಗೆ ಜಾಥಾ ನಡೆಸಲು ನಿರ್ಧರಿಸಿವೆ.ಒಂದು ವಾರದ ಪಾದಯಾತ್ರೆ ಬೆಂಗಳೂರಿನಲ್ಲಿ ಪ್ರಾರಂಭವಾಗಿ ಮೈಸೂರಿನಲ್ಲಿ ಕೊನೆಗೊಳ್ಳಲಿದೆ.

ಬಿಜೆಪಿ ಮತ್ತು ಜೆಡಿಎಸ್ ನಾಯಕರ ನಡುವೆ ನಡೆದ ಸಭೆಯಲ್ಲಿ ಆಗಸ್ಟ್ 3 ರಂದು ಕಾಲ್ನಡಿಗೆ ಜಾಥಾವನ್ನು ಪ್ರಾರಂಭಿಸಲು ನಿರ್ಧರಿಸಲಾಯಿತು. ಆದರೆ, ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಮತ್ತು ಪ್ರಹ್ಲಾದ್ ಜೋಶಿ ಭಾಗವಹಿಸುವ ಸಾಧ್ಯತೆಯಿರುವ ಸಭೆಯಲ್ಲಿ ಉಭಯ ಪಕ್ಷಗಳ ನಾಯಕರು ಭಾನುವಾರ ಮತ್ತೆ ಭೇಟಿಯಾಗಿ ಈ ವಿಷಯದ ಬಗ್ಗೆ ಚರ್ಚಿಸಲು ನಿರ್ಧರಿಸಲಾಗಿದೆ. ಎರಡೂ ಪಕ್ಷಗಳ ನಾಯಕರು, ಕಾರ್ಯಕರ್ತರು 'ಭ್ರಷ್ಟ ಸಿಎಂ – ಭ್ರಷ್ಟ ಕಾಂಗ್ರೆಸ್' ಘೋಷಣೆಯೊಂದಿಗೆ ಮೆರವಣಿಗೆ ನಡೆಸಲಿದ್ದಾರೆ.

## ನಾನು ಕಾಂಗ್ರೇಸ್ ಪಕ್ಷದಲ್ಲಿ ಇದ್ದೇನೆ ಹೊರತು ಸರ್ಕಾರದಲ್ಲಿ ಅಲ್ಲ

• ಉದಯವಾಹಿನಿ, ಮಂಗಳೂರು

40% ಕಮಿಷನ್ ಅಷ್ಟೆ ಅಲ್ಲದೆ ಎಲ್ಲಾ ಹಗರಣಗಳ ಕುರಿತು ಸಿಎಂ ಸಚಿವರಿಗೆ ಕೇಳಬೇಕು. ನಾನು ಕಾಂಗ್ರೇಸ್ ಪಕ್ಷದಲ್ಲಿ ಇದ್ದೇನೆ ಹೊರತು ಸರ್ಕಾರದಲ್ಲಿ ಇಲ್ಲ ಎಂದು ಕಾಂಗ್ರೇಸ್ ಎಂಎಲ್ಸಿ ಬಿಕೆ ಹರಿಪ್ರಸಾದ್ ತಿಳಿಸಿದರು. ಭಾನುವಾರ ಮಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೇಸ್ ಪಕ್ಷ ದ್ವೇಷ ಹಾಗೂ ಸೇಡಿನ ರಾಜಕಾರಣ ಮಾಡುವುದಿಲ್ಲ ಎಂದು ಮಂಗಳೂರಿನಲ್ಲಿ ಕಾಂಗ್ರೇಸ್ ಎಂಎಲ್ಸಿ ಬಿಕೆ ಹರಿಪ್ರಸಾದ್ ಹೇಳಿಕೆ ನೀಡಿದರು. ರಾಹುಲ್ ಗಾಂಧಿ ಭ್ರಷ್ಟಾಚಾರ ಸಹಿಸಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.ಯಾವುದೇ ರೀತಿಯ ಭ್ರಷ್ಟಾಚಾರ ಮಾಡಲ್ಲ ಎಂದಿದ್ದಾರೆ.

ಪಕ್ಷ ಕಾಲ ಕಾಲಕ್ಕೆ ಯಾವ ಯಾವ ನಿರ್ಣಯ ತೆಗೆದುಕೊಳ್ಳುತ್ತೆ ನೋಡೋಣ. 40% ಕಮಿಷನ್ ಆರೋಪದ ತನಿಖೆಯ ಬಗ್ಗೆ ಸಿಎಂ ಸಚಿವರಿಗೆ ಕೇಳಬೇಕು. ಈ ಬಗ್ಗೆ ಉತ್ತರ ಕೊಡಬೇಕಾದದ್ದು ಸರ್ಕಾರ. ನಾನು ಕಾಂಗ್ರೇಸ್ ಪಕ್ಷದಲ್ಲಿ ಇದ್ದೇನೆ ಹೊರತು ಸರ್ಕಾರದಲ್ಲಿ ಇಲ್ಲ. ಸರ್ಕಾರದಲ್ಲಿ ಏನ್ ನಡೆಯುತ್ತೆ ಅಂತ ಅಲ್ಲಿನ ಸದಸ್ಯರ ಬಳಿ ಕೇಳಬೇಕು ಎಂದು ಕಾಂಗ್ರೇಸ್ ಎಂಎಲ್ಸಿ ಬಿ.ಕೆ.ಹರಿ ಪ್ರಸಾದ ತಿಳಿಸಿದರು.

## ನೆರೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ: ಸಚಿವರುಗಳಿಗೆ ಡಿಸಿಎಂ ಮನವಿ

• ಉದಯವಾಹಿನಿ, ಬೆಂಗಳೂರು

ನೆರೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಜನರ ಕಷ್ಟಗಳನ್ನು ಆಲಿಸಬೇಕು, ಅಗತ್ಯ ನೆರವುಗಳನ್ನು ಒದಗಿಸಿಕೊಡಬೇಕು. ವರುಣನ ಕೃಪೆಯಿಂದ ಉತ್ತಮ ಮಳೆಯಾಗುತ್ತಿದೆ. ಇದೇ ವೇಳೆ ಉಂಟಾಗಿರುವ ಅವಘಡಗಳಿಂದ ಜನರು ಆತಂಕಕ್ಕೆ ಒಳಗಾಗಿದ್ದು, ಜನಪ್ರತಿನಿಧಿಗಳಾದ ನಾವು ಅವರ ಜೊತೆ ನಿಲ್ಲೋಣ ಎಂದು ಸಚಿವ ಸಂಪುಟ ಸಹೋದ್ಯೋಗಿಗಳಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನವಿ ಮಾಡಿದ್ದಾರೆ.

ಹೌದು ರಾಜ್ಯಾದ್ಯಂತ ಭಾರಿ ಮಳೆ ಆಗುತ್ತಿದ್ದು, ಕೆಲವೆಡೆ ಪ್ರವಾಹದ ಭೀತಿ ಕೂಡ ಎದುರಾಗಿದೆ. ಹೀಗಾಗಿ ಪ್ರವಾಹ ಪೀಡಿತ ಪ್ರದೇಶಗಳಿಗೆ ಸಚಿವರು ಭೇಟಿ ನೀಡಿ ಅಲ್ಲಿನ ಜನರ ಕಷ್ಟಗಳನ್ನು ಅವರ ಸಮಸ್ಯೆಗಳನ್ನು ಆಲಿಸಿ ಅವರಿಗೆ ಸ್ಪಂದಿಸಬೇಕು ಎಂದು ಉಪಮುಖ್ಯಮದ ಡಿಕೆ ಶಿವಕುಮಾರ್ ಸಂಪುಟ ಸಚಿವರಿಗೆ ಮನವಿ ಮಾಡಿದ್ದಾರೆ.

ಇಂತಹ ಕಷ್ಟದ ಸಮಯದಲ್ಲಿ ಜನರ ಜೊತೆ ನಿಲ್ಲಬೇಕಿರುವುದು ನಮ್ಮ ಸರ್ಕಾರದ ಕರ್ತವ್ಯ. ಹೀಗಾಗಿ ಸಚಿವ ಸಹೋದ್ಯೋಗಿಗಳು ತಮ್ಮ ಕ್ಷೇತ್ರ ವ್ಯಾಪ್ತಿ, ಇತರೆ ಪ್ರವಾಹಪೀಡಿತ ಪ್ರದೇಶಗಳ ಶಾಸಕರ ಸಂಪರ್ಕದೊಂದಿಗೆ ಭೇಟಿ ನೀಡಿ.



# ಒಂದೇ ರಾತ್ರಿಯಲ್ಲಿ ಮೇಕೆದಾಟು ಯೋಜನೆ ಆಗುತ್ತಾ? ಕೇಂದ್ರದ ವಿರುದ್ಧ ಸುಮ್ಮನೇ ಆರೋಪ ಬೇಡ

• ಉದಯವಾಹಿನಿ, ಮೈಸೂರು

ಮೇಕೆದಾಟು ಯೋಜನೆ ಮಾಡಲು ಒಂದೇ ರಾತ್ರಿಯಲ್ಲಿ ಆಗಿಬಿಡುತ್ತಾ ಕಾವೇರಿ ನದಿ ನೀರು ಬಿಡುವ ವಿಚಾರವಾಗಿ ತಮಿಳುನಾಡು ಸಿಎಂ ಸ್ಟಾಲಿನ್ ಜೊತೆ ಚರ್ಚೆ ಮಡಿದ್ದಾರಾ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ. ಮೈಸೂರಿನಲ್ಲಿ ಮಾತನಾಡಿದ ಹೆಚ್.ಡಿ.ಕುಮಾರಸ್ವಾಮಿ, ಈಗ ರಾಜ್ಯದಲ್ಲಿ ಹೆಚ್ಚು ಮಳೆಯಾಗುತ್ತಿರುವುದರಿಂದ ತಮಿಳುನಾಡಿಗೆ ಹೆಚ್ಚು ನೀರು ಹೋಗುತ್ತಿದೆ. ಈ ವಿಚಾರವಾಗಿ ಟೆಕ್ನಿಕಲ್ ಆಗಿ ಚರ್ಚೆ ಮಾಡಿದರೆ ಒಳ್ಳೆಯದು ಎಂದರು. ಮೇಕೆದಾಟು ಯೋಜನೆ ಒಂದೇ ದಿನದಲ್ಲಿ ಆಗುವುದಿಲ್ಲ. ಯೋಜನೆ ಬಗ್ಗೆ ನಾನೂ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರು.

**5,300 ಕೋಟಿ ಹಣ ಘೋಷಣೆ**

ಬಜೆಟ್‌ನಲ್ಲಿ ಕರ್ನಾಟಕಕ್ಕೆ ಯಾವುದೇ ವಿಶೇಷ ಅನುದಾನ ನೀಡದೇ ಅನ್ಯಾಯ ಮಾಡಲಾಗುತ್ತಿದೆ ಎಂದು ರಾಜ್ಯ ಕಾಂಗ್ರೇಸ್ ನಾಯಕರು ಆರೋಪಿಸುತ್ತಿದ್ದಾರೆ. ಕಾಂಗ್ರೇಸ್ ನವರು ಈ ನಡವಳಿಕೆ ಬದಲಿಸಿಕೊಳ್ಳಬೇಕು. ಮೊದಲು ನಿಮ್ಮ ಸಣ್ಣತನ ಬಿಟ್ಟುಬಿಡಿ. ಕೇಂದ್ರ ಸರ್ಕಾರದ ಬಗ್ಗೆ ಸುಮ್ಮನೇ ಆರೋಪ ಮಾಡುತ್ತಾ ತಿರುಗಾಡುತ್ತಿರುವುದನ್ನು ನಿಲ್ಲಿಸಿ.

ರಾಜ್ಯದ ವಾಸ್ತವ ಪರಿಸ್ಥಿತಿಯನ್ನು ಕೇಂದ್ರದ ಮುಂದೆ ಸಮರ್ಥವಾಗಿ ಇಡಬೇಕು. ಅದನ್ನು ಬಿಟ್ಟು ಎ ಲ್ಲದಕ್ಕೂ ಕೇಂದ್ರದ ವಿರುದ್ಧ ಆರೋಪ ಮಾಡು ವುದಲ್ಲ ಎಂದು ಕಿಡಿಕಾರಿದರು.

ಭದ್ರಾ, ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ 5,300 ಕೋಟಿ ಹಣ ಘೋಷಿಸಿದೆ. ಕೇಂದ್ರದಿಂದ ಕರ್ನಾಟಕಕ್ಕೆ ಯಾವುದೆ ಅನ್ಯಾಯವಾಗುತ್ತಿಲ್ಲ. ರಾಜ್ಯವೇ ಅನ್ಯಾಯ ಮಾಡಿಕೊಳ್ಳುತ್ತಿದೆ. ಯೋಜನೆಗಳ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಹಣ ಮೀಸಲಿಡಬೇಕು. ಆಗ ಮಾತ್ರ ಕೇಂದ್ರ ಸರ್ಕಾರ ತನ್ನ ಪಾಲಿನ ಹಣ ಬಿಡುಗಡೆ ಮಾಡುತ್ತದೆ ಎಂದರು.

**ಕೇಂದ್ರ ಹಣಕಾಸು ಸಚಿವೆ ರಾಜ್ಯದಿಂದ ಆಯ್ಕೆ ಆಗಿದ್ದರೂ, ಇಂಡಿಯಾ ಒಕ್ಕೂಟಕ್ಕೆ ಸೇರಿದ ರಾಜ್ಯಗಳಿಗೆ ಅನ್ಯಾಯ ಮಾಡಿದ್ದಾರೆ. ಆಂಧ್ರಪ್ರದೇಶ ಮತ್ತು ಬಿಹಾರಕ್ಕೆ ಮಾತ್ರ ಹೆಚ್ಚಿನ ಅನುದಾನ ನೀಡಿದ್ದಾರೆ. ಮಹಾರಾಷ್ಟ್ರ ಬಿಟ್ಟರೆ ಜಿಎಸ್‌ಟಿ ಹೆಚ್ಚಾಗಿ ಕಟ್ಟುವುದರಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. 2004 ರಿಂದ 2014ರವರೆಗೆ ಯುಪಿಎ ಸರಕಾರ ಅಧಿಕಾರ ಇದ್ದಾಗ ಯಾವುದೇ ರಾಜ್ಯಕ್ಕೆ ಅನ್ಯಾಯ ಮಾಡಿಲ್ಲ, ಮೋದಿ ಪ್ರಧಾನಿ ಆದ ಮೇಲೆ ರಾಜ್ಯಗಳ ಮೇಲೆ ತಾರತಮ್ಯ ಮಾಡಿದ್ದಾರೆ. ಕರ್ನಾಟಕದ ಅಭಿವೃದ್ಧಿಗೆ ಹಣ ನೀಡುತ್ತಿಲ್ಲ, ಪ್ರತಿಭಟನೆ ಮಾಡಬೇಕು ಎಂದುಕೊಂಡಿದ್ದೆವು. ಅದಕ್ಕೆ ಕೋರ್ಟ್ ಅನುಮತಿ ನೀಡಿಲ್ಲ ಎಂದು ಕೇಂದ್ರದ ವಿರುದ್ಧ ಹರಿಹಾಯ್ದರು.**

# ಕರುನಾಡಿಗೆ ಅನ್ಯಾಯವಿಲ್ಲ ಅಪಪ್ರಚಾರ ಸರಿಯಲ್ಲ

### • ಕೇಂದ್ರ ಬಜೆಟ್ ರಾಜ್ಯಕ್ಕೆ ಅನ್ಯಾಯವಿಲ್ಲ • ಬಜೆಟ್‌ನಲ್ಲಿ ಕರ್ನಾಟಕಕ್ಕೆ ಚೊಂಬು ಆರೋಪಕ್ಕೆ ನಿರ್ಮಲಾ ಸೀತಾರಾಮನ್ ತಿರುಗೇಟು • ಹೆಚ್ಚು ಅನುದಾನ • ತೆರಿಗೆ ಪಾಲು ಹಂಚಿಕೆ ಮಾಡಲಾಗಿದೆ • ಕೈ ವಿರುದ್ಧ ಕಮಲ ಕೆಂಡ

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ ಎಂಬ ರಾಜ್ಯ ಸರ್ಕಾರದ ಆರೋಪ ಸತ್ಯಕ್ಕೆ ದೂರವಾದದ್ದು. ಈ ಬಜೆಟ್‌ನಲ್ಲಿ ರಾಜ್ಯಕ್ಕೆ 15,300 ಕೋಟಿ ರೂ. ನೆರವು ನೀಡಲಾಗಿದೆ. ಹಾಗೆಯೇ 45,486 ಕೋಟಿ ರೂ. ತೆರಿಗೆ ಪಾಲು ಹಂಚಿಕೆ ಮಾಡಲಾಗಿದೆ ಎಂದು ಕೇಂದ್ರದ ಹಣಕಾಸು ಸಚಿವೆ ನಿರ್ಮಲ ಸೀತರಾಮನ್ ಹೇಳಿದರು. ಬೆಂಗಳೂರಿನ ಬಿಜೆಪಿ ಕಚೇರಿಯ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೇಂದ್ರದ ಬಜೆಟ್‌ನಲ್ಲಿ ರಾಜ್ಯಕ್ಕೆ ಅನ್ಯಾಯ ಮಾಡಲಾಗಿದೆ ಎಂಬ ಅಪಪ್ರಚಾರ ಮಾಡಲಾಗುತ್ತಿದೆ. ಇದು ವಾಸ್ತವಕ್ಕೆ ವಿರುದ್ಧವಾಗಿದೆ.

ವಾಸ್ತವವಾಗಿ ಕೇಂದ್ರದಿಂದ ರಾಜ್ಯಕ್ಕೆ ಯುಪಿಎ ಸರ್ಕಾರದ ಅವಧಿಯಲ್ಲಿ ನೀಡಿದ್ದಕ್ಕಿಂತ ಹೆಚ್ಚಿನ ನೆರವು, ಆದಾಯ ಹಂಚಿಕೆ ಮಾಡಲಾಗಿದೆ ಎಂದು ಅಂಕಿ–ಅಂಶಗಳ ಸಮೇತ ಮಾಹಿತಿ ನೀಡಿದರು. ಹಣದುಬ್ಬರ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇದ್ದ ಕರ್ನಾಟಕದಲ್ಲಿ ಕಾಂಗ್ರೇಸ್ ಸರ್ಕಾರ ಬಂದ ನಂತರ ಹಣದುಬ್ಬರ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಾಗಿದೆ.

**1** ಕೇಂದ್ರ ಸರಕಾರದ ಆಯವ್ಯಯ ಮಂಡನೆಯಲ್ಲಿ ರಾಜ್ಯವನ್ನು ಕಡೆಗಣಿಸಿರುವ ಬಗ್ಗೆ ಆಕ್ರೋಶ

**2** ಮಹಾರಾಷ್ಟ್ರ ಬಿಟ್ಟರೆ ಜಿಎಸ್‌ಟಿ ಹೆಚ್ಚಾಗಿ ಕಟ್ಟುವುದರಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ.

**3** ಮೋದಿ ಪ್ರಧಾನಿ ಆದ ಮೇಲೆ ಎಲ್ಲ ರಾಜ್ಯಗಳ ಮೇಲೆ ತಾರತಮ್ಯ ಮಾಡಿದ್ದಾರೆ




**ಎನ್‌ಡಿಎ ಅವಧಿಯಲ್ಲಿ 2,95,817 ಕೋಟಿ ರೂ. ತೆರಿಗೆ ಹಂಚಿಕೆ**

ಎನ್‌ಡಿಎ ಅವಧಿಯಲ್ಲಿ 2,95,817 ಕೋಟಿ ರೂ. ಅನುದಾನ ಹಂಚಿಕೆ ಮಾಡಲಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ರಾಜ್ಯಕ್ಕೆ ಕೇಂದ್ರದಿಂದ ಅನ್ಯಾಯ ಮಾಡಲಾಗಿದೆ ಎಂಬ ಕಾಂಗ್ರೇಸ್ ಆರೋಪಕ್ಕೆ ಇಂದು ಸುದ್ದಿಗೋಷ್ಠಿ ನಡೆಸಿ ಕೇಂದ್ರದಿಂದ ರಾಜ್ಯಕ್ಕೆ ಬಂದ ಅನುದಾನಗಳ ವಿವರ ನೀಡಿ ಕರ್ನಾಟಕ ವಿಚಾರದಲ್ಲಿ ಸಾಕಷ್ಟು ತಪ್ಪು ಮಾಹಿತಿ ಹರಿಯಬಿಡಲಾಗುತ್ತಿದೆ ಎಂದು ತಿಳಿಸಿದರು. ಯುಪಿಎ ಅವಧಿಯಲ್ಲಿ ವಿವಿಧ ಇಲಾಖೆಗಳಲ್ಲಿ ಅನುದಾನ ಹಂಚಿಕೆ 66 ಸಾವಿರ ಕೋಟಿ ರೂ.ಇದ್ದರೆ 2024 ರ ಒಂದೇ ವರ್ಷದಲ್ಲಿ ಎನ್‌ಡಿಎಯಿಂದ 45,485 ಕೋಟಿ ರೂ. ತೆರಿಗೆ ಹಂಚಿಕೆ ಮಾಡಲಾಗಿದೆ. ಯುಪಿಎ ಅವಧಿಯಲ್ಲಿ 60,779 ಕೋಟಿ ರೂ. ತೆರಿಗೆ ಹಂಚಿಕೆಯಾಗಿದ್ದರೆ ಎನ್‌ಡಿಎ ಅವಧಿಯಲ್ಲಿ 2,36,955 ಕೋಟಿ ರೂ. ತೆರಿಗೆ ಹಂಚಿಕೆ ಮಾಡಲಾಗಿದೆ. ಇಷ್ಟಾದರೂ ಕರ್ನಾಟಕಕ್ಕೆ ಅನ್ಯಾಯ ಆಗಿದೆ ಎಂದು ತಪ್ಪು ಪ್ರಚಾರ ಮಾಡಲಾಗುತ್ತಿದೆ ಎಂದು ದೂರಿದರು.

**ರಾಜ್ಯದ ರೈಲ್ವೆ ಯೋಜನೆಗೆ ಹೆಚ್ಚು ಹಣ**

ರಾಜ್ಯದ ರೈಲ್ವೆ ಯೋಜನೆಗಳಿಗೆ ಈ ಬಜೆಟ್‌ನಲ್ಲಿ 7,559 ಕೋಟಿ ರೂ.ಗಳನ್ನು ಒದಗಿಸಿದ್ದೇವೆ. 2009 ರಿಂದ 2014ರ ವರೆಗೂ ಯುಪಿಎ 2ನೇ ಆಡಳಿತದ ಅವಧಿಯಲ್ಲಿ ರಾಜ್ಯಕ್ಕೆ ರೈಲ್ವೆ ಅಭಿವೃದ್ಧಿಗಾಗಿ ಬಂದಿದ್ದು ಕೇವಲ 835 ಕೋಟಿ ರೂಪಾಯಿ. ನಾವು ಈ ವರ್ಷವೇ ರಾಜ್ಯದ ರೈಲ್ವೆ ಅಭಿವೃದ್ಧಿ 7559 ಕೋಟಿ ರೂ.ಗಳನ್ನು ಒದಗಿಸಿದ್ದೇವೆ. ಈಗಾಗಲೇ ಪ್ರಗತಿಯಲ್ಲಿರುವ ಯೋಜನೆಗಳಿಗೂ ಹಣ ಒದಗಿಸಿದ್ದೇವೆ ಎಂದರು. ರಾಜ್ಯದ ರಸ್ತೆ ಅಭಿವೃದ್ಧಿಗೆ ಎನ್‌ಡಿಎ ಸರ್ಕಾರ 1ಲಕ್ಷ ಕೋಟಿ ರೂಪಾಯಿ ಹಣವನ್ನು ರಾಜ್ಯಕ್ಕಾಗಿಯೇ ಒದಗಿಸಿದೆ. 4600 ಕಿ.ಮೀ. ರಸ್ತೆಯನ್ನು ಈಗಾಗಲೇ ನಿರ್ಮಿಸಿದೆ ಎಂದರು. ಭಾರತ್ ಮಾಲಾ ಯೋಜನೆಯಡಿ ರಾಜ್ಯದಲ್ಲಿ ಯೋಜನೆಗಳನ್ನು ಪ್ರಕಟಿಸಿದ್ದೇವೆ ಎಂದು ಅವರು ತಿಳಿಸಿದರು. ರಾಜ್ಯಕ್ಕೆ ಕೋವಿಡ್ ನಂತರ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಕೇಂದ್ರದಿಂದ ಬಡ್ಡಿ ರಹಿತ ಸೌಲವನ್ನು ನೀಡಿದ್ದೇವೆ. 2021–23ರ ವರೆಗೆ 8,312 ಕೋಟಿ ರೂ. ಬಡ್ಡಿ ಸಾಲ ನೀಡಿದ್ದರೆ, ಈ ವರ್ಷ 2066 ಕೋಟಿ ಬಡ್ಡಿ ರಹಿತ ಸಾಲವನ್ನು ಒದಗಿಸಿದ್ದೇವೆ ಎಂದರು. ಬಜೆಟ್‌ನಲ್ಲಿ ದೇಶದ 7 ಕಡೆ ಜವಳಿ ಪಾರ್ಕ್ ಸ್ಥಾಪನೆ ಮಾಡಲಾಗಿದ್ದು, ಈ 7ರಲ್ಲಿ ರಾಜ್ಯದ ಕಲ್ಬುರ್ಗಿಯಲ್ಲೂ ಜವಳಿ ಪಾರ್ಕ್ ಘೋಷಣೆ ಮಾಡಲಾಗಿದೆ. ಹೀಗಿರುವಾಗ ಕೇಂದ್ರ ಬಜೆಟ್‌ನಿಂದ ರಾಜ್ಯಕ್ಕೆ ಎಲ್ಲಿ ಅನ್ಯಾಯವಾಗಿದೆ ಎಂದು ಪ್ರಶ್ನಿಸಿದರು.

ಆದಾಯ ಹೆಚ್ಚಳವಿದ್ದ ಕರ್ನಾಟಕ ಈಗ ವಿತ್ತೀಯ ಕೊರತೆ ಎದುರಿಸುತ್ತಿದೆ. ಸಾಲದ ಮಿತಿಯೂ ಹೆಚ್ಚಿದೆ, ಸಾಲವೂ ಹೆಚ್ಚಾಗಿದೆ. ಹೀಗಿರುವಾಗ ಈ ಸರ್ಕಾರ ಕೇಂದ್ರದ ವಿರುದ್ಧ ಆರೋಪ ಮಾಡುತ್ತಿರುವುದು ಎಂದರು.

ಈ ಬಜೆಟ್‌ನಲ್ಲಿ 15,300 ಕೋಟಿ ರೂ. ಅನುದಾನ ರಾಜ್ಯಕ್ಕೆ ಒದಗಿಸಿದ್ದೇವೆ. ಹಾಗೆಯೇ ಸುಮಾರು 45 ಸಾವಿರ ಕೋಟಿ ರೂ.ತೆರಿಗೆ ಪಾಲನ್ನು ಹಂಚಿಕೆ ಮಾಡಲಾಗಿದೆ. ಹೀಗಿದ್ದರೂ ಕೇಂದ್ರದ ಬಜೆಟ್‌ನಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ ಎಂಬ ಮಾತುಗಳು ಸರಿಯಲ್ಲ ಎಂದು ಅವರು ಹೇಳಿದರು. ರಾಜ್ಯದ ಕಾಂಗ್ರೆಸ್ ಆಡಳಿತದಿಂದ ವಿತ್ತೀಯ ಕೊರತೆಯಾಗಿದೆ. ಬಂಡವಾಳ ವೆಚ್ಚ ಆಗುತ್ತಿಲ್ಲ.

**ರಾಜ್ಯ ಸರ್ಕಾರದ ಆರೋಪ ಸತ್ಯಕ್ಕೆ ದೂರ**

ಇದರಿಂದ ಉದ್ಯೋಗ ಸೃಷ್ಟಿಯಾಗುತ್ತಿಲ್ಲ. ಇದನ್ನು ಬಿಟ್ಟು ಸುಮ್ಮನೆ ಕೇಂದ್ರ ಸರ್ಕಾರದ ಮೇಲೆ ದೂಷಣೆ ಮಾಡುತ್ತಿರುವುದು ಸರಿಯಲ್ಲ ಎಂದು ಅವರು ಹೇಳಿದರು.

ರಾಜ್ಯದಲ್ಲಿ ಹಣದುಬ್ಬರ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಾಗಿರುವುದಕ್ಕೆ ರಾಜ್ಯದ ಬೆಲೆ ಏರಿಕೆ ನೀತಿಯೇ ಕಾರಣ ಎಂದು ಟೀಕಿಸಿದರು. ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ಏನೆಲ್ಲಾ ನೆರವು ನೀಡಲಾಗಿದೆ ಎಂಬುದನ್ನು ಅಂಕಿ–ಅಂಶಗಳ ಸಮೇತ ವಿವರ ನೀಡಿದ ಅವರು, ಬಜೆಟ್‌ನಲ್ಲಿ ರಾಜ್ಯದ 6 ನಗರಗಳನ್ನು ಸ್ಮಾರ್ಟ್‌ಸಿಟಿ ಯೋಜನೆಯಡಿ ಆಯ್ಕೆ ಮಾಡಲಾಗಿದೆ. ಈಗಾಗಲೇ 904 ಕಾಮಗಾರಿಗಳಿಗೆ ಕಾರ್ಯಾದೇಶವನ್ನೂ ನೀಡಿದ್ದೇವೆ ಎಂದರು.

## ಬೆಂಗಳೂರಿಗೆ ಬಂದಿದ್ದು ನಾಯಿ ಮಾಂಸ ಅಲ್ಲ ಮೇಕೆ ಮಾಂಸ: ಡಾ.ಜಿ ಪರಮೇಶ್ವರ್ ಸ್ಪಷ್ಟನೆ

• ಉದಯವಾಹಿನಿ, ದಾವಣಗೆರೆ



ಬೆಂಗಳೂರಿಗೆ ರಾಜಸ್ಥಾನದಿಂದ ರೈಲಿನ ಮೂಲಕ ಸರಬರಾಜು ಆಗಿರುವುದು ನಾಯಿ ಮಾಂಸವಲ್ಲ, ಅದು ಮೇಕೆ ಮಾಂಸ ಎಂಬುದಾಗಿ ಗೃಹ ಸಚಿವ ಡಾ.ಜಿ ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದಂತ ಅವರು, ರಾಜಸ್ಥಾನದಿಂದ ಬೆಂಗಳೂರಿಗೆ ರೈಲಿನ ಮೂಲಕ ಬಂದಂತ ಮಾಂಸ ನಾಯಿಯದ್ದು ಎಂಬುದಾಗಿ ಆರೋಪಿಸಲಾಗಿತ್ತು. ಸಂಬಂಧ ಆರೋಗ್ಯ ಇಲಾಖೆಯಿಂದ ಮಾಂಸದ ಮಾದರಿಯನ್ನು ಸಂಗ್ರಹಿಸಿ ಲ್ಯಾಬ್‌ಗೆ ಪರೀಕ್ಷೆಗಾಗಿ ಕಳುಹಿಸಲಾಗಿತ್ತು. ಪರೀಕ್ಷೆಯ ವರದಿ ಬಂದಿದೆ.

ಅದರಲ್ಲಿ ಮೇಕೆ ಮಾಂಸ ಎಂಬುದಾಗಿ ತಿಳಿದು ಬಂದಿದೆ. ಆದರೇ ನಾಯಿ ಮಾಂಸ ಎಂಬುದಾಗಿ ಅನಾವಶ್ಯಕವಾಗಿ ದುರುದ್ದೇಶದಿಂದ ದೂರು ನೀಡಲಾಗಿದೆ ಅಂತ ಹೇಳಿದರು. ರಾಜಸ್ಥಾನದಿಂದ ವಾರಕ್ಕೊಮ್ಮೆ, 15 ದಿನಗಳಿಗೊಮ್ಮೆ ಈ ರೀತಿಯಾಗಿ ರೈಲಿನ ಮೂಲಕ ಮಾಂಸವನ್ನು ತರುತ್ತಾರೆ. ಹೀಗೆ ತಂದಂತ ಮಾಂಸವನ್ನು ಮಾರಾಟ ಮಾಡುವುದೇ ಅವರ ಪ್ರವೃತ್ತಿಯಾಗಿದೆ. ಆದರೇ ತಂದಿರೋದು ನಾಯಿಯ ಮಾಂಸವಲ್ಲ. ಅದು ಮೇಕೆಯದ್ದು ಎಂಬುದಾಗಿ ಲ್ಯಾಬ್ ರಿಪೋರ್ಟ್ ನಿಂದ ದೃಢಪಟ್ಟಿದೆ ಎಂದು ಸ್ಪಷ್ಟಪಡಿಸಿದರು.ಇದೇ ಸಂದರ್ಭದಲ್ಲಿ ಮುಡಾ ಹಗರಣದ ಬಗ್ಗೆ ಮಾತನಾಡಿದಂತ ಅವರು, ಸಿಎಂ ವಿರುದ್ಧ ಸುಖಾ ಸುಮ್ಮನೇ ಆರೋಪ ಮಾಡಲಾಗುತ್ತಿದೆ. ಸಿಎಂ ಯಾವುದೇ ತಪ್ಪು ಮಾಡಿಲ್ಲ. ಯಾವುದೇ ಕಾನೂನು ಬಾಹಿರ ಕೆಲಸ ಕೂಡ ಮಾಡಿಲ್ಲ ಎಂದರು.

## ಮುಡಾ ಹಗರಣ ರಾಜ್ಯಪಾಲರಿಗೆ ವರದಿ ಸಲ್ಲಿಕೆ

• ಉದಯವಾಹಿನಿ, ಬೆಂಗಳೂರು

ಮುಡಾದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ಸರ್ಕಾರ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ವರದಿ ಸಲ್ಲಿಸಿದೆ. ವರದಿಯು ಒಂದೆರಡು ದಿನಗಳ ಹಿಂದೆ ರಾಜಭವನವನ್ನು ತಲುಪಿತು.ಮುಡಾ ಹಗರಣದ ಬಗ್ಗೆ ರಾಜ್ಯಪಾಲರು ಮುಖ್ಯ ಕಾರ್ಯದರ್ಶಿಗೆ ವರದಿ ಕೇಳಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಶುಕ್ರವಾರ ರಾಜ್ಯಪಾಲರಿಗೆ ವರದಿ ಸಲ್ಲಿಸಿರುವುದನ್ನು ದೃಢಪಡಿಸಿದ್ದಾರೆ. ವರದಿಯನ್ನು ಸಲ್ಲಿಸಿದ ನಂತರ ಸಿಎಂ ಬುಧವಾರ ರಾಜ್ಯಪಾಲರನ್ನು ಭೇಟಿಯಾದರು ಎಂದು ಮೂಲಗಳು ತಿಳಿಸಿವೆ.

ಬಿಜೆಪಿ, ಜೆಡಿಎಸ್ ನಾಯಕರು ರಾಜ್ಯಪಾಲರನ್ನು ಭೇಟಿ ಮಾಡಿ ಮುಡಾದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ದಾಖಲೆಗಳನ್ನು ಸಲ್ಲಿಸಿದ್ದರು

## ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಅನುದಾನ ಯಾವುದೇ ಕಾರಣಕ್ಕೂ ಸ್ಥಗಿತವಾಗಲು ಸಾಧ್ಯವಿಲ್ಲ

• ಉದಯವಾಹಿನಿ, ದಾವಣಗೆರೆ



ಹಿಂದುಳಿದ ವರ್ಗಗಳ ಇಲಾಖೆಗಳಲ್ಲಿ ಯಾವುದೇ ರೀತಿಯಾಗಿ ಅನುದಾನ ಸ್ಥಗಿತವಾಗಿಲ್ಲ. ಅನುದಾನ ಬಿಡುಗಡೆ ಆಗದೆ ಇರಬಹುದು ಆದರೆ ಅನುದಾನ ಸ್ಥಗಿತವಾಗಿಲ್ಲ ಎಂದು ಸಮಾಜ ಕಲ್ಯಾಣ ಇಲಾಖೆಯ ಸಚಿವ ಎಚ್.ಸಿ. ಮಹದೇವಪ್ಪ ಸ್ಪಷ್ಟಪಡಿಸಿದರು. ದಾವಣಗೆರೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಅನುದಾನ ಸ್ಥಗಿತವಾಗಿರುವ ವಿಚಾರಕ್ಕೆ ಸಂಬಂಧಿಸಿದಂತೆ, ಬಜೆಟ್‌ನಲ್ಲಿ ನಿಗದಿಯಾಗಿರುವ ಅನುದಾನ ಮಂಜೂರಾತಿ ಆಗಲಿದೆ. ಅನುದಾನ ಬಿಡುಗಡೆ ಆಗದೇ ಇರಬಹುದು ಆದರೆ ಸ್ಥಗಿತವಾಗಲು ಸಾಧ್ಯವಿಲ್ಲ ಎಂದು ಸ್ಪಷ್ಟನೆ ನೀಡಿದರು.

ಅಂಬೇಡ್ಕರ್ ವಸತಿ ಶಾಲೆಗಳು ಗೋಡೌನ್ ನಲ್ಲಿ ನಡೆಯುತ್ತಿವೆ ವಿಚಾರಕ್ಕೆ ಕ್ರೈಸ್ ನಲ್ಲಿ 821 ವಸತಿ ಶಾಲೆಗಳಿವೆ. 600 ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ಇದೇ. ಇನ್ನೂ 200ಕ್ಕೆ ಬಾಡಿಗೆ ನಲ್ಲಿ ನಡೆಸಲಾಗುತ್ತದೆ ಎಂದು ತಿಳಿಸಿದ್ದಾರೆ. ಎಲ್ಲೆಲ್ಲಿ ಬಾಡಿಗೆನಲ್ಲಿ ನಡೆಸಲಾಗುತ್ತೆ, ನಮಗೆ 36 ಕಡೆ ಜಾಗ ಇದ್ದು ಅಲ್ಲಿ ಕಟ್ಟುತ್ತೇವೆ. ಜಾಗ ಇಲ್ಲದ ಕಡೆ ಜಾಗ ಒದಗಿಸಿಕೊಂಡು ಕಟ್ಟುತ್ತೇವೆ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ತಿಳಿಸಿದ್ದಾರೆ.


# ಪುತ್ತೂರು ನಿಗಮದ ಸಮಸ್ಯೆ ತಿಳಿಗೊಳಿಸಲಾಗುವುದು: ಸಚಿವ

### • ಚಾಲಕ ಕಂ ನಿರ್ವಾಹಕ ನೇಮಕಾತಿ • ಹೊಸ ಬಸ್ ಖರೀದಿ ಬಳಿಕ ಹೆಚ್ಚಿನ ಸೌಲಭ್ಯ: ರಾಜ್ಯ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವ್ಯಾಪ್ತಿಯಲ್ಲಿ ಹೊಸ ಹೊಸ ಬಸ್‌ಗಳು ಖರೀದಿ ಹಿನ್ನೆಲೆಯಲ್ಲಿ ಕೆಲವು ವಿಭಾಗಗಳಲ್ಲಿ ಸಿಬ್ಬಂದಿ ಕೊರತೆ ಆಗಿದೆ. ಇದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವ ವಿಚಾರ ಇತ್ತೀಚೆಗೆ ಸದನದಲ್ಲಿ ಮಾರ್ದನಿಸಿತು. ಈ ವೇಳೆ ರಾಜ್ಯ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿಯವರು ಮಾತನಾಡಿ ಸೂಕ್ತ ಭರವಸೆ ನೀಡಿದರು. ಕೆಎಸ್‌ಆರ್‌ಟಿಸಿಗೆ ಎರಡು ಸಾವಿರ ಚಾಲಕ ಕಂ ನಿರ್ವಾಹಕರ ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿದೆ. ಅಲ್ಲದೇ ಹೊಸ ಬಸ್ ಖರೀದಿಗೂ ಚಿಂತನೆ ಇದೆ. ಇದೆಲ್ಲ ಒಂದೊಂದಾಗಿ ಆಗುತ್ತಿದ್ದಂತೆ ಕ್ರಮೇಣ ಸಾರಿಗೆ ಸೌಲಭ್ಯ ಹೆಚ್ಚಿಸಲಾಗುವುದು ಎಂದು ಅವರು ತಿಳಿಸಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪುತ್ತೂರು ವಿಭಾಗದಲ್ಲಿ ನಿಗಮದಲ್ಲಿ ಚಾಲಕ, ನಿರ್ವಾಹಕರ ಕೊರತೆ ಕಂಡು ಬಂದಿದೆ. ಬಸ್‌ಗಳು ಓಡಿಸಲು ಸಿಬ್ಬಂದಿ ಇಲ್ಲದ್ದರಿಂದ ಶಾಲಾ, ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರಿಗೆ ತೊಂದರೆ ಆಗಿದೆ. ಈ ಕಾರಣದಿಂದ ತ್ವರಿತವಾಗಿ ತೊಂದರೆ ಬಗೆಹರಿಸುವಂತೆ ಬಂಟ್ವಾಳ ಶಾಸಕ ರಾಜೇಶ್ ಕೇಳಿಕೊಂಡಿದ್ದರು. ಇದಕ್ಕೆ ಉತ್ತರಿಸಿದ ಸಚಿವ ರಾಮಲಿಂಗಾರೆಡ್ಡಿ ಅವರು, ರಾಜ್ಯದಲ್ಲಿ ಕೆಎಸ್‌ಆರ್‌ಟಿಸಿ ನಿಗಮದಲ್ಲಿ ನೇರ ನೇಮಕಾತಿ ನಡೆಯುತ್ತಿದೆ. ಇದರೊಂದಿಗೆ ಹೊಸ ಮಾದರಿಯ ಬಸ್‌ಗಳನ್ನು ಖರೀದಿಸಲಾಗುತ್ತಿದೆ. ಇವೆಲ್ಲ ಆಗುತ್ತಿದ್ದಂತೆ ಕ್ರಮೇಣ ಪುತ್ತೂರು ನಿಗಮದ ಸಮಸ್ಯೆ ತಿಳಿಗೊಳಿಸಲಾಗುವುದು ಎಂದು ಭರವಸೆ ನೀಡಿದರು.ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು, ಪ್ರಸಕ್ತ ಸಾಲಿನಲ್ಲಿ ಬಂಟ್ವಾಳದಲ್ಲಿ ಪ್ರಾಕೃತಿಕ



ವಿಕೋಪಕ್ಕೆ ಸಾಕಷ್ಟು ಹಾನಿ ಆಗಿದೆ. ಹೀಗಾಗಿ ನೆರೆಪೀಡಿತ ಪ್ರದೇಶವೆಂದು ಘೋಷಿಸಿ ವಿಶೇಷ ಅನುದಾನ ನೀಡುವಂತೆ ಅವರು ಮನವಿ ಮಾಡಿದರು. ಇದಕ್ಕೆ ಸಚಿವ ಕೃಷ್ಣ ಬೈರೆಗೌಡ ಅವರು ಉತ್ತರಿಸಿ, ಸರ್ಕಾರದ ನಿಯಮಗಳಡಿ ಸೂಕ್ತ ಪರಿಹಾರ ಒದಗಿಸಲಾಗುವುದು ಎಂದು ತಿಳಿಸಿದರು.ಇತ್ತೀಚೆಗೆ ಶಿರಾಡಿ ಘಾಟಿನಲ್ಲಿ ಸಂಭವಿಸಿದ್ದ ಭೂಕುಸಿತದಿಂದಾಗಿ ಮಂಗಳೂರಿನಿಂದ ಅರ್ಧದಷ್ಟು ಪ್ರಿಮಿಯಂ ಬಸ್ ಸಂಚಾರ ಸ್ಥಗಿತಗೊಂಡಿತ್ತು. ಈ ವೇಳೆ ಸಾಮಾನ್ಯ ಸಾರಿಗೆ ಬಸ್‌ಗಳು ಮಂಗಳೂರು, ಪುತ್ತೂರು ವಿಭಾಗದಿಂದ ಸೇವೆಯಲ್ಲಿ ನಿರತವಾಗಿದ್ದವು.

**ಸಚಿವರ ಉತ್ತರದ ಮಾಹಿತಿ:** 4 ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಎಲೆಕ್ಟ್ರಿಕ್ ಬಸ್‌ಗಳ ಬಳಕೆಯನ್ನು ಉತ್ತೇಜಿಸಲು ಕೈಗೊಂಡಿರುವ ಕ್ರಮಗಳ ವಿವರಗಳನ್ನು ಸಚಿವರು ನೀಡಿದ್ದಾರೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಮದಲ್ಲಿ ಪ್ರಸ್ತುತ ಕೇಂದ್ರ ಸರ್ಕಾರದ ಫೇಮ್–2 ಯೋಜನೆಯಡಿಯಲ್ಲಿ ಮಂಜೂರಾಗಿರುವ 50 ಹವಾನಿಯಂತ್ರಿತ ವಿದ್ಯುತ್ ಚಾಲಿತ (ಎಲೆಕ್ಟ್ರಿಕ್) ವಾಹನಗಳನ್ನು ಜಿ.ಸಿ.ಸಿ. ಆಧಾರದಲ್ಲಿ ಬೆಂಗಳೂರು ಸೇರಿದಂತೆ 6 ನಗರಗಳಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ.

**ಹೊಸದಾಗಿ ಖರೀದಿಸುವ ಬಸ್‌ಗಳು**

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ)ಯಲ್ಲಿ ಎಲೆಕ್ಟ್ರಿಕ್ ಬಸ್‌ಗಳ ಸಂಚಾರ ಹೆಚ್ಚಿದೆ. ಹಲವು ಮಾರ್ಗದಲ್ಲಿ ನಗರದಲ್ಲಿ ಈ ಮಾದರಿ ಬಸ್‌ಗಳು ಸಂಚರಿಸುತ್ತಿವೆ. ಹೊಸ ಬಸ್‌ಗಳನ್ನು ಸಹ ಖರೀದಿ ಮಾಡಲಾಗುತ್ತಿದೆ. ಈ ಕುರಿತು ಸಚಿವರು ಮಾಹಿತಿ ನೀಡಿದ್ದಾರೆ. ಕರ್ನಾಟಕ ವಿಧಾನ ಪರಿಷತ್‌ನಲ್ಲಿ ಹೆಚ್. ಎಸ್. ಗೋಪಿನಾಥ್ ಈ ಕುರಿತು ಕೇಳಿದ್ದ ಪ್ರಶ್ನೆಗೆ ಸಾರಿಗೆ ಮತ್ತು ಮುಜರಾಯಿ ಖಾತೆ ಸಚಿವರು ಉತ್ತರವನ್ನು ನೀಡಿದ್ದಾರೆ. ಸದಸ್ಯರು ಸಾರಿಗೆ ಇಲಾಖೆಯಲ್ಲಿ ಎಲೆಕ್ಟ್ರಾನಿಕ್ ಬಸ್‌ಗಳ ಬಳಕೆಯನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು..? ಎಂದು ಪ್ರಶ್ನಿಸಿದ್ದರು.



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ**
**ರಾಮೋಹಳ್ಳಿ**

### ಕರಣಧರ್ಮಂಗಳ ಬೆರಕೆಯಾತ್ಮಂಗಿಲ್ಲ

ನಿಜಗುಣರ ಪರಮಾನುಭವ ಬೋಧೆಯ ಮಾತು. ಕರಣ = ಅಂತಃಕರಣ = ದೇಹದೊಳಗಿನ ಸೂಕ್ಷ್ಮ ಪ್ರಧಾನ ವ್ಯವಹಾರ ಸಾಧನ. ಅದು ಮನಸ್ಸು ಬುದ್ಧಿ ಚಿತ್ತ ಅಹಂಕಾರ ಜ್ಞಾತೃ ಎಂದು ಐದು ವಿಧ. ನೆನಪು ಮಾಡಿಕೊಳ್ಳುವುದು, ಸಂಕಲ್ಪಿಸುವುದು ಹೀಗೆಂದುಕೊಳ್ಳುವುದು, ವಿಕಲ್ಪಿಸುವುದು ಸಂಕಲ್ಪಿಸಿದ್ದರ ವಿರುದ್ಧ ಭಾವಿಸುವುದು, ನಿರ್ಣಯದ ಹೊರತಾಗಿ ವಿಭಿನ್ನ ಭಾವಿಸುವುದು ಮನೋಧರ್ಮ. ಇದು ಆತ್ಮನದ್ದಲ್ಲ. ಸಂಶಯ ತೋರಿದಕಡೆಗೆಲ್ಲ ನಿಶ್ಚಯಿಸುವುದು ಬುದ್ಧಿಯ ಧರ್ಮ. ಇದು ಆತ್ಮನದ್ದಲ್ಲ. ಶರೀರ ಮುಂತಾದವುಗಳಲ್ಲಿ ನಾನು, ಇಂದ್ರಿಯ, ಗಂಡ ಹೆಂಡತಿ ಮಕ್ಕಳು ಮನೆ ಹೊಲ ಚಿನ್ನ ಧನಾದಿಗಳಲ್ಲಿ ತೋರುವ ನನ್ನದು ಎಂಬ ಭಾವ ಅಹಂಕಾರದ ಧರ್ಮ, ಹೊರತು ಆತ್ಮನದ್ದಲ್ಲ. ಪಾರಮಾರ್ಥಿಕ ದೃಷ್ಟಿಯಿಂದ ತನಗೆ ಹುಟ್ಟಿಲ್ಲದಿರುವುದರಿಂದ, ಪಾರಮಾರ್ಥಿಕವಲ್ಲದ ಅಂತಃಕರಣಗಳ ಧರ್ಮ ಆತ್ಮನದ್ದಲ್ಲ. ಮನಸ್ಸು ಬುದ್ಧಿ ಅಹಂಕಾರಗಳು ತಿಳಿದುದನ್ನು ನೆನಪಿನ ರೂಪದಲ್ಲಿ ಹಿಡಿದಿಟ್ಟುಕೊಳ್ಳುವುದು, ಮತ್ತೆ ಅದೇ ಅಂಥದ್ದೇ ನಡೆದಾಗ ಕಂಡಾಗ ತನ್ನಲ್ಲಿದ್ದುದನ್ನು ತೆರೆದಿಟ್ಟು ನೆನಪಿಸುವುದು ಚಿತ್ತಿನ ಧರ್ಮ, ಹೊರತು ಸಾಕ್ಷಿಯಾದ ಆತ್ಮನದ್ದಲ್ಲ. ತಾನು ತಿಳಿದವ ಅಲ್ಪ ತಿಳಿದವ ಎಲ್ಲ ತಿಳಿದವ, ತಿಳಿಯದವ ಎಂಬುದು ಜ್ಞಾತೃವಿನ ಧರ್ಮ ಹೊರತು ಆತ್ಮನದ್ದಲ್ಲ. ಹೀಗಿದ್ದಾಗ್ಯೂ, ನಾನು ತೀರ್ಮಾನಿಸುತ್ತೇನೆ ಇತ್ಯಾದಿಯಾಗಿ ಇವುಗಳ ಧರ್ಮಗಳನ್ನು ಆತ್ಮನಲ್ಲಿ ಆರೋಪಿಸಿ ವ್ಯವಹರಿಸುವುದು ವಾಸ್ತವವಲ್ಲ.

# ಬಿಜೆಪಿ-ಜೆಡಿಎಸ್ 10 ದಿನಗಳ ಪಾದಯಾತ್ರೆ

## ಸಿಎಂ ರಾಜೀನಾಮೆಗೆ ಆಗ್ರಹ, ಕರ್ನಾಟಕ ಬಿಜೆಪಿ ಅಧ್ಯಕ್ಷ ಬಿ. ವೈ. ವಿಜಯೇಂದ್ರ ನೇತೃತ್ವದಲ್ಲಿ ಸಭೆ


• **ಉದಯವಾಹಿನಿ, ಬೆಂಗಳೂರು**

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಹಗರಣ ದ ಸದ್ದು ರಾಜ್ಯದಲ್ಲಿ ಜೋರಾಗಿದೆ. ಈ ವಿಚಾರದಲ್ಲಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರತಿಪಕ್ಷಗಳಾದ ಬಿಜೆಪಿ-ಜೆಡಿಎಸ್ ಹೋರಾಟವನ್ನು ನಡೆಸುತ್ತಿವೆ. ಮುಡಾ ಹಗರಣದಲ್ಲಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ-ಜೆಡಿಎಸ್ ಬೆಂಗಳೂರಿನಿಂದ ಮೈಸೂರಿಗೆ 10 ದಿನಗಳ ಪಾದಯಾತ್ರೆ ಮಾಡುವುದಾಗಿ ಘೋಷಣೆ ಮಾಡಿವೆ. ಕರ್ನಾಟಕ ಬಿಜೆಪಿ ಅಧ್ಯಕ್ಷ ಬಿ. ವೈ. ವಿಜಯೇಂದ್ರ ನೇತೃತ್ವ ದಲ್ಲಿ ಭಾನುವಾರ ನಡೆದ ಸಭೆಯಲ್ಲಿ ಪಾದಯಾತ್ರೆಯ ಅಂತಿಮ ಚಿತ್ರಣ ರೂಪಿಸಲಾಗುತ್ತದೆ.ಮತ್ತೊಂದು ಕಡೆ ಪ್ರತಿಪಕ್ಷಗಳ ಈ ನಡೆಗೆ ಎದಿರೇಟು ಕೊಡಲುಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಬಲಿಗರು ಸಿದ್ಧವಾಗಿದ್ದಾರೆ. ಅವರು ಸಹ ಪಾದಯಾತ್ರೆ ಮಾಡುವ ನಿರೀಕ್ಷೆ ಇದೆ. ಅಲ್ಲದೇ ಸಹಕಾರ ಸಚಿವ ಕೆ. ಎನ್. ರಾಜಣ್ಣ ರಾಜ್ಯಾದ್ಯಂತ ಎನ್‌ಡಿಎ ವಿರುದ್ಧ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಹೇಳಿದ್ದಾರೆ.

**ಬಿಜೆಪಿ-ಜೆಡಿಎಸ್ ಹೋರಾಟ**

**ಪಾದಯಾತ್ರೆ ರಾಜಕೀಯ:** ತುಮಕೂರಿನಲ್ಲಿ ಮಾತನಾಡಿದ ಸಚಿವ ಕೆ. ಎನ್. ರಾಜಣ್ಣ, ಬಿಜೆಪಿ-ಜೆಡಿಎಸ್ ಸಿದ್ದರಾಮಯ್ಯ ವಿರುದ್ಧ ಇಲ್ಲದ ಆರೋಪಗಳನ್ನು ಮಾಡಿಕೊಂಡು ಷಡ್ಯಂತ್ರ ರೂಪಿಸುತ್ತಿವೆ. ಮುಡಾದಲ್ಲಿ ನಡೆಯದ ಹಗರಣ ಮುಂದಿಟ್ಟುಕೊಂಡು ದೊಡ್ಡ ವಿಷಯ ಮಾಡುತ್ತಿವೆ ಎಂದು ಆರೋಪಿಸಿದರು.

ಹಿಂದುಳಿದ ವರ್ಗದ ನಾಯಕ ಮುಖ್ಯಮಂತ್ರಿ ಖುರ್ಚಿಯಲ್ಲಿ ಇರಬಾರದು ಎಂದು ಈ ಮಾದರಿ ಷಡ್ಯಂತ್ರ ರೂಪಿಸಲಾಗುತ್ತಿದೆ. ಇದರಲ್ಲಿ ಕೇಂದ್ರ ಸರ್ಕಾರದ ಹಸ್ತಕ್ಷೇಪವೂ ಇದೆ. ಇದು ಅಹಿಂದ ವರ್ಗಕ್ಕೆ ಮಾಡುತ್ತಿರುವ ಅಪಮಾನವಾಗಿದೆ ಎಂದು ಕೆ. ಎನ್. ರಾಜಣ್ಣ ಹೇಳಿದರು.ಮತ್ತೊಂದು ಕಡೆ ಮೈಸೂರಿನಲ್ಲಿ ಮಾತನಾಡಿದ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ. ಎಸ್. ಶಿವರಾಮು ಬಿಜೆಪಿ ಅವಧಿಯಲ್ಲಿ ನಡೆದ ಹಗರಣದ ಬಗ್ಗೆ ಉತ್ತರ ಕೊಡಿ ಎಂಬ ಪೋಸ್ಟ್ ಕಾರ್ಡ್ ಅಭಿಯಾನ ಆರಂಭಿಸಲಾಗಿದೆ ಎಂದು ಹೇಳಿದರು.ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಸಹ ಬಿಜೆಪಿ- ಜೆಡಿಎಸ್ ಪಾದಯಾತ್ರೆ ಬಗ್ಗೆ ಪ್ರತಿಕ್ರಿಯೆ ನೀಡಿದ್ದು, ಬಿಜೆಪಿ ಮಾಡಿರುವ ಹಗರಣದ ಬಗ್ಗೆ ಪಾದಯಾತ್ರೆಯ ಸಮಯದಲ್ಲಿ ಎಲ್ಲಾ ಮಾಹಿತಿಯನ್ನು ಬಿಡುಗಡೆ ಮಾಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಶಿವಮೊಗ್ಗದಲ್ಲಿ ಮಾತನಾಡಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಪಾದಯಾತ್ರೆ ಮಾಡುತ್ತಿರುವ ಬಿಜೆಪಿಯವರಿಗೆ ನಾಚಿಕೆಯಾಗಬೇಕು.



**ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ನಡೆಸುತ್ತೇವೆ ಎಂದು ಘೋಷಣೆ ಮಾಡಲಾಗಿದೆ. ಕರ್ನಾಟಕ ಬಿಜೆಪಿ ಅಧ್ಯಕ್ಷ ಬಿ. ವೈ. ವಿಜಯೇಂದ್ರ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ. ಎಸ್. ಯಡಿಯೂರಪ್ಪ, ಕೇಂದ್ರ ಸಚಿವ ಎಚ್. ಡಿ. ಕುಮಾರಸ್ವಾಮಿ ನೇತೃತ್ವದಲ್ಲಿ ಭಾನುವಾರ ನಡೆದ ಸಭೆಯಲ್ಲಿ ಪಾದಯಾತ್ರೆಯ ದಿನಾಂಕ ಘೋಷಣೆಯಾಗುವ ನಿರೀಕ್ಷೆ ಇದೆ.**

ಪಾದಯಾತ್ರೆ ಮಾಡಿದರೆ ಅವರದೇ ಹಗರಣಗಳು ಬೇಕಾದಷ್ಟಿವೆ. ಅವರ ಹಗರಣಗಳೇ ಹೊರಬರುತ್ತವೆ. ಸದನದಲ್ಲಿ ಬಿಲ್ ಪಾಸು ಮಾಡುವ ವೇಳೆ ಬಿಜೆಪಿ ಶಾಸಕರು ಕೂಗುತ್ತಿದ್ದರು.

**ರಾಮನಗರದಲ್ಲಿ ಪಾದಯಾತ್ರೆಯ ಬಗ್ಗೆ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸಭೆಯನ್ನು ನಡೆಸಿದರು. ಬಿಜೆಪಿ ನಡೆಸುವ ಪಾದಯಾತ್ರೆಗೆ ಸಂಪೂರ್ಣ ಬೆಂಬಲ ನೀಡಲಾಗುತ್ತದೆ ಎಂದು ಹೇಳಿದರು.**

ಸದನದಲ್ಲಿ ಹೇಗಿರಬೇಕೆಂಬುದೇ ಅವರಿಗೆ ಗೊತ್ತಿಲ್ಲ ಎಂದು ಟೀಕಿಸಿದರು. ವಿಧಾನಮಂಡಲದ ಮುಂಗಾರು ಅಧಿವೇಶನದಲ್ಲಿ ಮುಡಾ ಹಗರಣದ ಕುರಿತು ಚರ್ಚೆಗೆ ಅವಕಾಶ ನೀಡಬೇಕು ಎಂದು ಬಿಜೆಪಿ-ಜೆಡಿಎಸ್ ಸದಸ್ಯರು ಪಟ್ಟು ಹಿಡಿದರು. ಆದರೆ ಅವಕಾಶ ಸಿಗದ ಕಾರಣ ಉಭಯ ಸದನದಲ್ಲಿ ಅಹೋರಾತ್ರಿ ಧರಣಿಯನ್ನು ನಡೆಸಿದರು.

ಆದರೆ ಸರ್ಕಾರ ವಿರೋಧ ಪಕ್ಷದ ಹೋರಾಟಕ್ಕೆ ಮಣಿಯಲಿಲ್ಲ. ಅಧಿವೇಶನವನ್ನು ಮುಂದೂಡಿಕೆ ಮಾಡಲಾಯಿತು.ಒಟ್ಟಿನಲ್ಲಿ ಕರ್ನಾಟಕ 2023ರ ವಿಧಾನಸಭೆ ಚುನಾವಣೆಗೂ ಮೊದಲು ಮೇಕೆದಾಟು ಯೋಜನೆಗೆ ಆಗ್ರಹಿಸಿ ಕಾಂಗ್ರೆಸ್ ನಾಯಕರು ನಡೆಸಿದ ಪಾದಯಾತ್ರೆ, ಬಳಿಕ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆದ ಭಾರತ್ ಜೋಡೋ ಪಾದಯಾತ್ರೆ ನೋಡಿತ್ತು. ಈಗ ಪ್ರತಿಪಕ್ಷಗಳಾದ ಬಿಜೆಪಿ-ಜೆಡಿಎಸ್ ಪಾದಯಾತ್ರೆ ನಡೆಯಲಿದೆ.

## ರಾಜ್ಯದಲ್ಲಿ ಭಾರೀ ಮಳೆ : ಈ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷನೆ

• **ಉದಯವಾಹಿನಿ, ಬೆಂಗಳೂರು**

ಕರಾವಳಿ, ಮಲೆನಾಡು ಸೇರಿದಂತೆ ರಾಜ್ಯದಲ್ಲಿ ಇನ್ನೂ ಎರಡು ದಿನ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಹಲವು ಜಿಲ್ಲೆಗಳಿಗೆ ಆರೆಂಜ್, ಯೆಲ್ಲೋ ಅಲರ್ಟ್ ಘೋಷಣೆ ನೀಡಲಾಗಿದೆ. ಉಡುಪಿ, ದಕ್ಷಿಣ ಕನ್ನಡ ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಜಿಲ್ಲೆಗಳಲ್ಲಿ ಭಾರೀ ಮಳೆಯಾಗುತ್ತಿದ್ದು, ಆರೆಂಜ್ ಅಲರ್ಟ್ ಎಚ್ಚರಿಕೆ ನೀಡಲಾಗಿದೆ.ಜು.29ರಿಂದ ಮುಂದಿನ 3 ದಿನಕ್ಕೆ ಈ ಎಲ್ಲಾ 5 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಮುನ್ಸೂಚನೆ ನೀಡಲಾಗಿದೆ. ಜು.30ರಿಂದ ದಕ್ಷಿಣ ಒಳನಾಡಿನಲ್ಲಿ ಜು.31ರಿಂದ ಉತ್ತರ ಒಳನಾಡಿನಲ್ಲಿ ಸ್ವಲ್ಪ ಪ್ರಮಾಣದಲ್ಲಿ ಮಳೆಯಾಗಲಿದೆ.ಉತ್ತರ ಒಳನಾಡಿನ ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ ಹಾಗೂ ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿಯಲ್ಲಿ ಚದುರಿದಂತೆ ಹಗುರದಿಂದ ಕೂಡಿದ ಮಳೆಯಾಗುವ ಸಾಧ್ಯತೆಯಿದೆ. ಯಾದಗಿರಿ, ವಿಜಯಪುರ, ಕಲಬುರಗಿ, ಬೀದರ್‌ಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ವಿಜಯನಗರ, ತುಮಕೂರು, ಮೈಸೂರು, ಮಂಡ್ಯ, ಕೋಲಾರ, ದಾವಣಗೆರೆ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಚಾಮರಾಜನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರದಲ್ಲಿ ಮಳೆಯಾಗಲಿದೆ.

## ಪ್ರತ್ಯೇಕ ಪಾದಯಾತ್ರೆಗೆ ಮುಂದಾದ ಜಾರಕಿಹೊಳಿ

• **ಉದಯವಾಹಿನಿ, ಬೆಂಗಳೂರು**


ಉದಯವಾಹಿನಿ ಚಿತ್ರ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಂತಹ ಅಕ್ರಮದ ವಿಚಾರಕ್ಕೆ ಸಂಬಂಧಿಸಿದಂತೆ ಇದೀಗ ಬಿಜೆಪಿ ನಾಯಕರು ಬಿಜೆಪಿಯ ರಾಜ್ಯಾಧ್ಯಕ್ಷ ಬಿ ವೈ ವಿಜಯೇಂದ್ರ ನೇತ್ರತ್ವದಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ಹಮ್ಮಿಕೊಂಡಿದ್ದಾರೆ ಆದರೆ ಇನ್ನೊಂದು ಕಡೆ ರಮೇಶ್ ಜಾರಕಿಹೊಳಿ ಮತ್ತು ಬಸನಗೌಡ ಪಾಟೀಲ್ ಯತ್ನಾಳ್ ಪ್ರತ್ಯೇಕ ಪಾದಾಯಾತ್ರೆ ಮಾಡಲು ನಿರ್ಧರಿಸಿದ್ದು ಅಚ್ಚರಿಗೆ ಕಾರಣವಾಗಿದೆ.

ಹೌದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಂತಹ ಅಕ್ರಮದ ವಿರುದ್ಧ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಲು ರಾಜ್ಯ ಬಿಜೆಪಿ ನಾಯಕರು ನಾಳೆ ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ಹಮ್ಮಿಕೊಂಡಿದ್ದಾರೆ.

ಆದರೆ ಸ್ವಪಕ್ಷದಲ್ಲೇ ಅಸಮಾಧಾನ ಮುಗಿಲದಿದ್ದು ಇದೀಗ ಶಾಸಕರಾದ ರಮೇಶ್ ಜಾರಕಿಹೊಳಿ ಬಸವನಗೌಡ ಪಾಟೀಲ ಅವರು ಪ್ರತ್ಯೇಕ ಪಾದಯಾತ್ರೆಗೆ ಮುಂದಾಗಿದ್ದಾರೆ. ಗೋಕಾಕ್‌ನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತಾಡಿದ ಅವರು, ಮುಡಾ ಹಗರಣಕ್ಕಿಂತ ವಾಲ್ಮೀಕಿ ನಿಗಮದ ಹಗರಣ ದೊಡ್ಡದು. ವಾಲ್ಮೀಕಿ ನಿಗಮದ ಹಗರಣ, ಎಸ್‌ಸಿಎಸ್‌ಪಿ, ಟಿಎಸ್‌ಪಿ ಹಣವನ್ನು ಗ್ಯಾರಂಟಿಗೆ ಬಳಸಿದ್ದಾರೆ.

ಇದನ್ನು ಖಂಡಿಸಿ ಕೂಡಲಸಂಗಮದಿಂದ ಬಳ್ಳಾರಿವರೆಗೆ ಪಾದಯಾತ್ರೆಗೆ ಸಿದ್ಧರಿದ್ದೇವೆ. ಪಾದಯಾತ್ರೆ ಬಗ್ಗೆ ಹೈಕಮಾಂಡ್ ನಿಂದ ಅನುಮತಿ ಕೇಳಿದ್ದೇವೆ ಎಂದು ಶಾಸಕ ರಮೇಶ್ ಜಾರಕಿಹೊಳಿ ಹೇಳಿದರು. ವಾಲ್ಮೀಕಿ ಸಮುದಾಯಕ್ಕೆ ರಾಜ್ಯ ಸರ್ಕಾರ ಮೋಸ ಮಾಡಿದೆ.

ಬಿಜೆಪಿ ಹೈಕಮಾಂಡ್ ಒಪ್ಪಿಗೆ ನೀಡಿದರೇ ನಾನು, ಬಸನಗೌಡ ಪಾಟೀಲ್ ಯತ್ನಾಳ್ ಪಾದಯಾತ್ರೆ ಮಾಡಲು ಸಿದ್ದರಿದ್ದೇವೆ. ಸದನದಲ್ಲಿ ಗಲಾಟೆ ಮಾಡಿದರೆ ಸಾಲಲ್ಲ, ಪಾದಯಾತ್ರೆ ಮಾಡಬೇಕು. ಬಳ್ಳಾರಿ ಪಾದ ಯಾತ್ರೆಗೆ ಇನ್ನೂ ದಿನಾಂಕ ನಿಗದಿಯಾಗಿಲ್ಲ. ಪಾದಯಾತ್ರೆ ಬಗ್ಗೆ ರಾಜ್ಯ ಬಿಜೆಪಿ ಅಧ್ಯಕ್ಷರ ಜೊತೆ ಮಾತನಾಡಲ್ಲ. ನಾನೇನಿದ್ದರೂ ಹೈಕಮಾಂಡ್ ಜೊತೆ ಮಾತನಾಡ್ತೇನೆ. ಪಾದಯಾತ್ರೆಗೆ ರಾಜ್ಯ ಬಿಜೆಪಿ ಅಧ್ಯಕ್ಷರು ಒಪ್ಪಿಲ್ಲ, ಒಪ್ಪುವುದೂ ಇಲ್ಲ ಎಂದು ಕಿಡಿ ಕಾರಿದರು.

## ಮೂಕರ ಭಾಷೆ ಗೇಲಿ ಮಾಡಿ ಅಪಹಾಸ್ಯ: ಅರೆಸ್ಟ್

• **ಉದಯವಾಹಿನಿ, ಬೆಂಗಳೂರು**



ಕಿವುಡ, ಮೂಕರ ಬಗ್ಗೆ ಅವಹೇಳನಕಾರಿ ರೀಲಗಳನ್ನು ಇನ್ಸ್ಟಾಗ್ರಾಮನಲ್ಲಿ ಅಪ್ಲೋಡ್ ಮಾಡಿದ ಯೂಟ್ಯೂಬರ್ ಮತ್ತು ರೇಡಿಯೋ ಜಾಕಿಯನ್ನು ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದಾರೆ. ಬಂಧಿತರನ್ನು ಉಳ್ಳಾಲ ಉಪನಗರ ನಿವಾಸಿ ರೋಹನ್ ಕಾರ್ಯಪ್ಪ (29) ಮತ್ತು ಎಚ್ ಎಎಲ್ ನಿವಾಸಿ ಶಯಾನ್ ಭಟ್ಟಾಚಾರ್ಯ (32) ಎಂದು ಗುರುತಿಸಲಾಗಿದೆ. ಮಡಿಕೇರಿ ಮೂಲದ ಕಾರಿಯಪ್ಪ ಯೂಟ್ಯೂಬರ್ ಆಗಿದ್ದು, ಈ ಹಿಂದೆ ರೇಡಿಯೋ ಜಾಕಿಯಾಗಿ ಕೆಲಸ ಮಾಡಿದ್ದರು. ಪಶ್ಚಿಮ ಬಂಗಾಳ ಮೂಲದ ಭಟ್ಟಾಚಾರ್ಯ ರೇಡಿಯೋ ಜಾಕಿ. ಅವರು ಒಂದು ರೀಲ್ ಅನ್ನು ಮಾಡಿದ್ದರು, ಅದರಲ್ಲಿ ಭಟ್ಟಾಚಾರ್ಯ ರಾಜಕಾರಣಿಯ ಪಾತ್ರವನ್ನು ಕಾರಿಯಪ್ಪ ಭಾಷಾಂತರಕಾರನ ಪಾತ್ರವನ್ನು ನಿರ್ವಹಿಸಿದ್ದರು. ವೀಡಿಯೊದಲ್ಲಿ, ಕಾರ್ಯಪ್ಪ, ಭಟ್ಟಾಚಾರ್ಯ ಅವರ ಸಂದೇಶವನ್ನು ವ್ಯಾಖ್ಯಾನಿಸುವಾಗ, ಅವರ ಖಾಸಗಿ ಭಾಗವನ್ನು ಸೂಚಿಸುವ ಅಶ್ಲೀಲ ಚಿಹ್ನೆಗಳನ್ನು ಮಾಡಿದ್ದಾರೆ. ಒಂದು ನಿಮಿಷ ಐದು ಸೆಕೆಂಡುಗಳ ರೀಲ್ ಅನ್ನು ಜೂನ್ 20 ರಂದು @rohancariyappa ಎಂಬ ಇನ್ಸ್ಟಾಗ್ರಾಮ್ ಪ್ರೊಫೈಲ್ನಲ್ಲಿ ಅಪ್ಲೋಡ್ ಮಾಡಲಾಗಿದೆ. ರೀಲ್ ಅನ್ನು ಹೆಚ್ಚಾಗಿ ಕಿವುಡ ಮತ್ತು ಮೂಕ ಜನರು ಹಂಚಿಕೊಂಡಿದ್ದಾರೆ. ದೆಹಲಿಯ ಸಂಸ್ಥೆಯೊಂದು ರಾಷ್ಟ್ರ ರಾಜಧಾನಿಯ ಪೊಲೀಸರನ್ನು ಸಂಪರ್ಕಿಸಿದ್ದು, ರೀಲ್ ತಯಾರಿಸಿ ಅಪ್ಲೋಡ್ ಮಾಡಿದ ಬೆಂಗಳೂರಿನ ಪೊಲೀಸರಿಗೆ ದೂರು ನೀಡುವಂತೆ ತಿಳಿಸಿದೆ.

ಈ ಬಗ್ಗೆ ಜಾಗೃತರಾದ ಶಂಕರ್, ಇತರರು ಪೊಲೀಸ್ ಆಯುಕ್ತ ಬಿ.ದಯಾನಂದ ಅವರನ್ನು ಸಂಪರ್ಕಿಸಿ ಇಬ್ಬರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿದರು. ಐಟಿ ಕಾಯ್ದೆಯಡಿ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಇಬ್ಬರನ್ನು ಬಂಧಿಸಲಾಗಿದೆ.ಕೆಲವು ದಿನಗಳ ಹಿಂದೆ ಕಾರಿಯಪ್ಪ ಅವರು ತಮ್ಮ ಖಾತೆಯಿಂದ ರೀಲ್ ಅನ್ನು ಅಳಿಸಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಶ್ಲೀಲ ರೀಲ್ ಅನ್ನು ಅಪ್ಲೋಡ್ ಮಾಡುವ ಮೂಲಕ ಇವರಿಬ್ಬರು ಕಿವುಡ, ಮೂಕ ವ್ಯಕ್ತಿಗಳ ಭಾವನೆಗಳನ್ನು ನೋಯಿಸಿದ್ದಾರೆ. ನಗರ ಪೊಲೀಸರ ತ್ವರಿತ ಕ್ರಮವನ್ನು ನಾವು ಶ್ಲಾಘಿಸುತ್ತೇವೆ ಎಂದಿದ್ದಾರೆ.

## ಅಪಮಾನ, ಆಸ್ತಿ-ಪಾಸ್ತಿ ಹಾನಿಗೆ ಶಿಕ್ಷೆಯ ಪ್ರಮಾಣ ಹೆಚ್ಚಳ: ಭಾರೀ ದಂಡ

• **ಉದಯವಾಹಿನಿ, ಬೆಂಗಳೂರು**

ರಾಜ್ಯ ಸರ್ಕಾರದಿಂದ ವೈದ್ಯಕೀಯ ಸಿಬ್ಬಂದಿಗಳ ಶ್ರೇಯೋಭಿವೃದ್ಧಿಗೆ ಬದ್ಧತೆಯ ನಡೆ ತೋರಿಸಿದೆ. ಅಲ್ಲದೇ ವೃತ್ತಿ ನಿರತ ವೈದ್ಯರು, ವೈದ್ಯಕೀಯ ಸಿಬ್ಬಂದಿ ಮೇಲಿನ ಹಿಂಸಾಚಾರ ತಡೆಗೆ ಮಸೂದೆ ಅಂಗೀಕರಿಸಿದೆ. ಹೀಗಾಗಿ ವೃತ್ತಿನಿರತ ವೈದ್ಯರು, ವೈದ್ಯಕೀಯ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ರೇ ಶಿಕ್ಷೆ ಫಿಕ್ಸ್ ಆದ್ರೇ, ಭಾರೀ ದಂಡವನ್ನೂ ವಿಧಿಸಲಾಗುತ್ತದೆ. ಹೌದು. ವೃತ್ತಿಪರ ವೈದ್ಯರು, ವೈದ್ಯಕೀಯ ಸಿಬ್ಬಂದಿ ಮೇಲೆ ಹಿಂಸಾಚಾರ, ಹಲ್ಲೆ, ಅಪಮಾನ ಅಥವಾ ಸಾಮಾಜಿಕ ಜಾಲತಾಣಗಳ ಮೂಲಕ ನಿಂದನೆ ಮಾಡಿದ್ದಲ್ಲಿ 3 ರಿಂದ 7 ವರ್ಷಗಳವರೆಗೆ ಜೈಲು ಶಿಕ್ಷೆ, ರೂ.25 ಸಾವಿರದಿಂದ ರೂ.2 ಲಕ್ಷದವರೆಗೆ ದಂಡ ವಿಧಿಸಲು ಅವಕಾಶ ಕಲ್ಪಿಸುವ ವೃತ್ತಿಪರ ವೈದ್ಯರಿಗೆ ನೋಂದಣಿ ಕಡ್ಡಾಯ ಮಾಡುವ ಮಹತ್ವದ ಮಸೂದೆಯನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಅಂಗೀಕರಿಸಲಾಗಿದೆ.ರಾಜ್ಯದಲ್ಲಿ ನಕಲಿ ವೈದ್ಯರ ಹಾವಳಿ ಹೆಚ್ಚಾಗಿದ್ದು, ಇದನ್ನು ತಡೆಗಟ್ಟಲು ಈಗಾಗಲೇ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದರೊಂದಿಗೆ ನಕಲಿ ವೈದ್ಯ ವೃತ್ತಿಯಲ್ಲಿ ತೊಡಗಿರುವವರಿಗೆ ರೂ.10 ಸಾವಿರದಿಂದ ರೂ.1 ಲಕ್ಷದವರೆಗೆ ದಂಡ ವಿಧಿಸಲಾಗುವುದು. ಈ ಮೂಲಕ ವೈದ್ಯರು, ವೈದ್ಯಕೀಯ ಸಿಬ್ಬಂದಿಗಳ ಶ್ರೇಯೋಭಿವೃದ್ಧಿಗೆ ಸರ್ಕಾರ ಬದ್ಧತೆಯನ್ನು ತೋರಿದೆ.

## 250 ಮೀಟರ್ ಸ್ಕೈಡೆಕ್ ಸ್ಥಳ ಅಂತಿಮಗೊಳಿಸಿದ ಡಿಕೆಶಿ

• **ಉದಯವಾಹಿನಿ, ಬೆಂಗಳೂರು**


ಉದಯವಾಹಿನಿ ಚಿತ್ರ

ನೈಸ್ ರಸ್ತೆ ಬಳಿ 250 ಮೀಟರ್ ಉದ್ದದ ಸ್ಕೈಡೆಕ್ ನಿರ್ಮಿಸಲು ವಿರೋಧ ಪಕ್ಷದ ನಾಯಕರು ಮತ್ತು ಬಿಜೆಪಿ ಶಾಸಕರು ಒಪ್ಪಿಗೆ ಸೂಚಿಸಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಸ್ಕೈಡೆಕ್ ಗೆ ಸುಮಾರು 25 ಎಕರೆಗಳು ಬೇಕಾಗುತ್ತವೆ. ವಿಧಾನಸೌಧದಲ್ಲಿ ಬಿಜೆಪಿ ಶಾಸಕರು ಸೇರಿದಂತೆ ಬೆಂಗಳೂರಿನ ಚುನಾಯಿತ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್, ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಸೇರಿದಂತೆ ಬೆಂಗಳೂರಿನ ಎಲ್ಲಾ ಚುನಾಯಿತ ಪ್ರತಿನಿಧಿಗಳು ಒಪ್ಪಿಗೆ ಸೂಚಿಸಿದ್ದಾರೆ ಎಂದು ಹೇಳಿದರು.

ಪೂರ್ವ ಬೆಂಗಳೂರಿನ ಬೈಯಪ್ಪನಹಳ್ಳಿಯಲ್ಲಿ ಎನ್ಜಿಇಎಫ್ ಭೂಮಿ, ಯಶವಂತಪುರ ಬಳಿಯ ಶ್ರೀಗಂಧದ ಸಾಬೂನು ಕಾರ್ಖಾನೆ, ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್ ಮತ್ತು 2022 ರಲ್ಲಿ ಪ್ರಧಾನಿ ನರೇಂದ್ರ ಮೋದಿಯವರಿಗಾಗಿ ಹೊಸ ಹೆಲಿಪ್ಯಾಡ್ ನಿರ್ಮಿಸಲಾದ ಕೊಮ್ಮಘಟ್ಟದಲ್ಲಿ ಇತರ ಸಂಭಾವ್ಯ ತಾಣಗಳು ಸೇರಿವೆ ಎಂದು ಮೂಲಗಳು ತಿಳಿಸಿವೆ. ಆದರೆ, ಬೆಂಗಳೂರಿನ ಹಳೆಯ ವಿಮಾನ ನಿಲ್ದಾಣಕ್ಕೆ ಹತ್ತಿರವಿರುವ ಕಾರಣ ಎನ್ಜಿಇಎಫ್ ಭೂಮಿಯನ್ನು ತಳ್ಳಿಹಾಕಲಾಯಿತು.

**ಈ ಭೂಮಿಯನ್ನು ಪ್ರಸ್ತುತ ನೈಸ್ ರಸ್ತೆಯ ಪ್ರವರ್ತಕರು ಹೊಂದಿದ್ದಾರೆ. ಸುಪ್ರೀಂ ಕೋರ್ಟ್ ಆದೇಶದಂತೆ ನೈಸ್ ಸುಮಾರು 200 ಎಕರೆ ಭೂಮಿಯನ್ನು ಸರ್ಕಾರಕ್ಕೆ ವರ್ಗಾಯಿಸಬೇಕಾಗಿದೆ, ಆದ್ದರಿಂದ ನೈಸ್ ರಸ್ತೆ ನಿವೇಶನವನ್ನು ಅಂತಿಮಗೊಳಿಸಲಾಗಿದೆ ಎಂದು ಬೆಂಗಳೂರು ಅಭಿವೃದ್ಧಿ ಖಾತೆಯನ್ನು ಹೊಂದಿರುವ ಶಿವಕುಮಾರ್ ಹೇಳಿದರು.**

## ಕಾಂಗ್ರೆಸ್ ಕಾರ್ಯಕರ್ತರು ಚೊಂಬು ಪ್ರದರ್ಶಿಸಿ ಪ್ರತಿಭಟನೆ

• **ಉದಯವಾಹಿನಿ, ದೇವನಹಳ್ಳಿ**


ಉದಯವಾಹಿನಿ ಚಿತ್ರ

ಕೇಂದ್ರ ಸರ್ಕಾರ ಈಚೆಗೆ ಮಂಡಿಸಿ ಬಜೆಟ್ ನಲ್ಲಿ ರಾಜ್ಯಕ್ಕೆ ಯಾವುದೇ ಯೋಜನೆ ಮತ್ತು ಅನುದಾನ ನೀಡದೆ ಮೋಸ ಮಾಡಿದೆ ಎಂದು ಆರೋಪಿಸಿ, ಚೊಂಬು ಪ್ರದರ್ಶಿಸಿ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಪಟ್ಟಣದ ಪ್ರವಾಸಿಮಂದಿರದ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್. ಮುನಿಯಪ್ಪ, ಕೇಂದ್ರದ ಎನ್‌ಡಿಎ ಸರ್ಕಾರ ಬಜೆಟ್‌ನಲ್ಲಿ ಮಿತ್ರ ಪಕ್ಷಕ್ಕೆ ಸಿಂಹಪಾಲು ನೀಡಿ, ಎನ್‌ಡಿಎಯೇತರ ಸರ್ಕಾರ ಇರುವ ಸರ್ಕಾರಗಳಿಗೆ ಯಾವುದೇ ಹೊಸ ಯೋಜನೆ ನೀಡಿದೆ, ಚೊಂಬು ಕೊಟ್ಟಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದಿಂದ ಆಯ್ಕೆಯಾಗಿರುವ ಬಿಜೆಪಿಯ 19 ಸಂಸದರು ಈ ಅನ್ಯಾಯವನ್ನು ಪ್ರಶ್ನಿಸುವ ಧೈರ್ಯ ಮಾಡುತ್ತಿಲ್ಲ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಮುಡಾ ಹಗರಣ ಆರೋಪ ಮಾಡುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ದೊಡ್ಡಬಳ್ಳಾಪುರ ಮಾಜಿ ಶಾಸಕ ವೆಂಕಟರಮಣಯ್ಯ, ಕೆಪಿಸಿಸಿ ಕಾರ್ಯದರ್ಶಿ ವಿ.ಮಂಜುನಾಥ್, ಜಿಲ್ಲಾ ಕಾಂಗ್ರೆಸ್ ಘಟಕದ ಅಧ್ಯಕ್ಷ ಸಿ ಆರ್.ಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರಸನ್ನಕುಮಾರ್, ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಬಿ.ರಾಜಣ್ಣ, ತಾಲ್ಲೂಕು ಗ್ಯಾರಂಟಿ ಸಮಿತಿಯ ಅಧ್ಯಕ್ಷ ಜಗನ್ನಾಥ, ತೂಬಗೆರೆ ಬ್ಲಾಕ್ ಅಧ್ಯಕ್ಷ ರಂಗಪ್ಪ, ಜಿಲ್ಲಾ ಎಸ್.ಸಿ. ಘಟಕದ ಅಧ್ಯಕ್ಷ ಚೌಡಪ್ಪನಹಳ್ಳಿ ಲೋಕೇಶ್, ಪುರಸಭೆ ಸದಸ್ಯ ವೇಣುಗೋಪಾಲ್, ಎಂ.ನಾರಾಯಣಸ್ವಾಮಿ, ಚಂದೇನಹಳ್ಳಿ ಮುನಿಯಪ್ಪ, ಅನಂತಕುಮಾರಿಚಿನ್ನಪ್ಪ, ಬಾಲರಾಜು, ಮುನಿರಾಜು, ರಾಮಚಂದ್ರಪ್ಪ ಇದ್ದರು.

**ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತರಾಮನ್ ರಾಜ್ಯದಿಂದ ಆಯ್ಕೆಯಾಗಿದ್ದರೂ, ಇಂಡಿಯಾ ಒಕ್ಕೂಟಕ್ಕೆ ಸೇರಿದ ರಾಜ್ಯಗಳಿಗೆ ಅನ್ಯಾಯ ಮಾಡಿದ್ದಾರೆ. ಮಹಾರಾಷ್ಟ್ರದ ನಂತರ ಕರ್ನಾಟಕ ಜಿಎಸ್‌ಟಿ ಪಾವತಿಯಲ್ಲಿ ಮಂಚೂಣಿಯಲ್ಲಿದೆ. ಹೀಗಾದರೂ ತಾರತಮ್ಯ ಮಾಡಲಾಗುತ್ತಿದೆ ಎಂದು ದೂರಿದರು. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಅಧ್ಯಕ್ಷ ವಿ.ಶಾಂತಕುಮಾರ್ ಮಾತನಾಡಿದರು.**

## ಪಾಸ್ ಆದವರಿಗೆ ಬಿಗ್ ಶಾಕ್: ವೃತ್ತಿಪರ ಕೋರ್ಸ್ ಪ್ರವೇಶಕ್ಕೆ ಪರಿಗಣನೆಯಿಲ್ಲ

• **ಉದಯವಾಹಿನಿ, ಬೆಂಗಳೂರು**

ದ್ವಿತೀಯ ಪಿಯುಸಿ ಪರೀಕ್ಷೆ-3ರಲ್ಲಿ ಉತ್ತೀರ್ಣರಾದವರಿಗೆ ರಾಜ್ಯ ಸರ್ಕಾರ ಬಿಗ್ ಶಾಕ್ ನೀಡಿದೆ. ಅದೇ ಎಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ವೃತ್ತಿಪರ ಕೋರ್ಸ್ ಪ್ರವೇಶಕ್ಕೆ ಪರಿಗಣನೆಯಿಲ್ಲ ಎಂಬುದಾಗಿದೆ.

ಈ ಬಗ್ಗೆ ಕರ್ನಾಟ ಕ ಪರೀಕ್ಷಾ ಪ್ರಾಧಿಕಾರವು ಮಾಹಿತಿ ಹಂಚಿಕೊಂಡಿದ್ದು, ಎಂಜಿನಿಯರಿಂಗ್‌ವೈದ್ಯಕೀಯ ಸೇರಿದಂತೆ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಏಕಕಾಲಕ್ಕೆ ಸೀಟು ಹಂಚಿಕೆ ಮಾಡಲಾಗುತ್ತದೆ ಅಂತ ತಿಳಿಸಿದೆ. ಇದಲ್ಲದೇ ದ್ವಿತೀಯ ಪಿಯುಸಿ ಪರೀಕ್ಷೆ-3ರಲ್ಲಿ ಉತ್ತೀರ್ಣರಾದವರಿಗೆ ಬಿಗ್ ಶಾಕ್ ಎನ್ನುವಂತೆ ಎಂಜಿನಿಯರಿಂಡ್, ವೈದ್ಯಕೀಯ ಸೇರಿದಂತೆ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಸೀಟು ಹಂಚಿಕೆಯಲ್ಲಿ ಪರಿಗಣಿಸಲಾಗುವುದಿಲ್ಲ ಅಂತ ಸ್ಪಷಟ ಪಡಿಸಿದೆ.

## ತೇಜಸ್ವಿ ಸಾಂಸ್ಕೃತಿಕ ಹಬ್ಬ ಲೋಕಾರ್ಪಣೆ

• **ಉದಯವಾಹಿನಿ, ಬೆಂಗಳೂರು**


ಸಾಹಿತಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಕುರಿತ 'ತೇಜಸ್ವಿ ಎಂಬ ವಿಸ್ಮಯ' ಸಾಕ್ಷ್ಯಚಿತ್ರ ಸರಣಿಯನ್ನು ಮಾಜಿ ಉಪಮುಖ್ಯಮಂತ್ರಿ ಹಾಲಿ ಶಾಸಕ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಅವರು ಲೋಕಾರ್ಪಣೆಗೊಳಿಸಿದರು.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ತೇಜಸ್ವಿ ಸಾಂಸ್ಕೃತಿಕ ಹಬ್ಬವನ್ನು ಅನಾವರಣಗೊಳಿಸಲಾಯಿತು. ಸಮಾರಂಭದಲ್ಲಿ ಸಾಕ್ಷ್ಯಚಿತ್ರ ಸರಣಿಯ ಕರ್ಟನ್ ರೈಸರ್ ಬಿಡುಗಡೆಗೊಳಿಸಿ ಮಾತನಾಡಿದ ಡಾ.ಸಿ.ಎನ್.ಅಶ್ವಯತ್ಥ ನಾರಾಯಣ, ವಿಶ್ಯುಯಲ್ ಮೀಡಿಯಾ ತುಂಬಾ ಪರಿಣಾಮಕಾರಿ. ಮಾಧ್ಯಮದ ಅನೇಕ ಸಂಸ್ಥೆಯವರು ತೇಜಸ್ವಿ ಅವರ ಕುರಿತು ಸಾಕ್ಷ್ಯಚಿತ್ರ ಸರಣಿ ರೂಪಿಸಿರುವುದು ಶ್ಲಾಘನೀಯ. ಕರ್ಟನ್ ರೈಸರ್ ತುಂಬಾ ಆಕರ್ಷಕವಾಗಿದ್ದು, ಸರಣಿ ವೀಕ್ಷಿಸುವ ಕುತೂಹಲ ಮೂಡಿಸುತ್ತದೆ ಎಂದರು. ತೇಜಸ್ವಿ ಅವರ ಬದುಕು, ಬರಹ, ಸಂದೇಶಗಳನ್ನು ಇಂದಿನ ಯುವ ಪೀಳಿಗೆಗೆ ತಲುಪಿಸುವ ನಿಟ್ಟಿನಲ್ಲಿ ಈ ಸಾಕ್ಷ್ಯಚಿತ್ರ ನೆರವಾಗಲಿದೆ. ಅರ್ಥಪೂರ್ಣ ಸಾಕ್ಷ್ಯಚಿತ್ರ ರೂಪಿಸಿರುವ ಮಾಧ್ಯಮ ಅನೇಕ ಸಂಸ್ಥೆಯ ಮುಖ್ಯಸ್ಥರಾದ ಅರವಿಂದ ಮೋತಿ ಅನು ಮೋತಿ ಅಭಿನಂದನಾರ್ಹರು ಎಂದರು. ಮಾಧ್ಯಮ ಅನೇಕ ಸಂಸ್ಥೆಯ ಅರವಿಂದ ಮೋತಿ ಅವರು ಸಾಕ್ಷ್ಯಚಿತ್ರ ಸರಣಿ ಕುರಿತು ಮಾತನಾಡಿ, ನಮ್ಮ ಸಂಸ್ಥೆ ನಿರ್ಮಿಸಿರುವ ವಿಶಿಷ್ಟವಾದ ಸಾಕ್ಷ್ಯಚಿತ್ರವಿದು. ಆರು ಎಪಿಸೋಡ್‌ಗಳಲಿದ್ದು, ಪ್ರತಿಯೊಂದು ಎಪಿಸೋಡ್‌ನಲ್ಲೂ ತೇಜಸ್ವಿ ಅವರ ವ್ಯಕ್ತಿತ್ವದ ವಿವಿಧ ಮಜಲುಗಳನ್ನು ಹಿಡಿದಿಡಲು ಪ್ರಯತ್ನಿಸಿದ್ದೇವೆ. ಈ ಸಾಕ್ಷ್ಯಚಿತ್ರ ನರೇಟಿವ್ ಫಾರ್ಮ್ಯಾಟ್‌ನಲ್ಲಿದೆ. ಗ್ರಾಫಿಕ್ಸ್ ಅನಿಮೇಷನ್‌ನೊಂದಿಗೆ ಅವರ ಬದುಕಿನ ಮೈಲುಗಲ್ಲುಗಳನ್ನು ರೀಕ್ರಿಯೇಟ್ ಮಾಡಿದ್ದೇವೆ ಎಂದರು. ತೇಜಸ್ವಿ ಅವರ ಜೊತೆ ಕೆಲಸ ಮಾಡಿದವರು, ಒಡನಾಡಿದವರು, ಕುಟುಂಬದವರು ಸಾಕ್ಷ್ಯಚಿತ್ರದಲ್ಲಿ ಮಾತನಾಡಿದ್ದಾರೆ. ಸಾಕ್ಷ್ಯಚಿತ್ರ ಸರಣಿಗೆ ನಟ ವಸಿಷ್ಠ ಸಿಂಹ ಅವರು ಮತ್ತು ಸಾಕ್ಷ್ಯಚಿತ್ರದ ಕರ್ಟನ್ ರೈಸರ್‌ಗೆ ಡಾ ನಮನ ಅವರು ಧ್ವನಿ ನೀಡಿದ್ದಾರೆ. ಸಾಕ್ಷ್ಯಚಿತ್ರ ರೂಪಿಸುತ್ತೇವೆ ಎಂದಾಗ ರಾಜೇಶ್ವರಿ ತೇಜಸ್ವಿ ಅವರು ತುಂಬು ಉತ್ಸಾಹ, ಆಸಕ್ತಿಯಿಂದ ಸಹಕಾರ ನೀಡಿದರು.

ಅವರನ್ನು ಸ್ಮರಿಸು ತ್ತೇವೆ. ತೇಜಸ್ವಿ ಅವರ ಮಕ್ಕಳು ಸಾಕ್ಷ್ಯಚಿತ್ರಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನೆರವಾದ ಎಲ್ಲರಿಗೂ ಧನ್ಯವಾದ ಹೇಳುತ್ತೇವೆ ಎಂದರು. ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರೊ. ಕೆ.ಸಿ.ಶಿವಾರೆಡ್ಡಿ, ತೇಜಸ್ವಿಯವರ ಸಾಹಿತ್ಯ ಆತ್ಮವಿಶ್ವಾಸ ಮೂಡಿಸುವ, ಗಂಭೀರವಾದ ಬದುಕಿಗೆ ಪ್ರೇರಣೆ ನೀಡುವಂತಹ ಸಾಹಿತ್ಯ. ತಮ್ಮ ಕಾಲದ ರಾಜಕೀಯ, ಸಾಮಾಜಿಕ ಸಂದರ್ಭಗಳಿಗೆ ತಮ್ಮ ಬರವಣಿಗೆ ಮೂಲಕ ಸ್ಪಂದಿಸುತ್ತಾ ಬದುಕಿದವರು.

## ಭಜನ - ಪ್ರವಚನ - ಸಂಕೀರ್ತನ

• **ಉದಯವಾಹಿನಿ, ಬೆಂಗಳೂರು**


ಉದಯವಾಹಿನಿ ಚಿತ್ರ

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಶ್ರೀ ಗುರುರಾಜ ಸೇವಾ ಸಮಿತಿ, ಯಲಹಂಕ ಉಪನಗರ, ಬೆಂಗಳೂರು, ಇವುಗಳ ಸಂಯುಕ್ತಾಶ್ರಯದಲ್ಲಿ ಜುಲೈ 30 ರಿಂದ ಆಗಸ್ಟ್ 2 ರ ವರೆಗೆ ಧಾರ್ಮಿಕ/ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದು, ಅವುಗಳ ವಿವರಗಳು ಈ ರೀತಿ ಇವೆ : ಭಜನಾ ಕಾರ್ಯಕ್ರಮ : (ಪ್ರತಿದಿನ ಸಂಜೆ 6 ರಿಂದ 7) ಜುಲೈ 30, ಮಂಗಳವಾರ : ಶ್ರೀ ವಿಜಯವಿಠ್ಠಲ ಭಜನಾ ಮಂಡಳಿ, (ವಿದ್ಯಾರಣ್ಯಪುರ), ಜುಲೈ 31, ಬುಧವಾರ : ಸಮೀರ ಭಜನಾ ಮಂಡಳಿ, (ಯಲಹಂಕ), ಆಗಸ್ಟ್ 1, ಗುರುವಾರ : ವೈಷ್ಣವಿ ಭಜನಾ ಮಂಡಳಿ, (ಯಲಹಂಕ ) ಪ್ರವಚನ ಕಾರ್ಯಕ್ರಮ (ಪ್ರತಿದಿನ ಸಂಜೆ 7 ರಿಂದ 8) ಮ॥ಶಾ॥ಸಂ॥ ಶ್ರೀ ಕಲ್ಯಾ ಶ್ರೀಕಾಂತಾಚಾರ್ಯರಿಂದ ಸುಮಧ್ವ ವಿಜಯ ಧಾರ್ಮಿಕ ಪ್ರವಚನ. ಹರಿನಾಮ ಸಂಕೀರ್ತನೆ : ಆಗಸ್ಟ್ 2, ಶುಕ್ರವಾರ ಸಂಜೆ 6-30 ರಿಂದ 8-00 ಗಾಯನ : ಶ್ರೀಮತಿ ರಮ್ಯಾ ಸುಧೀರ್, ಪಿಟೀಲು ಶ್ರೀ ಎಸ್. ಶಶಿಧರ್, ಮೃದಂಗ : ಶ್ರೀ ಶ್ರೀನಿವಾಸ್ ಅನಂತರಾಮಯ್ಯ ಕಾರ್ಯಕ್ರಮ ನಡೆಯುವ ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 5, 8ನೇ ಮುಖ್ಯರಸ್ತೆ, ಯಲಹಂಕ ಉಪನಗರ, ಬೆಂಗಳೂರು. ಈ ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಟಿಟಿಡಿ ಹೆಚ್.ಡಿ.ಪಿ.ಪಿ. ಸಂಚಾಲಕರಾದ ಡಾ॥ ಪಿ. ಭುಜಂಗರಾವ್ ವಿನಂತಿಸಿದ್ದಾರೆ.

# ಪದಾಧಿಕಾರಿಗಳಿಗೆ ವೇತನ, ಭತ್ಯೆ ನಿಗದಿಪಡಿಸಿ ಆದೇಶ

## ಸರ್ಕಾರವು ಜಾರಿಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಿ

• **ಉದಯವಾಹಿನಿ, ಬೆಂಗಳೂರು**

ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಮತ್ತು ಮೇಲ್ವಿಚಾರಣೆಗಾಗಿ ರಚಿಸಲಾದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳ ಪದಾಧಿಕಾರಿಗಳಿಗೆ ಗೌರವಧನ ಭತ್ಯೆ ನಿಗದಿಪಡಿಸಿ ಆದೇಶ ಹೊರಡಿಸಿದೆ.

**ತಾಲ್ಲೂಕು ಮಟ್ಟದ ಗ್ಯಾರಂಟಿ ಯೋಜನೆ**

ಆದೇಶದಲ್ಲಿ ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಮೇಲ್ವಿಚಾರಣೆಗಾಗಿ ರಾಜ್ಯ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ, ತಾಲ್ಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಹಾಗೂ ಬಿಬಿಎಂಪಿ ಮಟ್ಟದಲ್ಲಿ ಬಿ.ಬಿ.ಎಂ.ಪಿ. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗಳನ್ನು ರಚಿಸಿ, ಸದರಿ ಪ್ರಾಧಿಕಾರ ಮತ್ತು ಸಮಿತಿಗಳ ಕರ್ತವ್ಯ ಮತ್ತು ಜವಾಬ್ದಾರಿ ನಿರ್ವಹಣೆ ಬಗ್ಗೆ ನಿರ್ದೇಶನಗಳನ್ನು ನೀಡಿ ಆದೇಶಿಸಿದ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಟಿಪ್ಪಣಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ (ಆಸು) 18 ಸ್ವೀಮರ 2024, ದಿನಾಂಕ: 25.01.2024ಕ್ಕೆ ಈ ಕೆಳಕಂಡ ಅಂಶಗಳ ಆಧಾರದ ಮೇಲೆ ಸೂಕ್ತ ತಿದ್ದುಪಡಿಗಳನ್ನು ಮಾಡಲು ಆದೇಶಿಸಿರುತ್ತಾರೆ.

1. ತಾಲ್ಲೂಕು ಸಮಿತಿಗಳ ಸದಸ್ಯರ ನಾಮನಿರ್ದೇಶನ ಈಗಾಗಲೇ ಯಾವುದಾದರೂ ತಾಲ್ಲೂಕಿನಲ್ಲಿ ಆಗದಿದ್ದಲ್ಲಿ ಅಂತಹ ಕಡೆ ಜಿಲ್ಲಾ ಉಸ್ತುವಾರಿ ಸಚಿವರು ಗ್ಯಾರಂಟಿ ಪ್ರಾಧಿಕಾರದ ಅಧ್ಯಕ್ಷರೊಂದಿಗೆ ಚರ್ಚಿಸಿ ತಾಲ್ಲೂಕು ಸಮಿತಿಗಳ ಸದಸ್ಯರ ನಾಮ ನಿರ್ದೇಶನವನ್ನು ಪೂರ್ಣಗೊಳಿಸುವುದು. ನಾಮ ನಿರ್ದೇಶನ ಮಾಡುವಾಗ ಮಹಿಳೆಯರಿಗೆ ಮತ್ತು ಯುವಕರಿಗೆ ಅಗತ್ಯ ಪ್ರಾತಿನಿಧ್ಯವನ್ನು ಕೊಡಬೇಕು.

2. ತಾಲ್ಲೂಕು ಸಮಿತಿಯ ಅಧ್ಯಕ್ಷರುಗಳಿಗೆ ತಿಂಗಳಿಗೆ ರೂ.25,000/- ಗಳ ಗೌರವಧನ ಕೊಡಬೇಕು ಹಾಗೂ ತಾಲ್ಲೂಕು ಸಮಿತಿಯ ಸದಸ್ಯರುಗಳಿಗೆ ಸೂಕ್ತ ಸಭಾ ಭತ್ಯೆಯನ್ನು ನಿಗಧಿ ಪಡಿಸುವುದು.

3. ಗ್ಯಾರಂಟಿ ಪ್ರಾಧಿ ಕಾರ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಗ್ಯಾರಂಟಿ ಸಮಿತಿಗಳ ಒಟ್ಟಾರೆ ವಿಷಯಗಳನ್ನು ವ್ಯವಹರಿಸಲು ಪ್ರಸ್ತುತ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕಾರ್ಯದರ್ಶಿಯವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ.



**ರಾಜ್ಯ ಸರ್ಕಾರವು ಜಾರಿಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಟಾನ ಪ್ರಾಧಿಕಾರ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ, ತಾಲ್ಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಮತ್ತು ಬಿಬಿಎಂಪಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗಳನ್ನು ರಚಿಸಿರುವ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ.**

ಆದರೆ ಗ್ಯಾರಂಟಿಗಳು ವಿವಿಧ ಇಲಾಖೆಗಳ ಮೂಲಕ ಅನುಷ್ಠಾನಗೊಳ್ಳುತ್ತಿರುವುದರಿಂದ ಸಮನ್ವಯ ಸಾಧಿಸುವ ಹಿತದೃಷ್ಟಿಯಿಂದ ನೋಡಲ್ ಅಧಿಕಾರಿಯನ್ನು ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ರವರನ್ನು ನೇಮಿಸುವುದು.

4. ಗ್ಯಾರಂಟಿ ಪ್ರಾಧಿಕಾರ ಜಿಲ್ಲಾ ಮತ್ತು ತಾಲ್ಲೂಕು ಸಮಿತಿಗಳಿಗೆ ಸೂಕ್ತವಾದ ಕಛೇರಿ ಹಾಗೂ ಪೀಠೋಪಕರಣಗಳನ್ನು ಸಹ ಒದಗಿಸಲು ಕ್ರಮ ಕೈಗೊಳ್ಳುವುದು.

5. ಗ್ಯಾರಂಟಿ ಕಾರ್ಯಕ್ರಮಕ್ಕಾಗಿ ಒಂದು ಪ್ರತ್ಯೇಕ ಲೆಕ್ಕ ಶೀರ್ಷಿಕೆಯನ್ನು ಸೃಜಿಸಲು ಆರ್ಥಿಕ ಇಲಾಖೆಗೆ ಸೂಚಿಸುವುದು.

6. ಜಿಲ್ಲಾ ಹಂತದಲ್ಲಿ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಕಾರ್ಪೋರೇಷನ್ ಮಟ್ಟದಲ್ಲಿ ಆಯಾ ಮಹಾನಗರ ಪಾಲಿಕೆಗಳ ಆಯುಕ್ತರು ಗ್ಯಾರಂಟಿಗಳ ನೋಡಲ್ ಅಧಿಕಾರಿಗಳಾಗಿರತಕ್ಕದ್ದು.

ಅಂತರಾಳದಿಂದ... EDITORIAL

# ಭಾರತದಲ್ಲಿ ಮಲ ಹೊರುವ ವ್ಯವಸ್ಥೆ ಇಲ್ಲವಾಗಿಸುವುದು ಯಾಕೆ ಅಸಾಧ್ಯ ?

ಈ ದೇಶದಲ್ಲಿ ಮಲ ಹೊರುವ ಪದ್ಧತಿ ಇದೆ ಎನ್ನುವುದು ಒಂದು ಲಜ್ಜೆಯ ವಿಷಯವಾದರೆ, ಅದನ್ನು ಸರಕಾರದ ನೇತೃತ್ವದಲ್ಲೇ ಮುಚ್ಚಿಡಲು ಪ್ರಯತ್ನಿಸುತ್ತಿರುವುದು ಇನ್ನೊಂದು ಲಜ್ಜೆಯ ವಿಷಯವಾಗಿದೆ. ಗಾಯವನ್ನು ಮುಚ್ಚಿಡುವ ಮೂಲಕ ಅದನ್ನು ಗುಣ ಪಡಿಸುವುದಕ್ಕೆ ಸಾಧ್ಯವೆ? ಹಾಗೆ ಮುಚ್ಚಿಟ್ಟು ಗಾಯವೇ ಇಲ್ಲ ಎಂದು ವಾದಿಸುತ್ತಾ ಕೂತರೆ, ಗಾಯ ಉಲ್ಬಣಿಸಿ ಕೊಳೆಯ ತೊಡಗುತ್ತದೆ. ಭಾರತದಲ್ಲಿ ಮಲಹೊರುವ ಪದ್ಧತಿಯನ್ನು ಇಲ್ಲವಾಗಿಸುವ ಸುಲಭೋಪಾಯವೆಂದರೆ, ಅದು ಹೊರಗಿನ ಜಗತ್ತಿಗೆ ಗೊತ್ತಾಗದಂತೆ ರಹಸ್ಯವಾಗಿಡುವುದು ಯಾವುದೇ ಜಿಲ್ಲೆಯಲ್ಲಿ ಮಲಹೊರುವ ಪದ್ಧತಿ ಕಂಡು ಬಂದರೆ ಮೊದಲು ಅಲ್ಲಿನ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತದೆ ಆದುದರಿಂದ ಅಧಿಕಾರಿಗಳು ಅಂತಹ ಘಟನೆಗಳು ಬಹಿರಂಗವಾಗದಂತೆ ನೋಡಿಕೊಳ್ಳುವ ಬಗ್ಗೆ ಹೆಚ್ಚು ಆಸಕ್ತಿ ವಹಿಸುತ್ತಾರೆ. ಅಂತಹ ಘಟನೆಗಳು ಬಹಿರಂಗವಾಗದೇ ಇರುವುದರಿಂದ ಅದು ಸಾರ್ವಜನಿಕವಾಗಿ ಈ ಆಚರಣೆ ಚರ್ಚೆಯಾಗುವುದಿಲ್ಲ ಮಾತ್ರವಲ್ಲ, ಅದರ ನಿವಾರಣೆಗೆ ಬಲವಾದ ಯೋಜನೆಯನ್ನು ರೂಪಿಸುವುದು ಸರಕಾರಕ್ಕೂ ಸಾಧ್ಯವಾಗುವುದಿಲ್ಲ. ಕಳೆದ ಐದು ವರ್ಷಗಳಲ್ಲಿ ಭಾರತದಲ್ಲಿ ದೈಹಿಕವಾಗಿ ಮಲಹೊರುವ ಪ್ರಕರಣಗಳ ಒಟ್ಟು ಸಂಖ್ಯೆಯನ್ನು ಬಹಿರಂಗಪಡಿಸುವಂತೆ ರಾಜ್ಯ ಸಭಾ ಸದಸ್ಯ ಸಾಕೇತ್ ಗೋಖಲೆ ಸದನದಲ್ಲಿ ಪ್ರಶ್ನಿಸಿದ್ದರು.

ಇದಕ್ಕೆ ಉತ್ತರಿಸಿದ ಸಚಿವ ರಾಮದಾಸ ಅಠಾವಳೆ ಅವರು, ಕಳೆದ ಐದು ವರ್ಷಗಳಲ್ಲಿ ಇಂತಹ ಯಾವುದೇ ಘಟನೆಗಳು ದೇಶದಲ್ಲಿ ನಡೆದಿಲ್ಲ ಎಂದು ತಿಳಿಸಿದ್ದರು. ಅದರೆ ಸರಕಾರದ ಹೇಳಿಕೆಗಳಿಗೆ ವ್ಯತಿರಿಕ್ತವಾಗಿ ಹಲವು ವರದಿಗಳು ಮಲಹೊರುವ ಪದ್ಧತಿ ಜೀವಂತವಿರುವುದನ್ನು ಬಹಿರಂಗಪಡಿಸಿವೆ. ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ರಾಜಸ್ಥಾನದಂತಹ ರಾಜ್ಯಗಳಲ್ಲಿ ದೈಹಿಕವಾಗಿ ಮಲಹೊರುವ ಪದ್ಧತಿ ಜೀವಂತವಾಗಿವೆ ಎನ್ನುವುದನ್ನು ಸ್ಪಷ್ಟಪಡಿಸಿವೆ. ಸಫಾಯಿ ಕರ್ಮಚಾರಿ ಆಯೋಗದ ಹೇಳಿಕೆಯಂತೆ ಕರ್ನಾಟಕವೊಂದರಲ್ಲೇ 2020ರಿಂದ 50 ಮಂದಿ ಶೌಚ ಕಾರ್ಮಿಕರು ಮೃತಪಟ್ಟಿದ್ದಾರೆ. ಇಷ್ಟಾದರೂ, ಸರಕಾರ ಕಳೆದ ಐದು ವರ್ಷಗಳಿಂದ ಮಲಹೊರುವ ಪ್ರಕರಣ ನಡೆದೇ ಇಲ್ಲ ಎನ್ನುತ್ತಿದೆ. ಸಚಿವ ರಾಮದಾಸ ಅಥಾವಳಿ ದಲಿತ ಸಮುದಾಯದಿಂದ ಬಂದವರು ತನ್ನ ಸಮುದಾಯವನ್ನು ಈ ಕೆಟ್ಟ ವೃತ್ತಿಯಿಂದ ಮುಕ್ತಗೊಳಿಸುವ ನಿಟ್ಟಿನಲ್ಲಿ ಅವರು ಈ ಬಗ್ಗೆ ಪರಿಶೀಲಿಸಿ ಉತ್ತರವನ್ನು ನೀಡಬೇಕಾಗಿತ್ತು. ಅದರೆ ಅವರಿಗೆ ತನ್ನ ಸಮುದಾಯದ ಹಿತಾಸಕ್ತಿಗಿಂತ ಸರಕಾರದ ಹಿತಾಸಕ್ತಿಯೇ ಮುಖ್ಯವೆನಿಸಿದೆ. ಸರಕಾರದ ಹೇಳಿಕೆ ಲಜ್ಜೆಗೇಡಿತನದಿಂದ ಕೂಡಿದೆ ಎಂದು ಸಾಕೇತ್ ಗೊಕಲೆ ಸಾಮಾಜಿಕ ಜಾಲತಾಣದಲ್ಲಿ ಟೀಕಿಸಿದ್ದಾರೆ. ಕರ್ನಾಟಕದ ಕೋಲಾರ ಚಿನ್ನದ ಗಣಿಗಾಗಿ ಮಾತ್ರ ಖ್ಯಾತಿ ಪಡೆದಿರುವುದಲ್ಲ ಮಲಹೊರುವ ಪದ್ಧತಿಗಾಗಿಯೂ ಕುಖ್ಯಾತಿಯನ್ನು ಪಡೆದಿದೆ. ಇದೇ ಕೋಲಾರದಲ್ಲಿರುವ ಮೊರಾರ್ಜಿ ದೇಸಾಯಿ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳನ್ನು ಮಲದಗುಂಡಿಗೆ ಇಳಿಸಿರುವುದು ರಾಜ್ಯ ಮಟ್ಟದಲ್ಲಿ ಸುದ್ದಿಯಾಗಿತ್ತು ಮಲಹೊರುವ ಪದ್ಧತಿ ರಾಜ್ಯದಲ್ಲಿ ಜೀವಂತವಿದೆ ಎಂದು ಸ್ವತಃ ಹೈಕೋರ್ಟ್ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿತ್ತು ಮಾತ್ರವಲ್ಲ, ಮಲಹೊರುವ ವ್ಯವಸ್ಥೆಯ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ಭಾರತದಲ್ಲಿ ಶೇ.34ರಷ್ಟು ಜಿಲ್ಲೆಗಳಲ್ಲಿ ಮಲಹೊರುವ ಪದ್ಧತಿಯಿದೆ ಎನ್ನುವ ಅಂಶವನ್ನು 2023ರಲ್ಲಿ ಕೇಂದ್ರ ಸಮಾಜ ಕಲ್ಯಾಣ ಇಲಾಖೆ ಒಪ್ಪಿಕೊಂಡಿತ್ತು. 766 ಜಿಲ್ಲೆಗಳ ಪೈಕಿ 508 ಜಿಲ್ಲೆಗಳಲ್ಲಿ ಮಲಹೊರುವ ಪದ್ಧತಿಯಿಲ್ಲ ಎಂದು ಕೇಂದ್ರ ಸರಕಾರ ಹೇಳಿಕೆಯಲ್ಲಿ ತಿಳಿಸಿತ್ತು. 1993ರಿಂದ 2014ರವರೆಗೆ ಗುಜರಾತಿನಲ್ಲಿ 14 ಮಂದಿ ಚೌಚಗುಂಡಿಯಲ್ಲಿ ಮೃತಪಟ್ಟಿದ್ದರು. ಆದರೆ ಸರಕಾರ ಅವರು ಶೌಚಗುಂಡಿಯಲ್ಲಿ ಮೃತಪಟ್ಟಿಲ್ಲ ಎನ್ನುವುದನ್ನು ಸಾಬೀತು ಮಾಡಲು ಶತಾಗತಾಯ ಹೋರಾಟ ನಡೆಸಿತು. ಈ ಸ್ವಚ್ಛತಾ ಕಾರ್ಮಿಕರ ಕುಟುಂಬಕ್ಕೆ ಪರಿಹಾರ ನೀಡದೇ ಇರುವುದಕ್ಕಾಗಿ ಕಳೆದ ವರ್ಷ ಗುಜರಾತ್ ಹೈಕೋರ್ಟ್ ಸರಕಾರಕ್ಕೆ ಛೀಮಾರಿ ಹಾಕಬೇಕಾಗಿ ಬಂತು. ಇಂದಿಗೂ ಸ್ವಚ್ಛತಾ ಕಾರ್ಮಿಕರು ಮಲದಗುಂಡಿಯಲ್ಲಿ ಮೃತಪಟ್ಟರೆ ಅದನ್ನು ಬೇರೆ ಅವಘಡವಾಗಿ ಗುರುತಿಸಿ ಪ್ರಕರಣವನ್ನು ಮುಚ್ಚಿಹಾಕಲು ಸರಕಾರ ಯತ್ನಿಸುತ್ತದೆ. ಸಾಮಾಜಿಕ ಸಂಘಟನೆಗಳು ಸಂತ್ರಸ್ತರ ಪರವಾಗಿ ನ್ಯಾಯಾಲಯದ ಮೊರೆ ಹೋಗುವ ಅನಿವಾರ್ಯ ಸ್ಥಿತಿ ನಿರ್ಮಾಣವಾಗುತ್ತದೆ. ತನ್ನ ಮಾನ ಉಳಿಸಿಕೊಳ್ಳುವ ಭಾಗವಾಗಿ ಸರಕಾರ, ಅದು ಮಲದಗುಂಡಿ ಶುಚಿಗೊಳಿಸುವ ಸಂದರ್ಭದಲ್ಲಿ ನಡೆದ ಅವಘಡವಲ್ಲ ಎನ್ನುವುದನ್ನು ನಿರೂಪಿಸಲು ಸರ್ವ ಪ್ರಯತ್ನವನ್ನು ಮಾಡುತ್ತದೆ.

> **ಮ್ಯಾನುವಲ್ ಸ್ಕ್ಯಾವೆಂಜಿಂಗ್ ಕಾಯ್ದೆ 2013 ಜಾರಿಗೊಂಡ ಬಳಿಕ ದೈಹಿಕವಾಗಿ ಮಲಹೊರುವ ಪದ್ಧತಿಯನ್ನು ಸಂಪೂರ್ಣ ನಿಷೇಧಿಸಲಾಗಿದೆಎಂದು ಅವರು ವಿವರಿಸಿದ್ದರು. ಸಚಿವಾಲಯವು ಮ್ಯಾನುವಲ್ ಸ್ಕಾಲೆಂಜರ್‌ಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು 2020ರಲ್ಲಿ ಮೊಬೈಲ್ ಆಯಪ್‌ನ್ನು ಆರಂಭಿಸಿತ್ತು. ಇದರಲ್ಲಿ ನೂರಕ್ಕೂ ಅಧಿಕ ಜಿಲ್ಲೆಗಳಿಂದ 6000ಕ್ಕೂ ಅಧಿಕ ದೂರುಗಳು ಬಂದಿದ್ದವು ಅದರ ಸರಕಾರ ಇವೆಲ್ಲವುಗಳನ್ನು ಪರಿಶೀಲಿಸಿ ಈ ದೂರುಗಳು ವಿಶ್ವಾಸಾರ್ಹವಲ್ಲ ಎಂದು ತಿಳಿಸಿದ.**

ಅನೇಕ ಸಂದರ್ಭದಲ್ಲಿ ಕೇಸು ದಾಖಲಿಸಲು ಸಂತ್ರಸ್ತರು ಮುಂದಾಗುವುದೇ ಇಲ್ಲ.ಸಂತ್ರಸ್ತರು ಕೆಳಜಾತಿಗೆ ಸೇರಿದವರು ಮಾತ್ರವಲ್ಲ ಬಡವರೂ ಆಗಿರುತ್ತಾರೆ. ಅವರಿಂದ ಶೌಚಗುಂಡಿಯನ್ನು ಶುಚಿಗೊಳಿಸಲು ಒತ್ತಾಯಿಸುವವರು ಮೇಲ್‌ಜಾತಿಗೆ ಸೇರಿರುತ್ತಾರೆ ಮಾತ್ರವಲ್ಲ ಶ್ರೀಮಂತರೂ ಕೂಡ ಆಗಿರುತ್ತಾರೆ. ಉತ್ತರ ಭಾರತದ ಗ್ರಾಮೀಣ ಪ್ರದೇಶದಲ್ಲಿ ಇಂತಹ ಪ್ರಕರಣಗಳು ಜರುಗಿದರೆ, ಜಮೀನ್ದಾರರ ಅಥವಾ ಮೇಲ್‌ಜಾತಿಗಳ ವಿರುದ್ಧ ಪೊಲೀಸ್ ಠಾಣೆಯನ್ನು ತುಳಿಯಲು ಸಂತ್ರಸ್ತರು ಹೆದರುತ್ತಾರೆ. ಒಂದು ವೇಳೆ ಪೊಲೀಸ್ ಠಾಣೆಗೆ ಹೋದರು ಪೊಲೀಸರು ಪ್ರಕರಣವನ್ನು ಮುಚ್ಚಿಹಾಕಲು ಸರ್ವ ಪ್ರಯತ್ನವನ್ನು ನಡೆಸುತ್ತಾರೆ. ಜಿಲ್ಲಾಡಳಿತಕ್ಕೂ ಪ್ರಕರಣ ಬಹಿರಂಗವಾಗುವುದು ಇಷ್ಟವಿರುವುದಿಲ್ಲ. ಆದುದರಿಂದ ಸಂತ್ರಸ್ತರಿಗೆ ಅಲ್ಪಪರಿಹಾರವನ್ನು ಕೊಟ್ಟು ಅವರ ಬಾಯಿ ಮುಚ್ಚಿಸಲಾಗುತ್ತದೆ. ಈ ಕಾರಣದಿಂದಲೇ ಸರಕಾರದ ದಾಖಲೆ ಪುಸ್ತಕಗಳಲ್ಲಿ ಪ್ರಕರಣಗಳು ದಾಖಲಾಗುವುದಿಲ್ಲ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು 2021ರಲ್ಲಿ ಸರಕಾರದ ಹೇಳಿಕೆಗಳ ವಿರುದ್ಧವಾಗಿ, ದೈಹಿಕವಾಗಿ ಮಲಹೊರುವ ಪದ್ಧತಿ ಭಾರತದಲ್ಲಿ ಇನ್ನೂ ಜೀವಂತವಾಗಿದೆ ಎಂದು ಸ್ಪಷ್ಟಪಡಿಸಿತ್ತು.



## ಮಹಾಭಾರತ – ಶಾಂತಿಪರ್ವ

• ಹಿಂದಿನ ಸಂಚಿಕೆಯಿಂದ

ಭೀಷ್ಮನ ಮನಸ್ಸು ದ್ರವಿಸಿಹೋಯಿತು. ಮೌನವಾಗಿ ಕಂಬನಿ ಸುರಿಸಿದನು. ತನ್ನ ಮೇಲೆ ಕೃಷ್ಣನು ಇರಿಸಿರುವ ಪವಿತ್ರ ಪ್ರೇಮವು ಮಾನವ ಅಭಿವ್ಯಕ್ತಿಯನ್ನು ಮೀರಿದ್ದು ಎಂದೆನಿಸಿತು. ಸಮಧಾನವಾದಮೇಲೆ, ಯುಧಿಷ್ಠಿರನು ಅವನಿಗೆ ಬೇಕಾದ ಪ್ರಶ್ನೆಗಳನ್ನು ಕೇಳಲಿ. ನಾನು ಉತ್ತರಿಸುತ್ತೇನೆ ಎನ್ನಲು, ಕೃಷ್ಣನು,ಯುಧಿಷ್ಠಿರನಿಗೆ ಅಪರಾಧಿ ಪ್ರಜ್ಞೆ ಕಾಡುತ್ತಿದೆ. ದಾಯಾದಿಗಳ ಸಾವಿಗೆ, ಕ್ಷತ್ರಿಯನಾಶಕ್ಕೆ ತಾನೇ ಕಾರಣನೆಂದು ಭಾವಿಸಿರುವ ಅವನಿಗೆ ನಿನ್ನೆದುರು ಬರುವ ಧೈರ್ಯವಿಲ್ಲ ಎಂದನು. ಭೀಷ್ಮನು ಹಸನ್ಮುಖನಾಗಿ, ಪ್ರೀತಿಯಿಂದ ಯುಧಿಷ್ಠಿರನನ್ನು ಹತ್ತಿರ ಕರೆದು, ತಲೆಯನ್ನು ನೇವರಿಸಿ, ''ಮಗು, ಕ್ಷತ್ರಿಯನ ಕರ್ತವ್ಯವೇ ಯುದ್ಧಮಾಡುವುದು, ಕೊಲ್ಲುವುದು. ನೀನು ನಿಜವಾದ ಕ್ಷತ್ರಿಯನಾದ್ದರಿಂದಲೇ ಕೊಂದಿದ್ದೀಯೆ. ಕರ್ತವ್ಯನಿರ್ವಹಣೆಗಾಗಿ ಕೊರಗುವುದೇಕೆ? ಸತ್ಯಪಥದ ನಡೆಯ ಬಗ್ಗೆ ನಿನಗೆ ಸಂದೇಹಗಳಿವೆ ಎಂದೆನ್ನುತ್ತಾನೆ ಕೃಷ್ಣ. ರಾಜ್ಯವಾಳುವುದರ ಬಗ್ಗೆ ನಿನಗೆ ತಿಳಿಯಲಪೇಕ್ಷೆಯಿದೆ ಅಲ್ಲವೆ? ಕೃಷ್ಣನೆಂಬ ಅಭಿದಾನವನ್ನು ಹೊತ್ತು ಈ ಭೂಮಿಯಲ್ಲಿ ಸಂಚರಿಸುತ್ತಿರುವ ಈ ಪರಮಾತ್ಮನ ಕೃಪೆಯಿಂದ ನಾನೆಲ್ಲವನ್ನೂ ನಿನಗೆ ಹೇಳುತ್ತೇನೆ ಮಗು!'' ಎಂದನು.

★ ★ ★ ★

ಯುಧಿಷ್ಠಿರನು, ''ಅಜ್ಜ, ವಿವೇಕಿಗಳಾದವರು ರಾಜನ ಕರ್ತವ್ಯಗಳೆಂದರೆ ಒಂದು ವಿಜ್ಞಾನ ಎನ್ನುವರು. ದಯವಿಟ್ಟು ರಾಜನ ಕರ್ತವ್ಯಗಳ ಬಗ್ಗೆ ನನಗೆ ತಿಳಿಸಿಕೊಡಿ'' ಎಂದು ಕೇಳಿದ ವಿನಯ ಭೀಷ್ಮನಿಗೆ ಇಷ್ಟವಾಯಿತು. ಅವನು ನಕ್ಕು ''ಯುಧಿಷ್ಠಿರ, ಹೇಳುತ್ತೇನೆ ಕೇಳು. ದೇವ ಬ್ರಾಹ್ಮಣರ ಪೂಜೆ ರಾಜನ ಮೊಟ್ಟಮೊದಲ ಕರ್ತವ್ಯ. ರಾಜನು ಮುಖ್ಯವಾಗಿ ಕಾರ್ಯಶೀಲನಾಗಿರಬೇಕು. ವಿಧಿಯು ರಾಜನನ್ನು ನಡೆಸುತ್ತದೆ ಎಂಬ ಭಾವನೆ ಒಂದು ಭ್ರಮೆಯಷ್ಟೆ. ವಿಧಿಯ ಪಾತ್ರವೂ ಇದೆ. ನಾನೊಪ್ಪುತ್ತೇನೆ. ಆದರೆ ಅದು ಕೆಲಸಮಾಡುವಂತಾಗಲು ರಾಜನೂ ಕಾರ್ಯಶೀಲನಾಗಿರಬೇಕು. ವಿಧಿ ಎಷ್ಟು ಶಕ್ತವೋ ಪುರುಷಪ್ರಯತ್ನವೂ ಅಷ್ಟೇ ಶಕ್ತಿಶಾಲಿಯಾದದ್ದು. ಪುರುಷಪ್ರಯತ್ನವೇ ಮೇಲು, ಅದೇ ವಿಧಿಯನ್ನು ನಿರ್ಧರಿಸುತ್ತದೆ ಎಂದು ನನ್ನ ಅನಿಸಿಕೆ. ರಾಜನ ಎರಡನೆಯ ಮುಖ್ಯವಾದ ಕರ್ತವ್ಯವೆಂದರೆ ಸತ್ಯಪರಿಪಾಲನೆ. ಪ್ರಜೆಗಳಲ್ಲಿ ವಿಶ್ವಾಸ ಮೂಡಿಸಬೇಕಾದರೆ ರಾಜನು ಸತ್ಯಶೀಲನಾಗಿರಬೇಕು. ''ಸಮಸ್ತ ಪರಿಕರಗಳೂ ರಾಜನಲ್ಲಿ ಸಂಗ್ರಹವಾಗಿರುತ್ತವೆ. ಅವನ ನಡತೆ ನಿಂದನಾರ್ಹವಾಗಿರಬಾರದು. ರಾಜನು ಯಶಸ್ವಿಯೆನಿಸಬೇಕಾದರೆ ಅವನಲ್ಲಿ ಆತ್ಮಸಂಯಮ, ವಿನಯ ಮತ್ತು ಋಜುತ್ವಗಳಿರಬೇಕು. ಸಮಸ್ತ ಕಾಮನೆಗಳನ್ನೂ ಅವನು ಹದ್ದಿನಲ್ಲಿರಿಸಿಕೊಂಡಿರಬೇಕು. ''ರಾಜನಲ್ಲಿ ನ್ಯಾಯವು ಸ್ವಾಭಾವಿಕವಾಗಿಯೇ ನೆಲೆಗೊಂಡಿರಬೇಕು. ಇನ್ನೂ ಮೂರು ಗುಣಗಳನ್ನು ರಾಜನು ರೂಢಿಸಿಕೊಳ್ಳಬೇಕು. ರಾಜನ ದೌರ್ಬಲ್ಯವೆಂದರೆ ದೇಶದ ದೌರ್ಬಲ್ಯವಾಗಿಬಿಡುವುದರಿಂದ ರಾಜನು ತನ್ನ ದೌರ್ಬಲ್ಯಗಳನ್ನು ಎಚ್ಚರಿಕೆಯಿಂದ ಮುಚ್ಚಿಟ್ಟುಕೊಳ್ಳಬೇಕು.


**ಮುಂದುವರಿಯುವುದು...**

# ಈಶ್ವರಚಂದ್ರವಿದ್ಯಾ ಸಾಗರ್ ರವರ 133ನೇ ವರ್ಷದಪುಣ್ಯಸ್ಮರಣೆ



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

• ಉದಯವಾಹಿನಿ, ವಿಶೇಷ



ಈಶ್ವರ ಚಂದ್ರ ವಿದ್ಯಾಸಾಗರ್ ರವರು 1820 ಸೆಪ್ಟೆಂಬರ್ 26 ರಂದು ಬಂಗಾಳದ ಮಿಡ್ನಾಪುರ ಜಿಲ್ಲೆಯ ಒಂದು ಬಡ ಕುಟುಂಬದಲ್ಲಿ ಜನಿಸಿದರು.
ವಿದ್ಯಾಭ್ಯಾಸಕ್ಕಾಗಿ ಚಿಕ್ಕವಯಸ್ಸಿನಲ್ಲಿ ಕಲ್ಕತ್ತಾ ನಗರಕ್ಕೆ ಬಂದು ಕಠಿಣ ಪರಿಶ್ರಮದಿಂದ ಸಂಸ್ಕೃತದಲ್ಲಿ ಅಗಾಧ ಪಾಂಡಿತ್ಯಗಳಿಸಿ ಪದವೀಧರರಾದರು.

ನಂತರ ಫೋರ್ಟ್ ವಿಲಿಯಂ ಕಾಲೇಜಿನಲ್ಲಿ ಸಂಸ್ಕೃತ ಪಂಡಿತರಾಗಿದ್ದು,ಆ ಬಳಿಕ ಪ್ರಿನ್ಸಿಪಾಲರಾದರು. ಅವರು ಮಾಡಿದ ಮಹತ್ವದ ಸುಧಾರಣೆ ಎಂದರೆ ಜಾತಿ-ಮತ ಭೇದಭಾವವಿಲ್ಲದೇ ಯಾರು ಬೇಕಾದರೂ ಸಂಸ್ಕೃತವನ್ನು ಕಲಿಯಲು ಅವಕಾಶ ಕಲ್ಪಿಸಿಕೊಟ್ಟರು. ಸಂಸ್ಕೃತದಲ್ಲಿ ಪಠ್ಯ ಪುಸ್ತಕಗಳನ್ನು ರಚಿಸಿದರು. ಅವುಗಳು ಇಂಗ್ಲಿಷ್ ಭಾಷೆಗೆ ಅನುವಾದವಾದವು. ಅವರ ಬರಹ ಗಳಲ್ಲಿನ ವೈಚಾರಿಕತೆಯಿಂದಾಗಿ ಅರ್ಥರಹಿತ ಆಚರಣೆ, ಸಂಪ್ರದಾಯ, ಮೌಢ್ಯಗಳನ್ನು ತೊರೆಯುವಂತೆ ಮಾಡುತ್ತಿದ್ದವು.

ಹಿಂದೂ ಪೇಟ್ರಿಯಟ್ ಮತ್ತು ತತ್ವಭೋದಿನಿ ಪತ್ರಿಕೆಗಳಲ್ಲಿ ವಿದ್ಯಾಸಾಗರರು ಬರೆಯುತ್ತಿದ್ದ ಲೇಖನಗಳು ಜ್ಞಾನ ದಾಯಕವು, ವೈಚಾರಿಕವು ಆಗಿದ್ದವು. ಜಾತಿಯ ಆಧಾರದ ಮೇಲೆ ಆಚರಿಸಲಾಗುತ್ತಿದ್ದ ಗೊಡ್ಡು ಆಚರಣೆ ವಿಧಿ ನಿಯಮಗಳನ್ನು ಅವರು ತಮ್ಮ ಲೇಖನಗಳ ಮೂಲಕ ಬಲವಾಗಿ ಖಂಡಿಸಿದರು.

> **ಪರಿಶ್ರಮದಿಂದ ಸಂಸ್ಕೃತದಲ್ಲಿ ಅಗಾಧ ಪಾಂಡಿತ್ಯ**

> **ಶ್ರೀರಾಮಕೃಷ್ಣ ಪರಮಹಂಸರು ವಿದ್ಯಾಸಾಗರರನ್ನು ಕುರಿತು ಹೇಳಿರುವ ಮಾತಿದು ವಿದ್ಯಾಸಾಗರರು ಒಬ್ಬ ಮಹಾನ್ ಸನ್ಯಾಸಿ ತಮ್ಮ ಭವಿಷ್ಯ, ಸುಖ, ಸಂತೋಷಗಳೆಲ್ಲವನ್ನೂ ಮನುಕುಲದ ಒಳಿತಿಗಾಗಿ ತ್ಯಾಗಮಾಡಿದ್ದಾರೆ. ತಮ್ಮ ಆತ್ಮೋದ್ಧಾರವನ್ನು ಕೂಡ ಕಡೆಗಣಿಸಿ ಮಾನವಕುಲದ ಏಳಿಗೆಗಾಗಿ ಶ್ರಮಿಸಿದ್ದಾರೆ. ಈಶ್ವರ್ ಚಂದ್ರ ವಿದ್ಯಾಸಾಗರ್ ಅವರು ಒಬ ಆದರ್ಶ ಶಿಕ್ಷಕ ಹಾಗೂ ಸಮಾಜ ಸುಧಾರಕರು. ವಿದ್ಯಾಸಾಗರ ಈಶ್ವರ್ ಚಂದ್ರರಿಗೆ ದೊರೆತ ಪ್ರಶಸ್ತಿ ಇವರು ಸಮಾಜದ ಏಳಿಗೆಗಾಗಿ ಹಾಗೂ ದೀನದಲಿತರ ಉದ್ಧಾರಕ್ಕಾಗಿ ನಿರಂತರವಾಗಿ ಶ್ರಮಿಸಿದರು.**

ಸ್ತ್ರೀ ಶಿಕ್ಷಣವನ್ನು ಪ್ರೋತ್ಸಾಹಿಸಿದರು. ಈ ನಿಟ್ಟಿನಲ್ಲಿ ಅವರು ಹೆಣ್ಣುಮಕ್ಕಳಿಗಾಗಿ 35 ಶಾಲೆಗಳನ್ನು ತೆರೆದರು. ಅವರ ಪ್ರಚಾರದ ಪರಿಣಾಮವಾಗಿ 1856 ರಲ್ಲಿ ಹಿಂದೂ ವಿಧವೆಯರ ಪುನರ್ ವಿವಾಹ ಶಾಸನ ರೂಪುಗೊಂಡಿತು. ಬಹುಪತ್ನಿತ್ವವನ್ನು ತೊಡೆದು ಹಾಕಲು ಸಾವಿರಾರು ಜನರ ಸಹಿ ಇದ್ದ ಮನವಿ ಪತ್ರವನ್ನು ಸರ್ಕಾರಕ್ಕೆ ಕಳಿಸಿದರು. ಈಶ್ವರಚಂದ್ರರವರು ಸಮಾಜ ಸುಧಾರಣೆಗಾಗಿ ತಮ್ಮ ಜೀವಮಾನವನ್ನೇ ಮುಡುಪಾಗಿಟ್ಟರು.

ಮದ್ಯಪಾನ,ಧೂಮಪಾನ, ಜಾತಿಪದ್ಧತಿ,ಮತೀಯ ಗಲಭೆ,ಹಿಂಸಾಚಾರ, ಅಜ್ಞಾನ,ಮೂಡನಂಬಿಕೆ ಇವುಗಳ ವಿರುದ್ಧವಾಗಿಯೂ ಹೋರಾಟ ನಡೆಸಿದರು. ಈಶ್ವರ್ ಚಂದ್ರರವರು ಉತ್ತಮ ಲೇಖಕರು ಆಗಿದ್ದು ಬೇತಾಳ ಪಂಚವಿ ಶಾಂತಿ, ಬ್ರಾಂತಿವಿಲಾಸ, ಶಾಕುಂತಲ ಮತ್ತು ಸೀತಾಪರಿತ್ಯಾಗ ಎಂಬ ಗ್ರಂಥಗಳನ್ನು ರಚಿಸಿದ್ದಾರೆ.

ಬಂಕಿಮ ಚಂದ್ರ ಚಟ್ಟೋಪಾಧ್ಯಾಯ ಅವರ ಅನೇಕ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ ವೆಂಕಟಾಚಾರ್ಯರು ವಿದ್ಯಾಸಾಗರರ ಭ್ರಾಂತಿವಿಲಾಸ ಎಂಬ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಈಶ್ವರ್ ಚಂದ್ರ ವಿದ್ಯಾಸಾಗರರನ್ನು ಭಾರತದ ಆಧುನಿಕ ಯುಗದ ಪ್ರಥಮ ಪುರುಷ ಮೈಕೆಲ್ ಮಧುಸೂದನ್ ದತ್ತ ರವರು ಕರೆದಿದ್ದಾರೆ.

ಈಶ್ವರ್ ಚಂದ್ರ ವಿದ್ಯಾಸಾಗರ್ ರವರು 1891 ಜುಲೈ 29 ರಂದು ತನ್ನ 72 ನೇ ವಯಸ್ಸಿನಲ್ಲಿ ತೀರಿಕೊಂಡರು. ಅವರ 133 ನೇ ವರ್ಷದ ಪುಣ್ಯ ಸ್ಮರಣೆಯ ದಿನದೊಂದು ಅವರನ್ನು ಸ್ಮರಿಸಿ ನೆನೆಯುತ್ತಾ ಅವರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರಕಲೆಂದು ಆ ಭಗವಂತನಲ್ಲಿ ಪ್ರಾರ್ಥಿಸೋಣ.

## ದಕ್ಷಿಣ ಜಿಲ್ಲೆ ನಾಮಕರಣ ಮಾಡಲು ತೀವ್ರ ವಿರೋಧ

• ಉದಯವಾಹಿನಿ, ಬೆಂಗಳೂರು

500 ವರ್ಷಗಳ ನಂತರ, ಅಯೋಧ್ಯೆಯಲ್ಲಿ ಭಗವಾನ್ ಶ್ರೀರಾಮನ ಭವ್ಯ ಮಂದಿರವನ್ನು ನಿರ್ಮಿಸಿದ ಬಳಿಕ ದೇಶಾದ್ಯಂತ ರಾಮನದ್ದೇ ಗುಣಗಾನವಿರುವಾಗ ಕರ್ನಾಟಕದಲ್ಲಿ ಮಾತ್ರ ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಎಂದು ಮರುನಾಮಕರಣ ಮಾಡಲು ಕಾಂಗ್ರೆಸ್ ಸರಕಾರ ನಿರ್ಣಯ ತೆಗೆದುಕೊಂಡಿದೆ. ಇದನ್ನು ನಾವು ತೀವ್ರ ಶಬ್ದಗಳಲ್ಲಿ ಖಂಡಿಸುತ್ತೇವೆ. ಶ್ರೀರಾಮನ ಭೂಮಿಯೆಂದೇ ಖ್ಯಾತಿ ಪಡೆದಿರುವ ಭಾರತದಲ್ಲಿ ಶ್ರೀರಾಮನ ಹೆಸರನ್ನು ಅಳಿಸಿ ಹಾಕಿದರೆ ಅದನ್ನು ಹಿಂದೂ ಸಮಾಜ ಎಂದಿಗೂ ಸಹಿಸುವುದಿಲ್ಲ. ಈ ನಿರ್ಧಾರವು ಹಿಂದೂಗಳ ಗಾಯಕ್ಕೆ ಉಪ್ಪು ಸವರಿದಂತಿದೆ.

ಕಾಂಗ್ರೆಸ್ ಈ ಹಿಂದೆ ಶ್ರೀರಾಮನನ್ನು ಕಾಲ್ಪನಿಕ ಎಂದಿತ್ತು, ನಂತರ ಶ್ರೀರಾಮಲಲ್ಲಾನ ಮೂರ್ತಿ ಪ್ರಾಣಪ್ರತಿಷ್ಠಾಪನೆಯ ಕಾರ್ಯಕ್ರಮಕ್ಕೆ ಹೋಗಲಿಲ್ಲ ಮತ್ತು ಈಗ ರಾಮನಗರದ ಹೆಸರು ಬದಲಾಯಿಸಿದೆ. ಇದರಿಂದ ಕಾಂಗ್ರೆಸ್ಸಿನ 'ಶ್ರೀರಾಮ'ನ ಬಗ್ಗೆ ವಿರೋಧ ಸ್ಪಷ್ಟವಾಗಿದೆ ಎಂದು ಹಿಂದೂ ಜನಜಾಗೃತಿ ಸಮಿತಿ ಹೇಳಿದೆ.



ಉದಯವಾಹಿನಿ ಚಿತ್ರ

ರಾಮನಗರದ ಹೆಸರನ್ನು ಬದಲಾಯಿಸಲು ನಿರ್ಧರಿಸಿದ ಕಾಂಗ್ರೆಸ್ ಪಕ್ಷವು ಮತಾಂಧ ಕ್ರೂರಿ ಔರಂಗಜೇಬನ ಹೆಸರಿರುವ ದೆಹಲಿಯ ಔರಂಗಜೇಬ ರಸ್ತೆ, ತುಘಲಕ್ ರಸ್ತೆ ಇತ್ಯಾದಿ ಆಕ್ರಮಣಕಾರಿಗಳ ಹೆಸರನ್ನು ಬದಲಾಯಿಸಲು ಪ್ರಯತ್ನಿಸಿದೆಯೇ ಕರ್ನಾಟಕದಲ್ಲಿರುವ ಮಹಾನಗರಗಳು ಮತ್ತು ನಗರಗಳ ಇಸ್ಲಾಮಿಕ್ ಹೆಸರುಗಳನ್ನು ಬದಲಾಯಿಸಲು ರಾಜ್ಯ ಸರಕಾರ ಧೈರ್ಯ ತೋರುವುದೇ ರಾಮನಗರ ಹೆಸರು ಬದಲಾವಣೆಗೆ ಹಿಂದೂಗಳು ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದು, ಹೆಸರು ಬದಲಾವಣೆಯ ನಿರ್ಧಾರ ಹಿಂಪಡೆಯದಿದ್ದರೆ ಹಿಂದೂ ಸಮಾಜ ಬೀದಿಗಿಳಿಯದೆ ಸುಮ್ಮನಿರುವುದಿಲ್ಲ ಎಂದು ಹಿಂದೂ ಜನಜಾಗೃತಿ ಸಮಿತಿ ತನ್ನ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

## ತಮಿಳುನಾಡಿನಲ್ಲಿ ವಿಶೇಷ ಹಬ್ಬ ಆಡಿಮಾಸದ ಕಾವಡಿ ಹಬ್ಬ..



ವಿ.ಎಂ.ಎಸ್.ಗೋಪಿ
• ಉದಯವಾಹಿನಿ, ವಿಶೇಷ

ಜುಲೈ29 ರಂದು ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನಗಳಲ್ಲಿ ವಿಶೇಷ ಪೂಜೆ. ತಮಿಳಿನಲ್ಲಿ ಆಡಿಮಾಸವಾಗಿದೆ. ಆಡಿಮಾಸ 13ರಂದು ಕಾವಡಿ ಹಬ್ಬ. ಮುರಗಸ್ವಾಮಿಯ ಹಬ್ಬ ಎಲ್ಲಾ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನಗಳಲ್ಲಿ ಕಾವಡಿ ಹಬ್ಬ ಜಾತ್ರೆ ನಡೆಯುತ್ತದೆ. ತಮಿಳು ನಾಡಿನಲ್ಲಿ ಆಡಿ 12ರಂದು ಆಡಿಕೃತ್ತಿಕ ಕಾವಡಿ ಹಬ್ಬ ಆಚರಿಸುತ್ತಾರೆ. ಭರಣಿಕಾವಡಿ ಪಾಲಕಾವಡಿ ಪನ್ನೀರ್ ಕಾವಡಿ ಪುಷ್ಪಕಾವಡಿ ನವಿಲುಕಾವಡಿಗಳಿವೆ. ಮನೆಯಲ್ಲಿ ದೇವರಿಗೆ ಪೂಜೆ ಮಾಡಿ ಭಕ್ತಾದಿಗಳು ಭಕ್ತಿಯಿಂದ ಸುಬ್ರಹ್ಮಣ್ಯಸ್ವಾಮಿಯ ದೇವಸ್ಥಾನಕ್ಕೆ ಕಾವಡಿ ಎತ್ತುಕೊಂಡು ಹೋಗಿ ದೇವರಿಗೆ ಪೂಜೆ ಮಾಡುತ್ತಾರೆ.ದೇಶ ವಿದೇಶಗಳಲ್ಲಿರುವ ಮುರಗಸ್ವಾಮಿ ದೇವಸ್ಥಾನದಲ್ಲಿಯೂ ಕಾವಡಿ ಹಬ್ಬ ಆಡಿ 18 (ಪದನೇಟು) ಹಬ್ಬ ಆಚರಿಸುತ್ತಾರೆ. ತಮಿಳು ನಾಡಿನಲ್ಲಿರುವ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಕ್ಷೇತ್ರಗಳು ತಮಿಳುನಾಡಿನಲ್ಲಿ


ಉದಯವಾಹಿನಿ ಚಿತ್ರ

> **ದೇವರಿಗೆ ಪೂಜೆ ಮಾಡಿ**

- 1. ಸ್ವಾಮಿಮಲ
- 2. ಪಳನಿ
- 3. ತಿರುತ್ತಿನಿ
- 4. ತಿರುಚೆಂದೂರ್
- 5. ತಿರುಪ್ಪಾರನ್ ಕುನ್ರನ್
- 6. ಪಲಮುದ್ರಿಚೋಲೈ

ಕರೆಯಲಾಗುವ ಆರು ಪಡವೀಡು ಕ್ಷೇತ್ರಗಳ ಇದು ಮುರಗಸ್ವಾಮಿಯ ದೇವಾಲಯವೂ ಒಂದು ಆರು ಪಡವೀಡು ಅಂದರೇ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಆರು ದಿವ್ಯ ದೇವಾಲಯಗಳು ಅಥವಾ ನೆಲೆಗಳು ಎಂದರ್ಥ. ಈ ಎಲ್ಲಾ ದೇವಸ್ಥಾನಗಳು ತಮಿಳು ನಾಡಿನಲ್ಲಿದೆ. ಕರ್ನಾಟಕ ತಮಿಳುನಾಡು ದೇಶ ವಿದೇಶಗಳಲ್ಲಿ ಮತ್ತು ಸಿಂಗಾಪುರಂ ಮಲೇಶಿಯಾದಲ್ಲೂ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ದೇವಸ್ಥಾನಗಳಿವೆ. ಎಲ್ಲಾ ದೇವಸ್ಥಾನಗಳಲ್ಲಿ ಕಾವಡಿ ಹಬ್ಬ ಆಚರಿಸುತ್ತಾರೆ.

## ಕೃಪೆ ತೋರಿದ ವರುಣ: ಮಳೆ ಬಿಡುವು, ಹವಾಮಾನ ಸಹಜ ಸ್ಥಿತಿಯತ್ತ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ ಕೆಲವು ವಾರಗಳಿಂದ ಮಳೆ ಅಬ್ಬರಿಸಿ ಕರಾವಳಿ, ಮಲೆನಾಡು ಹಾಗೂ ಉತ್ತರ ಒಳನಾಡಿನಲ್ಲಿ ಪ್ರವಾಹ ಭೀತಿ ಸೃಷ್ಟಿಯಾಗಿತ್ತು. ನಿರಂತರ ಮಳೆಗೆ ಬೇಸತ್ತಿನ ಜನರು, ನದಿ ತೀರದ ನಿವಾಸಿಗಳು ಇದೀಗ ನಿಟ್ಟುಸಿರುವ ಬಿಡುವಂತಾಗಿದೆ.

ಸದ್ಯ ಕರ್ನಾಟಕದಲ್ಲಿ ವರುಣ ಕೃಪೆ ತೋರಿದ್ದಾನೆ.ಅರ್ಥಾತ್ ಬರಗಾಲದಲ್ಲಿ ವರುಣ ಕೃಪೆ ತೋರಿದರೆ, ಮಳೆ ಬರುವ ಹಾಗೆ, ವ್ಯಾಪಕ ಮಳೆ ಬಂದ ಪ್ರವಾಹ ಉಂಟಾದ ವೇಳೆ ಮಳೆ ಜನರ ಮೇಲೆ ಕೃಪೆ ತೋರಿದ್ದು, ರೌದ್ರಾವತಾರದಿಂದ ತಣ್ಣಗಾಗಿದ್ದಾನೆ ಎನ್ನಬಹುದಾಗಿದೆ. ಹವಾಮಾನ ಇಲಾಖೆ ನೀಡಿರುವ ಮುನ್ಸೂಚನೆ ಪ್ರಕಾರ, ರಾಜ್ಯದಲ್ಲಿ ಮಳೆ ಆರ್ಭಟ ಕಡಿಮೆ ಆಗಿದ್ದು, ಪ್ರವಾಹ ಪೀಡಿತ ಜನರು, ನಿಟ್ಟುಸಿರು ಬಿಡುವಂತಾಗಿದೆ. ಭಾನುವಾರದಿಂದ ಮಳೆ ಇಳಿಕೆ ಆಗಲಿದೆ. ಒಂದೆರಡು ಜಿಲ್ಲೆಗಳಲ್ಲಿ ಮಾತ್ರವೇ ಸಾಧಾರಣದಿಂದ ಮಳೆ ಬರಲಿದೆ.ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಭಾರೀಯಿಂದ ಅತ್ಯಧಿಕ ಮಳೆ ದಾಖಲಾಗಿದ್ದು, ಇಲ್ಲಿ ವಾತಾವರಣ ಸಹಜ ಸ್ಥಿತಿಯತ್ತ ಮರಲಿದೆ. ಇನ್ನೂ ಒಳನಾಡಿನ ಬೆಳಗಾವಿ, ಹಾವೇರಿ, ಬಾಗಲಕೋಟೆ, ವಿಜಯಪುರ, ಧಾರವಾಡ ಇನ್ನಿತರ ಜಿಲ್ಲೆಗಳಲ್ಲಿ ಜಿಟಿ ಜಿಟಿ ಮಳೆ ಕಡಿಮೆ ಆಗಿದೆ. ಆಗಾಗ ತುಂತುತು ಮಳೆ ಬರುತ್ತಿದೆ. ಮುಂದಿನ ಮೂರು ದಿನ ಇದೇ ವಾತಾವರಣ ಮುಂದುವೆಯಲಿದೆ. ಭಾರೀ ಮಳೆಯ ಮುನ್ಸೂಚನೆ ಇಲ್ಲ ಎನ್ನಲಾಗಿದೆ.


ಉದಯವಾಹಿನಿ ಚಿತ್ರ

ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಹಗುರ ಮಳೆ ಬರಬಹುದು ಎಂದು ಅಂದಾಜಿಸಲಾಗಿದೆ.

ಪಶ್ಚಿಮ ಘಟ್ಟಗಳ, ಕಣಿವೆ ಭಾಗದಲ್ಲಿ ಸುರಿದ ಮಳೆಯಿಂದಾಗಿ ಬತ್ತಿ ಹೋಗಿದ್ದ ನದಿಗಳು, ಜಲಾಶಯಗಳಿಗೆ ಮರು ಜೀವ ಬಂದಿವೆ. ಆದರೆ ಭಾರೀ ಮಳೆ ನಿರಂತರವಾಗಿ ಮುಂದುವರಿದ ಪರಿಣಾಮ, ಹೆಚ್ಚುವರಿ ನೀರನ್ನು ಹೊರ ಬಿಡಬೇಕಾಯಿತು.

ಕೆಆರ್‌ಎಸ್, ಕಬಿನಿ, ಕೃಷ್ಣ, ಘಟಪ್ರಭ, ಹಾರಂಗಿ, ಹೇಮಾವತಿ, ಆಲಮಟ್ಟಿ ಹೀಗೆ ರಾಜ್ಯದ ಪ್ರಮುಖ ಡ್ಯಾಂಗಳ ಹೊರ ಹರಿವು ಹೆಚ್ಚಾಯಿತು. ಇದರಿಂದ ಆಯಾ ಭಾಗದಲ್ಲಿ ನದಿಗಳಲ್ಲಿ ನೀರಿನ ಸಂಗ್ರಹ ಏರಿಕೆ ಆಯಿತು. ಮತ್ತೊಂದು ನಿರಂತರ ಮಳೆಯಿಂದ ಪ್ರವಾಹ, ನೆರೆ ಸೃಷ್ಟಿಯಾಗಿತ್ತು. ಇದೀಗ ಮಳೆ ತಕ್ಕಮಟ್ಟಿಗೆ ಬಿಡುವು ನೀಡಿದೆ. ಇದೇ ವಾತಾವರಣ ಮುಂದುವರಿದರೆ, ಮುಂದಿನ ಒಂದು ವಾರದಲ್ಲಿ ಹವಾಮಾನ ಸಹಜ ಸ್ಥಿತಿಗೆ ಮರಳುವ ಸಾಧ್ಯತೆ ಇದೆ.

> **ರಾಜ್ಯದಲ್ಲಿ ಹಲವು ದಿವಸಗಳ ಕಾಲ 'ರೆಡ್ ಅಲರ್ಟ್ ಪಡೆದಿದ್ದ' ಜಿಲ್ಲೆಗಳಾದ ಕರಾವಳಿಯ ಮೂರು ಜಿಲ್ಲೆಗಳಲ್ಲಿ ಎರಡು ಜಿಲ್ಲೆಗಳಿಗೆ ಮಳೆ ಪೂರ್ತಿ ಕಡಿಮೆ ಆಗಿದೆ. ಉತ್ತರ ಕನ್ನಡ ಜಿಲ್ಲೆಗೆ ಮಾತ್ರ ಜುಲೈ 29, 30ರಂದು ಎರಡು ದಿನ ಭಾರೀ ಮಳೆ ಆಗಲಿದೆ. ಇನ್ನೂ ಜುಲೈ 29ರಂದು ಶಿವಮೊಗ್ಗ ಚಿಕ್ಕಮಗಳೂರಿನಲ್ಲಿ ಮಾತ್ರವೇ ಭಾರೀ ಮಳೆ ಆಗಲಿದೆ. ಹೀಗಾಗಿ ಮೇಲಿನ ಈ ಮೂಲಕ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ.**

## ವೇಗದಲ್ಲಿ ವಾಹನ ಚಲಾಯಿಸುವವರ ವಿರುದ್ಧ ಎಫ್‌ಐಆರ್

• ಉದಯವಾಹಿನಿ, ಬೆಂಗಳೂರು

ಆಗಸ್ಟ್ 1 ರಿಂದ, ರಾಜ್ಯದ ಯಾವುದೇ ರಸ್ತೆಯಲ್ಲಿ ಗಂಟೆಗೆ 130 ಕಿ.ಮೀ ವೇಗದ ಮಿತಿಯನ್ನು ಮೀರುವ ಯಾವುದೇ ವಾಹನವನ್ನು ಪ್ರಕರಣ ದಾಖಲಿಸಲಾಗುವುದು.ಈ ಅಪರಾಧಕ್ಕೆ 2,000 ರೂ.ಗಳವರೆಗೆ ದಂಡ ಅಥವಾ ಆರು ತಿಂಗಳ ಜೈಲು ಶಿಕ್ಷೆ ವಿಧಿಸಬಹುದು.ಸಂಚಾರ ಪೊಲೀಸರು ಸಂಚಾರ ಇಂಟರ್ ಸೆಪ್ಟರ್‌ಗಳ ಮೂಲಕ ಮಾತ್ರ ಅತಿ ವೇಗದ ವಾಹನಗಳನ್ನು ಗುರುತಿಸುವುದಿಲ್ಲ.ಬದಲಾಗಿ, ಅತಿಯಾದ ವೇಗದ ಪ್ರಕರಣಗಳನ್ನು ಪತ್ತೆಹಚ್ಚಲು ಮತ್ತು ದಾಖಲಿಸಲು ಸ್ಪಾಟ್ ಮತ್ತು ಸೆಕ್ಷನಲ್ ಮಾಪನಗಳನ್ನು ಬಳಸಲಾಗುತ್ತದೆ. ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇಯಲ್ಲಿ ಅತಿಯಾದ ವೇಗದ ಸಮಸ್ಯೆಯು ಪೊಲೀಸರಿಗೆ ಗಮನಾರ್ಹ ಕಾಳಜಿಯಾಗಿದೆ, ಇದು ಹಲವಾರು ಅಪಘಾತಗಳಿಗೆ ಕಾರಣವಾಗಿದೆ. ದಂಡ ವಿಧಿಸಲಾಗಿದ್ದರೂ, ಕೆಲವು ಚಾಲಕರು ಕ್ಯಾಮೆರಾವನ್ನು ಕಂಡಾಗ ಮಾತ್ರ ನಿಧಾನಗೊಳಿಸುತ್ತಾರೆ ಮತ್ತು ನಂತರ ಮತ್ತೆ ವೇಗವನ್ನು ಹೆಚ್ಚಿಸುತ್ತಾರೆ. ಆದ್ದರಿಂದ, ಈ ನಡವಳಿಕೆಯನ್ನು ನಿಗ್ರಹಿಸಲು ಪೊಲೀಸರು ಈಗ ಕಾರ್ಯತಂತ್ರವನ್ನು ರೂಪಿಸಿದ್ದಾರೆ.ಅತಿಯಾದ ವೇಗವನ್ನು ನಿಯಂತ್ರಿಸಲು, ಗಂಟೆಗೆ 130 ಕಿ.ಮೀ.ಗಿಂತ ಹೆಚ್ಚು ಚಾಲನೆ ಮಾಡುವ ಯಾವುದೇ ವಾಹನವನ್ನು ಅಜಾಗರೂಕ ಮತ್ತು ನಿರ್ಲಕ್ಷ್ಯವೆಂದು ಪರಿಗಣಿಸಲಾಗುತ್ತದೆ ಮತ್ತು ಆಗಸ್ಟ್ 1 ರಿಂದ ವಾಹನ ಮಾಲೀಕರ ವಿರುದ್ಧ ಎಫ್‌ಐಆರ್ ದಾಖಲಿಸಲಾಗುವುದು. ಸ್ಪಾಟ್ ಮಾಪನವು ಕ್ಯಾಮೆರಾವನ್ನು ಬಳಸಿಕೊಂಡು ಒಂದು ನಿರ್ದಿಷ್ಟ ಕ್ಷಣದಲ್ಲಿ ವಾಹನದ ವೇಗವನ್ನು ಅಳೆಯುವುದನ್ನು ಒಳಗೊಂಡಿರುತ್ತದೆ. ವಿಭಾಗೀಯ ಮಾಪನವು ವೇಗವನ್ನು ಹೀಗೆ ಲೆಕ್ಕಹಾಕುತ್ತದೆ

> **ಅಪರಾಧಕ್ಕೆ 2,000 ರೂ. ಗಳವರೆಗೆ ದಂಡ**

# ರಸ್ತೆ ಗುಂಡಿಗಳನ್ನು ಗುರುತಿಸಲು, ಬೇಗ ದುರಸ್ತಿ ಆರಂಭಿಸಲು ಆಪ್ ಬಿಡುಗಡೆ ಮಾಡಿದ ಬಿಬಿಎಂಪಿ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಮಳೆ ಬಂದರೆ ಸಾಕು, ರಸ್ತೆ ಗುಂಡಿಗಳು ರಾರಾಜಿಸಲು ಆರಂಭಿಸುತ್ತವೆ. ಮಳೆಗಾಲದಲ್ಲಿ ರಸ್ತೆ ಗುಂಡಿಗಳ ನಿರ್ವಹಣೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಹೊಸ ಅಪ್‌ಡೇಟ್‌ನಲ್ಲಿ ಮೊಬೈಲ್ ಆಪ್ ಅನ್ನು ಪರಿಚಯಿಸಿದೆ. ಬಿಬಿಎಂಪಿ ಬೆಂಗಳೂರಿನಲ್ಲಿ ಗುಂಡಿಗಳನ್ನು ಸರಿಪಡಿಸಲು 33.75 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ. ನಗರದಲ್ಲಿನ ಗುಂಡಿಗಳನ್ನು ಪಾರದರ್ಶಕ ವಾಗಿ ಗುರುತಿಸಲು ಮತ್ತು ನಿಗದಿತ ಕಾಲಮಿತಿಯೊಳಗೆ ದುರಸ್ತಿ ಪೂರ್ಣಗೊಳಿಸುವ ಸುವ್ಯವಸ್ಥಿತ ತಂತ್ರಜ್ಞಾನದೊಂದಿಗೆ ರೋಡ್ ಪಾತ್ ಹೋಲ್ ಅಲರ್ಟ್ ಎಂಬ ಮೊಬೈಲ್ ಅಪ್ಲಿಕೇಶನ್ ಅನ್ನು ಬಿಡುಗಡೆ ಮಾಡಿದೆ.

ಗುಂಡಿಗಳನ್ನು ಸರಿಪಡಿಸಲು ತಂತ್ರಜ್ಞಾನ ಆಧಾರಿತ ಪರಿಹಾರದ ಕಲ್ಪನೆಯು, ಅಂದಾಜಿನ ಕಾರಣದಿಂದಾಗಿ ಸಾಮಾನ್ಯವಾಗಿ ಸಂಭವಿಸುವ ಹೆಚ್ಚುವರಿ ವೆಚ್ಚವನ್ನು ತಪ್ಪಿಸುವುದು ಮತ್ತು ಮಾನವ ದೋಷವನ್ನು ನಿವಾರಿಸುವುದು ಇದರ ಮುಖ್ಯ ಉದ್ದೇಶ. ಬೆಸ್ಕಾಂ ಕೇಬಲ್‌ಗಳು ಮತ್ತು ಬಿಡಬ್ಲ್ಯುಎಸ್‌ಎಸ್‌ಬಿ ಮತ್ತು ಗೇಲ್ ಪೈಪ್‌ಗಳನ್ನು ಅಳವಡಿಸುವುದರಿಂದ ರಸ್ತೆಗಳು ಹಾಳಾಗಿರುವುದನ್ನು ಅಧಿಕಾರಿಗಳು ಗಮನಿಸಿದ್ದಾರೆ. ಅಧಿಕಾರಿಗಳ ಪ್ರಕಾರ, ಬೆಂಗಳೂರು ನಗರವು ಸುಮಾರು 12,878 ಕಿಮೀ ರಸ್ತೆ ಜಾಲವನ್ನು ಹೊಂದಿದೆ. ಇದರಲ್ಲಿ ಸುಮಾರು 1,344.84 ಕಿಮೀ ಆರ್ಟಿರಿಯಲ್ ಮತ್ತು ಸಬ್ ಆರ್ಟಿರಿಯಲ್ ರಸ್ತೆಗಳು ಮತ್ತು 11,533.16 ಕಿಮೀ ವಲಯ ರಸ್ತೆಗಳಾಗಿವೆ.

ಇತರ ನಾಗರಿಕ ಸಂಸ್ಥೆಗಳು ನಿಯಮಿತವಾಗಿ ರಸ್ತೆಗಳನ್ನು ಅಗೆಯುವುದರಿಂದ ರಸ್ತೆಗಳು ಹೊಂಡಗಳನ್ನು ಅಭಿವೃದ್ಧಿಪಡಿಸುತ್ತವೆ. ಆದ್ದರಿಂದ, ದೀರ್ಘಾವಧಿಯ ಪರಿಹಾರವಾಗಿ, ಪಾಲಿಕೆಯು ಪ್ರಮುಖ ರಸ್ತೆಗಳಲ್ಲಿ ವೈಟ್ ಟಾಪಿಂಗ್ ಅನ್ನು ಮಾಡುತ್ತಿದೆ. ಇತರ ಏಜೆನ್ಸಿಗಳು ತಮ್ಮ ಕೆಲಸದ ಸಮೀಕ್ಷೆಯನ್ನು ನಡೆಸುವಂತೆ ಮತ್ತು ಬಿಬಿಎಂಪಿಯೊಂದಿಗೆ ಡೇಟಾವನ್ನು ಹಂಚಿಕೊಳ್ಳಲು ಮನವಿ ಮಾಡಿದೆ.

ರಸ್ತೆಗಳನ್ನು ವೈಟ್ ಟಾಪಿಂಗ್‌ಗೆ ತೆಗೆದುಕೊಂಡ ನಂತರ ಅಗೆಯಲು ಅನುಮತಿ ನೀಡುವುದಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜಿಪಿಎಸ್‌ನಲ್ಲಿ ಗುಂಡಿ ಸ್ಥಳದ ಅಕ್ಷಾಂಶ ಮತ್ತು ರೇಖಾಂಶವನ್ನು ಗುರುತಿಸಿ ಮತ್ತು ಮೊಬೈಲ್‌ನಲ್ಲಿ ಗುಂಡಿಯ ಆಳತೆಯನ್ನು ನಮೂದಿಸಿ.

ಗುಂಡಿಗಳನ್ನು ನಿಖರವಾಗಿ ಪತ್ತೆ ಹಚ್ಚಲು ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲಾಗಿದ್ದು, ಇನ್ ಪುಟ್ ಆಧರಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಸಾಫ್ಟ್‌ವೇರ್‌ಗೆ ಅಳವಡಿಸಿಕೊಳ್ಳುವುದರಿಂದ, ಗುಂಡಿಗಳನ್ನು ಗುರುತಿಸುವುದು ಮತ್ತು ದುರಸ್ತಿ ಕಾರ್ಯವನ್ನು ಪಾರದರ್ಶಕಗೊಳಿಸುವುದಲ್ಲದೆ, ಗುಂಡಿಗಳ ವೆಚ್ಚದ ಮೇಲಿನ ನಿಯಂತ್ರಣ ಮತ್ತು ಹೊಣೆಗಾರಿಕೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಬಹುದು. 2024-25 ನೇ ಸಾಲಿನಲ್ಲಿ 225 ವಾರ್ಡ್‌ಗಳಿಗೆ 33.75 ಕೋಟಿ ರೂ.ಗಳನ್ನು, ಪ್ರತಿ ವಾರ್ಡ್‌ಗೆ 15 ಲಕ್ಷ ರೂಪಾಯಿ ಮೀಸಲಿಡಲಾಗಿದೆ.

> **ಸಾಫ್ಟ್‌ವೇರ್ ವೈಶಿಷ್ಟ್ಯಗಳು**
> **ಸಾಫ್ಟ್‌ವೇರ್ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಯಲ್ಲಿರುತ್ತದೆ. ಗುಂಡಿಗಳ ಸ್ಥಳ ಮತ್ತು ಫೋಟೋಗಳನ್ನು ಅಪ್ ಲೋಡ್ ಮಾಡಬಹುದು. ಸಾರ್ವಜನಿಕರು ದೂರು ಸಂಖ್ಯೆ ಮೂಲಕ ಸ್ಥಿತಿಯನ್ನು ಟ್ರ್ಯಾಕ್ ಮಾಡಬಹುದು. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಎಂಜಿನಿಯರ್‌ಗೆ ನಿಯೋಜಿಸಲಾಗಿದೆ.**

> **ಮೊಬೈಲ್ ಅಪ್ಲಿಕೇಶನ್ ಬಿಡುಗಡೆ**



ಉದಯವಾಹಿನಿ ಚಿತ್ರ

> **ಉಪ ಮುಖ್ಯಮಂತ್ರಿ ಹಾಗೂ ಬೆಂಗಳೂರು ಅಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಮತ್ತು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಪಾಲಿಕೆ ವ್ಯಾಪ್ತಿಯ ಎಲ್ಲಾ ರಸ್ತೆಗಳನ್ನು ಗುರುತಿಸಿ, ಈ ರಸ್ತೆಗಳಲ್ಲಿ ಬೀಳಬಹುದಾದ ಗುಂಡಿಗಳನ್ನು ನಿಖರವಾಗಿ ನಿರ್ಧರಿಸಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ.**

# ‘ಸ್ಮಾರ್ಟ್’ ಆಗದ ಯೋಜನೆಗಳು: ಆರಂಭದಲ್ಲೇ ವಿಫಲ

## ಸಾರ್ವಜನಿಕ ಅಭಿಪ್ರಾಯಕ್ಕೆ ಮನ್ನಣೆ ನೀಡದೇ ಯೋಜನೆಗಳನ್ನು ರೂಪಿಸಿದ ಪರಿಣಾಮ ಕೆಲ ಯೋಜನೆಗಳು ಆರಂಭದಲ್ಲೇ ವಿಫಲ

• **ಉದಯವಾಹಿನಿ ದಾವಣಗೆರೆ**

ನಗರವನ್ನು 'ಸ್ಮಾರ್ಟ್' ಆಗಿಸುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ 'ಸ್ಮಾರ್ಟ್ ಸಿಟಿ' ಯೋಜನೆಯಡಿ ಹಲವು ಅಭಿವೃದ್ಧಿ ಕಾಮಗಾರಿಗಳು ಯಶಸ್ವಿಯಾಗಿದ್ದರೂ, ಮಹತ್ವದ ಕೆಲ ಯೋಜನೆಗಳು ವೈಫಲ್ಯ ಕಂಡಿವೆ. ದೂರದೃಷ್ಟಿ ಇಲ್ಲದೇ, ಸಾರ್ವಜನಿಕ ಅಭಿಪ್ರಾಯಕ್ಕೆ ಮನ್ನಣೆ ನೀಡದೇ ಯೋಜನೆಗಳನ್ನು ರೂಪಿಸಿದ ಪರಿಣಾಮ ಕೆಲ ಯೋಜನೆಗಳು ಆರಂಭದಲ್ಲೇ ವಿಫಲವಾಗಿವೆ.

ಸ್ಮಾರ್ಟ್ ಸಿಟಿ ಯೋಜನೆ ಅನುಷ್ಠಾನದಲ್ಲಿ ದಾವಣಗೆರೆ ಉತ್ತಮ ಸ್ಥಾನ ಪಡೆದಿತ್ತು. ಇಷ್ಟಾದರೂ ಯೋಜನೆಗಳು ಹಳ್ಳ ಹಿಡಿದಿದ್ದು ಮಾತ್ರ ವಿಪರ್ಯಾಸ. ಕೆಲವೊಂದು ಪ್ರಾಯೋಗಿಕ (ಪೈಲಟ್) ಯೋಜನೆಗಳು ವಿಫಲವಾಗಿದ್ದು, ಈ ಯೋಜನೆಗಳಿಗೆ ಕೋಟ್ಯಂತರ ವೆಚ್ಚವಾಗಿದ್ದು, ನಿರ್ವಹಣೆ ಇಲ್ಲದೇ ಸೊರಗುತ್ತಿವೆ.

ಕೆಲ ಯೋಜನೆಗಳನ್ನು ಪ್ರಾಯೋಗಿಕವಾಗಿ ಕೈಗೊಂಡ ಪರಿಣಾಮ ಯೋಜನೆಗೆ ಮೀಸಲಿಡಬೇಕಾದ ಹೆಚ್ಚುವರಿ ಅನುದಾನ ಉಳಿದಿವೆ. ಈ ವಿಚಾರಕ್ಕಾದರೂ ಕೊಂಚ ಸಮಾಧಾನಪಡಬಹುದಾದರೂ ದೂರದೃಷ್ಟಿಯ ಕೊರತೆ ಎದ್ದುಕಾಣುತ್ತದೆ. ಸ್ಮಾರ್ಟ್ ಸಿಟಿ' ಯೋಜನೆಯಡಿ ಪರಿಚಯಿಸಲಾದ ಎಲೆಕ್ಟ್ರಿಕ್ ಆಟೊ, ಇ-ಶೌಚಾಲಯದಂತಹ ಯೋಜನೆ ನಿರೀಕ್ಷಿತ ಮಟ್ಟದ ಯಶಸ್ಸು ಕಂಡಿಲ್ಲ. ಬೈಸಿಕಲ್ ಶೇರಿಂಗ್ ಯೋಜನೆಯನ್ನೇ ಸ್ಥಗಿತಗೊಳಿಸಲು ಚಿಂತನೆ ನಡೆದಿದೆ. ದಾವಣಗೆರೆಯ ಕೆಲ ಉದ್ಯಾನಗಳು ಹಾಗೂ ಪ್ರಮುಖ ಸ್ಥಳಗಳಲ್ಲಿ ಇ-ಶೌಚಾಲಯಗಳನ್ನು ನಿರ್ಮಿಸಲಾಗಿದೆ. ನಿರ್ವಹಣೆ ಕೊರತೆಯಿಂದ ಅವು ಹಾಳಾಗಿವೆ. ಕೆಲವೆಡೆ ಶೌಚಾಲಯಗಳು ಇರುವ ಬಗ್ಗೆ ಸಾರ್ವಜನಿಕರಿಗೇ ತಿಳಿದಿಲ್ಲ.

> ‘ಮಂಗಳೂರಿನಲ್ಲಿ ಸ್ಮಾರ್ಟ್ ಸಿಟಿಯವರು ಗುಣಮಟ್ಟದ ಆಟೊ ನೀಡಿದ್ದಾರೆ. ಆದರೆ ನಮಗೆ ಮಾತ್ರ ಕಳಪೆ ಆಟೊ ಕೊಟ್ಟಿದ್ದಾರೆ. ರಸ್ತೆಯಲ್ಲಿನ ಹಂಪ್ಸ್‌ಗಳ ಮೇಲೆ ಸಂಚರಿಸುವಾಗಲೂ ಅವು ಅಲುಗಾಡುತ್ತವೆ. ಒಮ್ಮೆ ಹತ್ತಿದ ಜನರು ಮತ್ತೊಮ್ಮೆ ಈ ಆಟೊದತ್ತ ಸುಳಿಯುತ್ತಿಲ್ಲ’
> **-ಸಿದ್ದರಾಮ, ಚಾಲಕ**

ಹೀಗಾಗಿ ಅವುಗಳತ್ತ ಜನರೂ ಸುಳಿಯುತ್ತಿಲ್ಲ. ಪರಿಸರ ಮಾಲಿನ್ಯ ನಿಯಂತ್ರಣ ಹಾಗೂ ಉದ್ಯೋಗದ ದೃಷ್ಟಿಯಿಂದ ಫಲಾನುಭವಿಗಳಿಗೆ ನೀಡಿದ ಇ-ಆಟೊಗಳು ಮೂಲೆ ಸೇರಿವೆ. ಆಟೊಗಳ ಬ್ಯಾಟರಿಗಳಲ್ಲಿ ದೂಳು ತುಂಬಿವೆ. ಸ್ವಚ್ಛ ನಗರಿಯ ಕನಸಿನೊಂದಿಗೆ ನಗರದಲ್ಲಿ ನಿರ್ಮಿಸಿರುವ ಇ-ಶೌಚಾಲಯಗಳು ನಿರ್ವಹಣೆ ಸಮಸ್ಯೆ ಎದುರಿಸುತ್ತಿವೆ.ನಗರದ ಪ್ರಮುಖ ಸ್ಥಳಗಳಲ್ಲಿ 6.40 ಕೋಟಿ ವೆಚ್ಚದಲ್ಲಿ ಇ-ಶೌಚಾಲಯಹಾಗೂ 9 ಉದ್ಯಾನಗಳಲ್ಲಿ 1.54 ಕೋಟಿ ವೆಚ್ಚದಲ್ಲಿ 18 ಇ-ಶೌಚಾಲಯಗಳನ್ನು ನಿರ್ಮಿಸಲಾಗಿದೆ. ನಿರ್ವಹಣೆ ಸಮಸ್ಯೆಯ ಜೊತೆಗೆ ನೀರು ಪೂರೈಕೆಯಾಗದ ಕಾರಣ ಅವು ಹದಗೆಟ್ಟಿವೆ. ಜನರು ಇವುಗಳನ್ನು ಬಳಸಲು ಹಿಂದೇಟು ಹಾಕುತ್ತಿದ್ದಾರೆ. ಇನ್ನು ಕೆಲ ಶೌಚಾಲಯಗಳಲ್ಲಿ ನಾಣ್ಯ ಹಾಕಿದರೂ ಬಾಗಿಲು ತೆರೆಯುತ್ತಿಲ್ಲ. ಇದರಿಂದ ಬೇಸತ್ತಿರುವ ಜನ, ಅವುಗಳತ್ತ ಮುಖ ಮಾಡುತ್ತಿಲ್ಲ.ಇನ್ನು ಕೆಲವೆಡೆ ಜನರೇ ಅವುಗಳನ್ನು ಹಾಳು ಮಾಡುತ್ತಿದ್ದಾರೆ.


ಉದಯವಾಹಿನಿ ಚಿತ್ರ

### ಇ-ಆಟೊಗಳಿಗೆ ಅರ್ಜಿ

**ಸ್ಮಾರ್ಟ್ ಸಿಟಿಯಿಂದ ಎರಡು ಹಂತಗಳಲ್ಲಿ ಇ-ಆಟೊಗಳಿಗೆ ಅರ್ಜಿ ಆಹ್ವಾನಿಸಲಾಗಿತ್ತು. ಮೊದಲ ಹಂತದಲ್ಲಿ 20 ಹಾಗೂ ಎರಡನೇ ಹಂತದಲ್ಲಿ 70 ಆಟೊಗಳಿಗೆ ಟೆಂಡರ್ ಆಹ್ವಾನಿಸಲಾಗಿತ್ತು. ಶೇ 40ರಷ್ಟು ಹಣ ಪಾವತಿಸಿ ಆಟೊಗಳನ್ನು ತಂದಿದ್ದು, 9 ಆಟೊಗಳನ್ನು ಫಲಾನುಭವಿಗಳಿಗೆ ನೀಡಲಾಗಿದೆ. ಉಳಿದ 11 ಆಟೊಗಳು ಶೋರೂಂನಲ್ಲೇ ಉಳಿದಿವೆ.**

**ಯೋಜನೆಗಳು ಹಳ್ಳ ಹಿಡಿದಿದ್ದು ಮಾತ್ರ ವಿಪರ್ಯಾಸ**

ನಾಣ್ಯ ಬಳಸಿ ಉಪಯೋಗಿಸಬೇಕಾದ ಶೌಚಾಲಯಗಳಿಗೆ ಕೆಲವರು ರಬ್ಬರ್ ಬುಷ್ ಹಾಕುತ್ತಿದ್ದಾರೆ. ಇನ್ನು ಕೆಲ ಖದೀಮರು ಶೌಚಾಲಯಕ್ಕೆ ಅಳವಡಿಸಿರುವ ನಾಣ್ಯದ ಪೆಟ್ಟಿಗೆಗಳನ್ನು ಬಿಚ್ಚಿ ಹಣ ದೋಚುತ್ತಿದ್ದಾರೆ. ಇದೂ ಸ್ಮಾರ್ಟ್ ಸಿಟಿ ಅಧಿಕಾರಿಗಳಿಗೆ ತಲೆನೋವಾಗಿ ಪರಿಣಮಿಸಿದೆ.

ಪರಿಸರ ಮಾಲಿನ್ಯ ನಿಯಂತ್ರಣ ಹಾಗೂ ಉದ್ಯೋಗದ ದೃಷ್ಟಿಯಿಂದ ಫಲಾನುಭವಿಗಳಿಗೆ ನೀಡಿದ ಇ-ಆಟೊಗಳು ಉದ್ಘಾಟನೆಯಾದ ದಿನದಿಂದಲೇ ಮೂಲೆ ಸೇರಿವೆ. ಕಳಪೆ ಗುಣಮಟ್ಟದಿಂದಾಗಿ ಆಟೊ ಗಳು ಸರಿಯಾಗಿ ಓಡುವುದಿಲ್ಲ. ಸಣ್ಣ ಗುಂಡಿ ಬಂದರೂ ವಾಲುತ್ತವೆ. ಹಿಂಬದಿ ಕುಳಿತವರನ್ನು ಮೇಲಕ್ಕೆ ಎತ್ತಿ ಹಾಕುತ್ತವೆ ಎಂಬುದು ಆಟೊ ಚಾಲಕರ ದೂರು.

ಈ ಕಾರಣ ಜನರು ಇ-ಆಟೊ ಹತ್ತುತ್ತಲೇ ಇಲ್ಲ. ಇದರಿಂದ ಚಾಲಕರು ಹೈರಾಣಾಗಿದ್ದು, ವಾಪಸ್ ಪಡೆಯುವಂತೆ ಸ್ಮಾರ್ಟ್ ಸಿಟಿ ಅಧಿಕಾರಿಗಳಿಗೆ ದುಂಬಾಲು ಬೀಳುತ್ತಿದ್ದಾರೆ. 1.81 ಲಕ್ಷದ ಆಟೊವನ್ನು ಸಬ್ಸಿಡಿಯಲ್ಲಿ 72,400ಕ್ಕೆ ಸಾಲದ ರೂಪದಲ್ಲಿ ಬ್ಯಾಂಕಿನಿಂದ ಕೊಡಿಸಿದರು. ಆಟೊ ಟ್ರಯಲ್ ಓಡಿಸಲು ಕೇಳಿದರೂ ಕಂಪನಿಯಾಗಲಿ, ಸ್ಮಾರ್ಟ್ ಸಿಟಿಯಾಗಲಿ ನೀಡಲಿಲ್ಲ. 3 ಗಂಟೆ ಚಾರ್ಜ್ ಆದರೆ 80 ಕಿ.ಮೀ. ಬರುತ್ತದೆ ಎಂದು 35 ಕಿ.ಮೀ. ಮೈಲೇಜ್ ಸಿಗದ ಆಟೊ ನೀಡಿದ್ದಾರೆ.

ಕಳಪೆಯಾದ ಕಾರಣ ಜನರೂ ಆಟೊ ಹತ್ತುತ್ತಿಲ್ಲ ಎಂದು ಆಟೊ ಚಾಲಕ ಕೊಟ್ರೇಶ್ ಅಳಲು ತೋಡಿಕೊಂಡರು. ದಾವಣಗೆರೆಯ ಎಸ್.ಎಸ್ ಬಡಾವಣೆಯ ಗಂಗೂಬಾಯಿ ಹಾನಗಲ್ ಉದ್ಯಾನದಲ್ಲಿ ಸ್ಮಾರ್ಟ್ ಸಿಟಿ ಅಡಿ ನಿರ್ಮಿಸಿರುವ ಇ-ಶೌಚಾಲಯಗಳ ದುಃಸ್ಥಿತಿ ದಾವಣಗೆರೆಯ ವಿದ್ಯಾನಗರದ ಉದ್ಯಾನದಲ್ಲಿ ಸ್ಮಾರ್ಟ್ ಸಿಟಿ ಅಡಿ ನಿರ್ಮಿಸಿರುವ ಇ-ಶೌಚಾಲಯಗಳು ದಾವಣಗೆರೆಯ ಕಾಸಲ್ ಶ್ರೀನಿವಾಸ ಶೇಷ್ಠಿ ಉದ್ಯಾನದಲ್ಲಿ ಸ್ಮಾರ್ಟ್ ಸಿಟಿ ಅಡಿ ನಿರ್ಮಿಸಿರುವ ಇ-ಶೌಚಾಲಯಗಳು ಸ್ಮಾರ್ಟ್ ಸಿಟಿ ಯೋಜನೆಯಡಿ ನೀಡಲಾದ ಇ-ಆಟೊ ಮೂಲೆ ಸೇರಿರುವುದು.

---

# ನೂತನ ತಾಲ್ಲೂಕು ಸಮಿತಿ ಪದಾಧಿಕಾರಿಗಳ ರಚನೆ

• **ಉದಯವಾಹಿನಿ ಸಿಂಧನೂರು**

ನಗರದ ಪ್ರವಾಸಿ ಮಂದಿರದಲ್ಲಿ ದಲಿತ ವಿದ್ಯಾರ್ಥಿ ಪರಿಷತ್ ನೂತನ ತಾಲ್ಲೂಕ ಪದಾಧಿಕಾರಿಗಳ ನೇಮಕ ಮಾಡಿ ಮಾತನಾಡಿದ ಜಿಲ್ಲಾ ಸಂಚಾಲಕ ಮೌನೇಶ ಜಾಲವಾಡಗಿನಮ್ಮ ಸಮಿತಿಯು ಇಂದು ರಾಜ್ಯಾದ್ಯಂತ ವಿದ್ಯಾರ್ಥಿ ಯುವ ಜನರನ್ನು ಶೈಕ್ಷಣಿಕವಾಗಿ ಮಾತ್ರವಲ್ಲದೇ ಸಾಮಾಜಿಕವಾಗಿ ವೈಚಾರಿಕವಾಗಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವುದರ ಜೊತೆಗೆ ಅವರನ್ನು ಯುವ ನಾಯಕರನ್ನಾಗಿ ಪರಿವರ್ತಿಸುವ ಭಾಗವಾಗಿ ಇಂದು ರಾಜ್ಯಾದ್ಯಂತ ಹೆಸರುವಾಸಿಯಾದ ಸಂಘಟನೆಯಾಗಿದೆ.

ಮತ್ತು ವಿಶೇಷವಾಗಿ ವಿದ್ಯಾರ್ಥಿ ಯುವ ಜನರ ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕಾಗಿ ಸ್ವತಹ ನಾವೇ ಸಂಘಟನಾತ್ಮಕ ಚಟುವಟಿಕೆಗಳ ಮುಖಾಂತರ ನಮ್ಮ ಸಮಸ್ಯೆಯನ್ನು ಪರಿಹರಿಸಿಕೊಳ್ಳುವ ಚತುರರಾಗಬೇಕು. ಬಹು ಮುಖ್ಯವಾಗಿ ಶಿಕ್ಷಣಕ್ಕೆ ನಾವು ಪ್ರಮುಖ ಆದ್ಯತೆಯನ್ನು ಕೊಟ್ಟು ನಮ್ಮ ಜೀವನವನ್ನು ಸಾಕಾರಗೊಳ್ಳಲು ಕಾರ್ಯಪ್ರವೃತ್ತರಾಗಬೇಕು

ಈ ಸಂದರ್ಭದಲ್ಲಿ ನಮಗೆ ಎದುರಾಗುವ ಶೈಕ್ಷಣಿಕ ತೊಡಕುಗಳು ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡುವ


ಉದಯವಾಹಿನಿ ಚಿತ್ರ

ಪ್ರಜ್ಞಾವಂತರಾಗಬೇಕು. ಹಾಗಾದಾಗ ಮಾತ್ರ ನಮ್ಮ ವಿಮೋಚನೆ ಸಾಧ್ಯ ನೂತನ ಪದಾಧಿಕಾರಿಗಳಾಗಿ ಆಯ್ಕೆಯಾದವರು ಕೂಡಲೇ ವಿದ್ಯಾರ್ಥಿ ಯುವ ಜನರ ಕಲ್ಯಾಣಕ್ಕಾಗಿ ಶ್ರಮ ವಹಿಸಲು ಕಾರ್ಯಯೋನ್ಮುಖರಾಗಬೇಕು ಎಂದು ಅವರು ಕರೆಕೊಟ್ಟರು.

ಈ ಸಂದರ್ಭದಲ್ಲಿ ನೂತನ ತಾಲೂಕ ಸಂಚಾಲಕರಾಗಿ ದುರುಗೇಶ್ ಕಲಮಂಗಿ, ಪ್ರಧಾನ ಕಾರ್ಯದರ್ಶಿ ನರಸಪ್ಪ ಅಮರಾಪುರ, ಕಾರ್ಯದರ್ಶಿ ಶರಣಬಸವ ಕಲ್ಮಂಗಿ, ಮಹಮ್ಮದ್ ಸುಲೇಮಾನ್, ಹನುಮಂತ ಆಯ್ಕೆಯಾದರು.

ಮತ್ತು ಈ ಸಂದರ್ಭದಲ್ಲಿ ಮುಖಂಡರಾದ ಮೌನೇಶ ತುಗ್ಗಲದಿನ್ನಿ, ಬಂಡೆಗುರು ಕರೆಗುಡ್ಡ, ಚೆನ್ನಬಸವ ಯಾಪಲಪರ್ವಿ, ರಸೀದ ಬನ್ನಿಗನೂರು, ಪ್ರಶಾಂತ,ಮಂಜುನಾಥ, ಹನುಮಂತ ವಿರುಪಾಪುರ, ಅಫ್ಜಲ್ ಕಲಮಂಗಿ, ಎರಿಸ್ವಾಮಿ ಭಾಗವಹಿಸಿದ್ದರು.

---

# ನಿರಂತರ ಮಳೆ: ನಾಲ್ಕೂವರೆ ತಿಂಗಳಿಗೆ ಶುಂಠಿ ಕೀಳುತ್ತಿರುವ ರೈತರು

• **ಉದಯವಾಹಿನಿ ಆಲೂರು**

15 ದಿನಗಳಿಂದ ನಿರಂತರವಾಗಿ ಭಾರಿ ಮಳೆಯಾಗಿದ್ದು, ಗದ್ದೆ ಮತ್ತು ಸಮತಟ್ಟು ಪ್ರದೇಶದಲ್ಲಿ ನಾಟಿ ಮಾಡಿದ್ದ ಶುಂಠಿ ಬೆಳೆಯಲ್ಲಿ ನೀರು ತುಂಬಿಕೊಂಡಿದೆ. ಕೊಳೆ ರೋಗ ಬರುವ ಸಾಧ್ಯತೆ ಇರುವುದರಿಂದ ರೈತರು ಈಗಲೇ ಶುಂಠಿ ಕೀಳಲು ಪ್ರಾರಂಭಿಸಿದ್ದಾರೆ.

ಶುಂಠಿ ಬೆಳೆಯಲ್ಲಿ ನೀರು ನಿಲ್ಲದಂತೆ ಜಾಗ್ರತೆ ವಹಿಸಲಾಗುತ್ತದೆ.

15 ದಿನಗಳಿಂದ ಎಡಬಿಡದೇ ಮಳೆ ಸುರಿಯುತ್ತಿದ್ದು, ಗದ್ದೆಗಳಲ್ಲಿ ನೀರು ಅಧಿಕವಾಗಿ ತುಂಬಿತ್ತು. ನೀರನ್ನು ಹೊರಕ್ಕೆ ಹಾಯಿಸಲು ಸಾಧ್ಯವಾಗದೇ, 10 ದಿನಗಳಿಂದ ಶುಂಠಿ ನೀರಿನಲ್ಲಿ ನಿಂತಿದೆ. ನಂತರದಲ್ಲಿ ಬಿಸಿಲು ಬಂದರೆ, ಕೊಳೆ ರೋಗ ಆರಂಭವಾಗುತ್ತದೆ. ಈ ಕಾರಣದಿಂದ ಭೂಮಿಯಲ್ಲಿ ಬಲಿಯುವ ಮುನ್ನವೇ ಕೀಳಲು ಪ್ರಾರಂಭಿಸಿದ್ದೇವೆ ಎಂದು ರೈತರು ಹೇಳಿದ್ದಾರೆ. ಒಂದು ಚೀಲ ಶುಂಠಿ ನಾಟಿ ಮಾಡಿ ಬೆಳೆಯುವವರೆಗೆ, ಕನಿಷ್ಠ 20 ಸಾವಿರದಿಂದ 25 ಸಾವಿರ ಖರ್ಚಾಗುತ್ತದೆ. ಕೃಷಿ ಕಾರ್ಮಿಕರ ಅಭಾವದಿಂದ ಎರಡು ಪಟ್ಟು ಸಂಬಳ ಕೊಟ್ಟು ಕೆಲಸ ಮಾಡಿಸಬೇಕಾಗುತ್ತದೆ. ಉತ್ತಮ ಬೆಳೆ ಬಂದರೆ ಗರಿಷ್ಠ 15-20 ಮೂಟೆ ಇಳುವರಿ ಸಿಗುತ್ತದೆ. ರೋಗ ಬಂದರೆ, 10-12 ಮೂಟೆ ದೊರಕಬಹುದು.


ಉದಯವಾಹಿನಿ ಚಿತ್ರ

> **ಈಗಾಗಲೇ ಶುಂಠಿ ನಾಟಿ ಮಾಡಿ 4-5 ತಿಂಗಳಾಗಿವೆ. 8-9 ತಿಂಗಳವರೆಗೆ ಭೂಮಿಯಲ್ಲಿದ್ದರೆ ಮಾತ್ರ ಚೆನ್ನಾಗಿ ಬಲಿಯುತ್ತದೆ. ನಂತರ ಕಿತ್ತರೆ ಮಾತ್ರ, ಉತ್ತಮ ಇಳುವರಿಯೊಂದಿಗೆ ಗುಣಮಟ್ಟದ ಶುಂಠಿ ದೊರಕುತ್ತದೆ. ಈಗಲೇ ಕಿತ್ತರೆ ಗುಣಮಟ್ಟ ಕ್ಷೀಣಿಸುವುದಲ್ಲದೇ, ಇಳುವರಿ ಕುಂಠಿತವಾಗುತ್ತದೆ. ಉತ್ತಮ ಬೆಲೆಯೂ ಸಿಗುವುದಿಲ್ಲ**
> **-ವೆಂಕಟೇಶ್, ರೈತ**

ಮಾರುಕಟ್ಟೆಯಲ್ಲಿ ಒಂದು ಮೂಟೆಗೆ 3 ಸಾವಿರದಿಂದ 4 ಸಾವಿರ ದೊರಕಿದರೆ ಮಾತ್ರ ರೈತರ ಪ್ರಯತ್ನಕ್ಕೆ ಲಾಭ ದೊರಕುತ್ತದೆ. ಇಲ್ಲದಿದ್ದರೆ ನಷ್ಟ ಅನುಭವಿಸಬೇಕಾಗುತ್ತದೆ’ ಎನ್ನುವುದು ರೈತರ ಮಾತು. ಕಳೆದ ವರ್ಷ ಒಂದು ಚೀಲ ಶುಂಠಿಗೆ 6 ಸಾವಿರಕ್ಕೂ ಅಧಿಕ ಬೆಲೆ ದೊರಕಿತ್ತು. ಹೀಗಾಗಿ ತಾಲ್ಲೂಕಿನ 3 ಸಾವಿರ ಹೆಕ್ಟೇರ್‌ಗಿಂತಲೂ ಅಧಿಕ ಪ್ರದೇಶದಲ್ಲಿ ಶುಂಠಿ ಬೆಳೆಯಲಾಗಿದೆ. ಸದ್ಯ ಒಂದು ಮೂಟೆಗೆ 2 ಸಾವಿರ ಬೆಲೆ ಇದೆ. ಶುಂಠಿ ಬೆಳೆ ಜೂಜಾಟವಿದ್ದಂತೆ’ 'ಶುಂಠಿ ಬೆಳೆಯುವುದು ಜೂಜಾಟ ಆಡಿದಂತೆಯೇ ಸರಿ.


---

# ರಾಜ್ಯದ ಪೊಲೀಸ್ ನಿಯಮಗಳು ಯಾದಗಿರಿ ಜಿಲ್ಲೆಗೆ ಅನ್ವಯಿಸುವುದಿಲ್ಲ ಯಾಕೆ?: ಉಮೇಶ್ ಮುದ್ನಾಳ

• **ಉದಯವಾಹಿನಿ ಯಾದಗಿರಿ**

ಜಿಲ್ಲೆಯ ಪೋಲಿಸ ಠಾಣೆಗಳಲ್ಲಿ ಸರ್ಕಾರದ ನಿಯಮ ಉಲ್ಲಂಘಿಸಿ 5 ವರ್ಷ ಮೀರಿದವರನ್ನು ವರ್ಗಾವಣೆಗೆ ಆಗ್ರಹಿಸಿ ಕರ್ನಾಟಕ ಪ್ರದೇಶ ಕೋಲಿ ಸಮಾಜ ರಾಜ್ಯ ಸಂಘಟನಾ ಕಾರ್ಯಾರ್ಶಿ ಉಮೇಶ.ಕೆ. ಮುದ್ನಾಳ ಅವರು ಯಾದಗಿರಿ ಜಿಲ್ಲಾಧಿಕಾರಿಗಳ ಮುಖಾಂತರ ರಾಜ್ಯದ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಮಾತನಾಡಿದ ಅವರು ಸರ್ಕಾರ ಪೋಲಿಸ್ ಇಲಾಖೆಯಲ್ಲಿ ಮಹತ್ವದ ಬೆಳವಣಿಗೆಯೊಂದನ್ನು ವರ್ಗಾವಣೆ ಕಡತದ ಮಸೂದೆಯನ್ನು ಜಾರಿಗೊಳಿಸಿದೆ. ಈ ಕುರಿತು ಮಾನ್ಯ ಮುಖ್ಯಮಂತ್ರಿಗಳಾದ ತಾವು ಆದೇಶ ಹೊರಡಿಸಿದ ಒಂದೇ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಐದು ವರ್ಷಗಳಿಗೂ ಅಧಿಕ ಸೇವೆ ಸಲ್ಲಿಸುತ್ತಿದ್ದರೆ ಅಂತಹ ಅಧಿಕಾರಿ ಸಿಬ್ಬಂದಿಗಳನ್ನು ಅತೀ ಶೀಘ್ರದಲ್ಲೆ ವರ್ಗಾವಣೆ ಮಾಡಬೇಕು ಹಳೆಯ ಠಾಣೆಯಲ್ಲಿ ಮುಂದುವರೆಯಲು ಬೀಡಬಾರದು ಎಂದು ಆದೇಶವಾಗಿದ್ದು, ಆದರೆ ಯಾದಗಿರಿ ಜಿಲ್ಲೆಯಲ್ಲಿ ಮಾತ್ರ ಅದೇ ಹಳೆಯ ಪದ್ದತಿ ಚಾಲ್ತಿಯಲ್ಲಿ ಇದ್ದು ಇದರಿಂದ ಯಾದಗಿರಿ ಜಿಲ್ಲೆಯಲ್ಲಿರುವ ಯಾದಗಿರಿ, ಗುರುಮಿಠಕಲ್,



ಉದಯವಾಹಿನಿ ಚಿತ್ರ

**ಪೊಲೀಸ್ ಇಲಾಖೆ ನಿಯಮ ಉಲ್ಲಂಘನೆ**

ಶಹಾಪೂರ, ವಡಗೇರಾ, ಸೈದಾಪೂರ, ಕೆಂಭಾವಿ, ನಾರಯಣಪೂರ, ಹುಣಸಗಿ ಸುರಪುರ, ಕಕ್ಕೆರಾ ಸೇರಿದಂತೆ ಬಹುತೇಕ ಎಲ್ಲಾ ಠಾಣೆಗಳಲ್ಲಿ ಎ,ಎಸ,ಐ ಹಾಗೂ ಹೆಡ್ ಕಾನ್ಸಟೇಬಲ್ ,ಕಾನ್ಸಸ್ಟೇಬಲ್ ಸೇರಿ ದಂತೆ 5 ರಿಂದ 10 ವರ್ಷಗಳ ಅವಧಿಯಲ್ಲಿ ಒಂದೇಡೆ ಸೇವೆ ಸಲ್ಲಿಸುತ್ತಿದ್ದು, ಸರ್ಕಾರದ ನಿಯಮವನ್ನು ಯಾದಗಿರಿ ಜಿಲ್ಲೆಯ ಪೋಲಿಸ ಇಲಾಖೆ ಉಲ್ಲಂಘನೆ ಮಾಡುತ್ತಿದೆ.

ಇದರಿಂದ ಜನಸಾಮಾನ್ಯರ ಪೋಲಿಸ್ ಠಾಣೆ ಹೋಗಲು ಹಿಂದೇಟು ಹಾಕುತ್ತಿದ್ದಾರೆ ಕೆಲವರು ಪಟ್ಟಬದ್ರ ಹಿತಾ ಸಕ್ತಿಗಳ ಕೃಪಾ ಕಟಾಕ್ಷದಿಂದ ಸೇವೆ ಮುಂದುವರೆಸಿದ್ದು ಅಕ್ರಮಗಳಿಗೆ ಸಾಥ ನೀಡುತ್ತಿರುವದು ಕಂಡು ಬರುತ್ತಿದೆ ಕೂಡಲೇ ಸರ್ಕಾರದ ಆದೇಶದ ನಿಯಮದಂತೆ ಪೋಲಿಸ್ ಇಲಾಖೆಯಲ್ಲಿ ಒಂದೇ ಠಾಣೆಯಲ್ಲಿ 5 ವರ್ಷಕ್ಕೂ ಮೇಲ್ಪಟ್ಟು ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳನ್ನು ವರ್ಗಾವಣೆ ಮಾಡಿ ಪೋಲಿಸ್ ಠಾಣೆಯಲ್ಲಿ ಕಾನೂನು ಕ್ರಮಕ್ಕೆ ಮುಂದಾಗಬೇಕೆಂದು ಒತ್ತಾಯಿಸಿದರು. ಒಂದು ವೇಳೆ ಮುಂದಾಗದೆ ಹೋದಲ್ಲಿ ಬಹಿರಂಗವಾಗಿ ಹೋರಾಟ ಮಾಡಲಾಗುವುದೆಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಬಸವರಾಜ್ , ಯಂಕಪ್ಪ ಪ್ರಭು ಶರಣು, ಸಾಬಯ್ಯ , ವಿರೇಶ್, ಕಾಡಪ್ಪ, ಜಮಾಲ್, ವೆಂಕಟರೆಡ್ಡಿ, ರಫೀಕ್, ನವೀನ, ಬಾಬಾ ಖಾನ್, ಆಂಜನೇಯ, ರವಿ, ವಿಜಯಕುಮಾರ್, ತಾಯಪ್ಪ, ಬನ್ನಪ್ಪ, ಮಹೇಶ್, ಬನಶಂಕರ, ಗೌಸ್, ನರಸಿಂಹ, ಶಿವಾನಂದ, ಯಲ್ಲಪ್ಪ, ಮೈಬುಬೂಸಾಬ್, ಸೇರಿ ಅನೇಕರು ಉಪಸ್ಥಿತರಿದ್ದರು..

---

# ನೆರೆ ಪೀಡಿತ ಪ್ರದೇಶಕ್ಕೆ ನ್ಯಾಯಾಧೀಶರ ಭೇಟಿ

• **ಉದಯವಾಹಿನಿ ನಲ್ಲೂರು**

ಒಂದು ವಾರದಿಂದ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗುತ್ತಿದ್ದು, ಅನೇಕ ಮನೆಗಳಿಗೆ ಹಾನಿಯಾಗಿದೆ. ಜನರ ಸಂಕಷ್ಟಗಳಿಗೆ ತಾಲ್ಲೂಕು ಆಡಳಿತ ಸ್ಪಂದಿಸಿ, ಅವರಿಗೆ ನೆರವು ನೀಡಬೇಕು’ ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶ ಸಿದ್ಧಲಿಂಗಯ್ಯ ಗಂಗಾಧರ ಮಠ್ ಸೂಚಿಸಿದರು. ತಾಲ್ಲೂಕಿನ ನಲ್ಲೂರು ಗ್ರಾಮದ ನೆರೆ ಪೀಡಿತ ಪ್ರದೇಶಕ್ಕೆ ಭೇಟಿ ನೀಡಿ ಅವರು ಮಾತನಾಡಿದರು.

ಮಳೆಯ ನೀರು ಸರಾಗವಾಗಿ ಹರಿದು ಹೋಗುವಂತೆ ಚರಂಡಿಗಳಲ್ಲಿನ ಹೂಳನ್ನು ತೆಗೆಯಬೇಕು. ಚರಂಡಿಗಳಲ್ಲಿ ಗಿಡಗಳು ಬೆಳೆದಿದ್ದರೆ ಸ್ವಚ್ಛಗೊಳಿಸಬೇಕು. ಮಳೆಗಾಲದಲ್ಲಿ ಆಯಾ ಗ್ರಾಮ ಪಂಚಾಯಿತಿಯವರು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡರೆ ಜನರಿಗೆ ಕಷ್ಟವಾಗುವುದಿಲ್ಲ.

ಯಾವುದೇ ಕಾರಣಕ್ಕೂ ಉದಾಸೀನ ಮಾಡದೇ ಗ್ರಾಮದ ಸ್ವಚ್ಛತೆಯ ಬಗ್ಗೆ ಗಮನಹರಿಸಬೇಕು. ನೊಂದವರಿಗೆ ನೆರವು ನೀಡುವುದು ಮಾನವೀಯತೆ. ನೊಂದವರು ಇನ್ನಷ್ಟು ನೊಂದುಕೊಳ್ಳುವಂತೆ ಅಧಿಕಾರಿಗಳು ಕಚೇರಿಗಳಿಗೆ ಅಲೆದಾಡಿಸಬಾರದು ಎಂದರು.


ಉದಯವಾಹಿನಿ ಚಿತ್ರ

ಈ ಬಾರಿಯ ಮಳೆಗೆ ಇದುವರೆಗೆ 60 ಮನೆಗಳು ಬಿದ್ದಿವೆ. ಜೂನ್ ತಿಂಗಳವರೆಗೆ ಸರ್ಕಾರದ ಮಾರ್ಗಸೂಚಿ ಪ್ರಕಾರ ಪರಿಹಾರ ಮೊತ್ತವನ್ನು ಸಂತ್ರಸ್ತರ ಖಾತೆಗಳಿಗೆ ನೇರವಾಗಿ ಜಮೆ ಮಾಡಲಾಗಿದೆ.

ಜುಲೈ ತಿಂಗಳಲ್ಲಿ ಬಿದ್ದಿರುವ ಮನೆಗಳಿಗೆ ಪರಿಹಾರ ನೀಡಲಾಗುವುದು ಎಂದು ತಹಶೀಲ್ದಾರ್ ಪಿ.ಎಸ್. ಎರ್ರಿಸ್ವಾಮಿ ಹೇಳಿದರು.

ತಾಲ್ಲೂಕು ವೈದ್ಯಾಧಿಕಾರಿ ಡಾ.ಈ. ಶಿವಕುಮಾರ್, ಪಶು ಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಡಾ. ಅಶೋಕ್ ಕುಮಾರ್, ವಕೀಲರ ಸಂಘ ತಾಲ್ಲೂಕು ಘಟಕದ ಉಪಾಧ್ಯಕ್ಷ ಬಾಬುಜಾನ್, ಕಾರ್ಯದರ್ಶಿ ಎಂ.ಎಸ್. ಜಗದೀಶ್ ಉಪಸ್ಥಿತರಿದ್ದರು.

---

# ಸಿದ್ದರಾಮಯ್ಯನ ವಿರುದ್ಧ ಆರೋಪ ಬಿಜೆಪಿ ಪಿತೂರಿ: ಪಂಪಾಪತಿ

• **ಉದಯವಾಹಿನಿ ಬಳ್ಳಾರಿ**

ವಿರೋಧ ಪಕ್ಷಗಳು ಆಳುವ ಪಕ್ಷದ ವಿರುದ್ಧ ಕೇಳುವ ಪಕ್ಷವಾಗಬೇಕೆ ಹೊರತು ಕುತಂತ್ರದಿಂದ ಕೂಡಿರಬಾರದು ಎಂದು ಕಾಂಗ್ರೇಸ್ ಮುಖಂಡ ಕಲ್ಲುಕಂಬ ಪಂಪಾಪತಿ ಕಿಡಿಗಾರಿದರು. ಅವರು ಸ್ನೇಹ ಸಂಪುಟದಲ್ಲಿ ಸುದ್ದಿಗೋಷ್ಠಿ ಮಾಡಿ ಮಾತನಾಡಿ ಸರ್ಕಾರದ ದೋಷಪೂರಿತ ಅಥವಾ ಕಣ್ತಪ್ಪಿನಿಂದ ಆದ ಅಚತುರ್ಯವನ್ನು ನೆಪ ಮಾಡಿಕೊಂಡು ರುತ ಆರೋಪವನ್ನು ಮಾಡುತ್ತಿದ್ದಾರೆ ಇದು ಸತ್ಯಕ್ಕೆ ದೂರವಾದ ಸಂಗತಿ ಮೂಡ 50 ಅನುಪಾತದಲ್ಲಿ ನಿವೇಶನಗಳನ್ನು ಮಂಜೂರು ಮಾಡುತ್ತದೆ ಹೊರತು ಯಾರಿಗೂ ಹೆಚ್ಚಿನ ನಿವೇಶನಗಳನ್ನು ನೀಡಿರುವುದಿಲ್ಲ ಇದು ಈಗಿನದಲ್ಲ ಎಲ್ಲಾ ಮುಖ್ಯಮಂತ್ರಿಗಳು ಮತ್ತು ಸಚಿವರು ಮಾಡಿರುವ ವಿಷಯವಾಗಿದೆ ಇದನ್ನು ಬಿಜೆಪಿ ದೊಡ್ಡದು ಮಾಡುವ ಅವಶ್ಯಕತೆ ಇಲ್ಲ ಮುಖ್ಯಮಂತ್ರಿ ಇದ್ದಾಗಲೇ ಯಡಿಯೂರಪ್ಪನವರು ಜಿಂದಾಲ್ ಕಂಪನಿಯಿಂದ ಇಪ್ಪತ್ತು ಕೋಟಿ ರೂಪಾಯಿ ಚೆಕ್ಕನ್ನು ಪಡೆದುಕೊಂಡು ಹೇಲಿಗೆ ಹೋಗಿದ್ದರು ಇದು ಅದಕ್ಕಿಂತ ದೊಡ್ಡದಲ್ಲ ಇದು ಕೇವಲ ರಾಜಕೀಯ ಪಿತೂರಿ ಹೊರತು ಬೇರೆ ಯಾವುದೂ ಅಲ್ಲ ಎಂದು ಕಲ್ಲುಕಂಬ ಪಂಪಾಪತಿ ಆರೋಪಿಸಿದರು.


ಉದಯವಾಹಿನಿ ಚಿತ್ರ

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರನಿಗೆ ರಾಜ್ಯದ ಬಗ್ಗೆ ಕಳಕಳಿ ಇದ್ದರೆ ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯದ ಕುರಿತು ನಿಮ್ಮ ಪಕ್ಷದ ಸಂಸದರದ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡು ರಾಜ್ಯಕ್ಕೆ ನ್ಯಾಯ ಒದಗಿಸಿಕೊಡು ಆಗ ನೀನು ನಾಯಕನಾಗುತ್ತೀಯಾ ಸುಳ್ಳು ಆರೋಪಗಳಿಂದ ನೀನು ನಾಯಕನಾಗಲಾರೆ ಬಾಲಕ ವಿಜೇಂದ್ರ ಎಂದು ವಿಜಯೇಂದ್ರನ ಕುರಿತು ಅಸಮಾಧಾನವನ್ನು ವ್ಯಕ್ತಪಡಿಸಿದರು. ಈ ವಿಷಯವಾಗಿ ರಾಜ್ಯದ ಮಾಜಿ ಅಧ್ಯಕ್ಷರಾದ ಯಡಿಯೂರಪ್ಪನವರು ಸುಮ್ಮನಿದ್ದಾರೆ ಬಾಲಕ ವಿಜೇಂದ್ರ ನೀನು ಅಹಿಂದ ಜನಾಂಗದ ಅಜಾತಶತ್ರುವಾದ ಸಿದ್ದರಾಮಯ್ಯನ ವಿರುದ್ಧ ಮಾತನಾಡುತ್ತಿದ್ದೀಯ ಎಚ್ಚ ಎಂದು ಎಚ್ಚರಿಕೆಯನ್ನು ನೀಡಿದರು.

> **ಬಿಜೆಪಿ ನಾಯಕ ವಿಜಯೇಂದ್ರನಿಗೆ ಸಾರ್ವಜನಿಕರ ಬಗ್ಗೆ ಕಳಕಳಿ ಇಲ್ಲ ಸಾರ್ವಜನಿಕರ ಹಲವಾರು ಸಮಸ್ಯೆಗಳಿಗೆ ಸ್ಪಂದಿಸಿದ ವಿಜಯೇಂದ್ರ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನೇ ಟಾರ್ಗೆಟ್ ಮಾಡುತ್ತಿದ್ದಾರೆ ಅವರು ಎಂದಿಗೂ ಅವರಪ್ಪನ ತರ ಹಗರಣ ಮಾಡಿರುವುದಿಲ್ಲ, ನಾನು ಬಾಲಕ ವಿಜೇಂದ್ರ ನಿಗೆ ಹೇಳುತ್ತೇನೆ ರಾಜ್ಯದಲ್ಲಿ ಹಲವಾರು ಸಾರ್ವಜನಿಕ ಸಮಸ್ಯೆಗಳಿವೆ. ಅದರ ಕುರಿತು ನೀನು ಮಾತನಾಡಬೇಕೆ ಹೊರತು ಸಿಎಂ ವಿರುದ್ಧವಲ್ಲ ನೀವು ಮತ್ತು ನಿಮ್ಮ ಕುಟುಂಬ ಹಗರಣ ಕುಟುಂಬವಾಗಿದೆ ಎಂದು ರಾಜ್ಯದ ಎಲ್ಲರಿಗೂ ಗೊತ್ತಿದೆ.** **-ಕಲ್ಲುಕಂಬ ಪಂಪಾಪತಿ**

ಇದೇ ರೀತಿಯಾಗಿ ಮುಂದಿನ ದಿನಗಳಲ್ಲಿ ರಾಜ್ಯದ ವೈಟ್ ಪೇಪರ್ ಮುಖ್ಯಮಂತ್ರಿ ಎಂದು ಹೆಸರಾದ ಸಿದ್ದರಾಮಯ್ಯನ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಿದರೆ ನಿನ್ನ ವಿರುದ್ಧ ಅಹಿಂದ ಸಂಘಟನೆಯಿಂದ ರಾಜ್ಯಾದ್ಯಂತ ಪ್ರತಿಭಟನೆಯನ್ನು ಮಾಡಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮಹಮ್ಮದ್ ಗೌಸ್, ನಾರಾ ಪ್ರತಾಪ್ ರೆಡ್ಡಿ, ಕುರುಬ ಸಂಘದ ಅಧ್ಯಕ್ಷ ಗಾದಿಲಿಂಗನಗೌಡ, ಎಲ್ ಮಾರಣ್ಣ ಸೇರಿದಂತೆ ಇತರರಿದ್ದರು.

---

## ಮಿನಿ ನ್ಯೂಸ್

### ಕಾರ್ಕಳದ ಅಪಾರ್ಟ್‌ಮೆಂಟ್‌ನಲ್ಲಿ ಸಿಲಿಂಡರ್ ಸ್ಫೋಟ: ಇಬ್ಬರ ಸ್ಥಿತಿ ಗಂಭೀರ

• **ಉದಯವಾಹಿನಿ ಉಡುಪಿ**


ಉದಯವಾಹಿನಿ ಚಿತ್ರ

ಬೆಳ್ಳಂಬೆಳಗ್ಗೆ ಸಿಲಿಂಡರ್ ಸ್ಫೋಟಕ್ಕೆ ಕಾರ್ಕಳದ ಜನತೆ ಬೆಚ್ಚಿ ಬಿದ್ದಿದ್ದಾರೆ. ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು ಇಬ್ಬರು ಗಂಭೀರವಾಗಿ ಗಾಯ ಗೊಂಡಿರುವ ಘಟನೆ ಉಡುಪಿ ಜಿಲ್ಲೆಯ ಕಾರ್ಕಳದ ಆನೆಕೆರೆ ಸೂಪದ ಕೃಷ್ಣಾ ಅಪಾರ್ಟ್ಮೆಂಟ್‌ನಲ್ಲಿ ನಡೆದಿದೆ.

ಬೆಳಗ್ಗೆ ಆನೆಕೆರೆ ಸೂಪದ ಕೃಷ್ಣಾ ಅಪಾರ್ಟ್ಮೆಂಟ್‌ನಲ್ಲಿ ಭಾರೀ ಶಬ್ದದೊಂದಿಗೆ ಮನೆಯೊಂದರ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡಿದೆ. ನೋಡ ನೋಡುತ್ತಿದ್ದಂತೆ ಬೆಂಕಿ ಹೊತ್ತಿ ಉರಿದಿದ್ದು ಘಟನೆಯಲ್ಲಿ ಅಪಾರ್ಟ್ಮೆಂಟ್‌ನ ನಾಲ್ಕು ಮನೆಗಳಿಗೆ ಹಾನಿಯಾಗಿದೆ.

ಮನೆಯ ಗೋಡೆಗಳು ಛಿದ್ರಗೊಂಡು ವಸ್ತುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿದೆ. ಗ್ಯಾಸ್ ಸಿಲಿಂಡರ್ ಸ್ಫೋಟದಿಂದ ಇಬ್ಬರಿಗೆ ಗಂಭೀರ ಗಾಯವಾಗಿದ್ದು, ಸ್ಥಳೀಯರು ಗಾಯಾಳುಗಳನ್ನು ಕಾರ್ಕಳದ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ಕಾರ್ಕಳ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

### ನಿಲ್ಲದ ಕಾಡಾನೆ ದಾಳಿ: ಬೆಳೆ ಹಾನಿ

• **ಉದಯವಾಹಿನಿ ಆಲ್ದೂರು**

ಸಮೀಪದ ಆಗಳದ ಗ್ರಾಮದ ಅಶ್ರಫ್ ಎಂಬುವರ ಕಾಫಿ ತೋಟಕ್ಕೆ ನುಗ್ಗಿದ ಕಾಡಾನೆ, ಬಾಳೆ, ಅಡಿಕೆ, ತೆಂಗು ಮತ್ತು ಕಾಫಿ ಗಿಡಗಳನ್ನು ನಾಶಪಡಿಸಿದೆ. ಕಾಡಾನೆಯನ್ನು ಅರಣ್ಯಕ್ಕೆ ಓಡಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಪರಿಣಾಮಕಾರಿಯಾದ ಪ್ರಯತ್ನ ಮಾಡುತ್ತಿಲ್ಲ. ಹೀಗಾಗಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಪದೇ ಪದೇ ದಾಳಿ ನಡೆಸಿ ಬೆಳೆಹಾನಿ ಮಾಡುತ್ತಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಈಚೆಗೆ ಹಂಗರವಳ್ಳಿ ಗ್ರಾಮದ ಜನ ವಸತಿ ಪ್ರದೇಶದಲ್ಲಿ ಆನೆ ಕಾಣಿಸಿಕೊಂಡಿತ್ತು. ಅರಣ್ಯ ಇಲಾಖೆ ಆನೆಯನ್ನು ಕಾಡಿಗಟ್ಟುವ ಕಾರ್ಯಾಚರಣೆಯನ್ನು ಶೀಘ್ರ ಮಾಡಬೇಕು ಎಂದು ಅಶ್ರಫ್ ಒತ್ತಾಯಿಸಿದರು.

### ಶಿಕ್ಷಣ ಗುಣಮಟ್ಟ ಹೆಚ್ಚಳಕ್ಕೆ ಶಿಕ್ಷಾ ಸಪ್ತಾ ಜಾರಿ

• **ಉದಯವಾಹಿನಿ ಮೊಳಕಾಲ್ಮುರು**

ಶಿಕ್ಷಣದ ಗುಣಮಟ್ಟ ಹೆಚ್ಚಳದ ಜೊತೆಗೆ ವಿದ್ಯಾರ್ಥಿಗಳ ಹಾಜರಾತಿ ಸುಧಾರಣೆಗಾಗಿ ಶಿಕ್ಷಣ ಇಲಾಖೆಯು ನೂತನವಾಗಿ 'ಶಿಕ್ಷಾ ಸಪ್ತಾ' ಎಂಬ ಕಾರ್ಯಕ್ರಮವನ್ನು ಪ್ರಸಕ್ತ ವರ್ಷದಿಂದ ಜಾರಿಗೆ ತಂದಿದೆ. ಸಮಗ್ರ ಶಿಕ್ಷಣ ಇಲಾಖೆಯು ಕೇಂದ್ರ ಸರ್ಕಾರದ ಪ್ರಾಯೋಜಕತ್ವದ ಶಿಕ್ಷಣ ಮಂತ್ರಾಲಯದ ಮೂಲಕ ಇದನ್ನು ಅನುಷ್ಠಾನ ಮಾಡುತ್ತಿದೆ. ಒಂದು ವಾರದ ಈ ಕಾರ್ಯಕ್ರಮ ಜುಲೈ 22ರಿಂದ ಆರಂಭವಾಗಿದ್ದು, ಜುಲೈ 28ಕ್ಕೆ ಮುಕ್ತಾಯವಾಗಲಿದೆ. ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನರಹಿತ ಹಿರಿಯ, ಕಿರಿಯ ಮತ್ತು ಪ್ರೌಢಶಾಲೆಗಳಲ್ಲಿ ಆಯೋಜಿಸುವಂತೆ ಇಲಾಖೆ ಸುತ್ತೋಲೆಯಲ್ಲಿ ಸೂಚಿಸಿದೆ. 7 ದಿನಗಳ ಈ ಯೋಜನೆಯಲ್ಲಿ ಮೊದಲು 'ಕಲಿಕೋಪಕರಣಗಳ ದಿನ, ನಂತರ 'ಭಾರತ ಹಾಗೂ ಕರ್ನಾಟಕದ ಚಟುವಟಿಕೆಗಳ ದಿನ, ಕ್ರೀಡಾದಿನ, ಸಾಂಸ್ಕೃತಿಕ ದಿನ, ಕೌಶಲ ಮತ್ತು ಡಿಜಿಟಲ್ ಉಪಕ್ರಮಗಳ ದಿನ', ಇಕೋ ಕ್ಲಬ್ ಮತ್ತು ಪೌಷ್ಟಿಕಾಂಶ ದಿನ, ಅಂತಿಮವಾಗಿ 'ಸಮುದಾಯ ಪಾಲ್ಗೊಳ್ಳುವಿಕೆ ದಿನ ಇರಲಿದೆ. ಒಂದೊಂದು ಚಟುವಟಿಕೆಗೆ ಒಬ್ಬೊಬ್ಬ ನೋಡಲ್ ಅಧಿಕಾರಿಯನ್ನು ನೇಮಕ ಮಾಡಲಾಗಿದ್ದು, ಪ್ರತಿದಿನದ ಚಟುವಟಿಕೆಯನ್ನು ಮೊಬೈಲ್ ಆಯಪ್ ಮೂಲಕ ಇಲಾಖೆಗೆ ಅಪ್ಲೋಡ್ ಮಾಡಬೇಕಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

### ಭದ್ರಾ ಡ್ಯಾಂ ಭರ್ತಿಗೆ ಕೆಲವೇ ಅಡಿ ಬಾಕಿ

• **ಉದಯವಾಹಿನಿ ದಾವಣಗೆರೆ**

ತುಂಗಭದ್ರಾ ನದಿಯಲ್ಲಿ 75 ಸಾವಿರ ಕ್ಯೂಸೆಕ್ ಗಿಂತಲೂ ಅಧಿಕ ನೀರು ಹರಿಯುತ್ತಿದ್ದು, ಭದ್ರಾ ಜಲಾಶಯ ಭರ್ತಿಗೆ ಕೆಲವೇ ಅಡಿಗಳು ಬಾಕಿ ಇರುವುದರಿಂದ ಯಾವುದೇ ಕ್ಷಣದಲ್ಲಿ ನದಿಯಲ್ಲಿನ ನೀರಿನ ಪ್ರಮಾಣ ಏರಿಕೆಯಾಗಲಿದೆ. ನದಿ ಪಾತ್ರದಲ್ಲಿನ ಜನರು ಎಚ್ಚರಿಕೆಯಿಂದಿರಬೇಕೆಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ. ಜಲಾಶಯದಿಂದ 74105 ಕ್ಯೂಸೆಕ್ ನೀರು ತುಂಗಭದ್ರಾ ನದಿಯಲ್ಲಿ ಹರಿಯುತ್ತಿದೆ. ಭದ್ರಾ ಜಲಾಶಯ ಭರ್ತಿಯಾಗಲು 5 ಅಡಿ ಬಾಕಿ ಇದ್ದು, 35557 ಕ್ಯೂಸೆಕ್ ಒಳಹರಿವು ಇದೆ. ಮತ್ತು ಮಲೆ ನಾಡಿನಲ್ಲಿ ಉತ್ತಮ ಮಳೆ ಬರುತ್ತಿರುವುದರಿಂದ ನೀರಿನ ಒಳಹರಿವು ಹೆಚ್ಚಲಿರುವುದರಿಂದ ಭದ್ರಾ ಜಲಾಶಯ ಭರ್ತಿಯಾಗಿ ಯಾವುದೇ ಕ್ಷಣದಲ್ಲಿ ನದಿಗೆ ನೀರು ಬಿಡಬಹುದಾಗಿದೆ. ನದಿಪಾತ್ರದಲ್ಲಿನ ಜನರು ತಮ್ಮ ಆಸ್ತಿ, ಜಾನುವಾರುಗಳನ್ನು ರಕ್ಷಣೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಎಚ್ಚರ ವಹಿಸಬೇಕು ಎಂದು ತಿಳಿಸಿದ್ದಾರೆ. ತುಂಗಾದಿಂದ ನೀರು ಬರುತ್ತಿದ್ದು, ಭದ್ರಾ ತುಂಬಿದ ನಂತರ ನದಿಯಲ್ಲಿನ ನೀರನ ಪ್ರಮಾಣ ಗಣನೀಯವಾಗಿ ಹೆಚ್ಚಲಿದೆ. ಇದರಿಂದ ನದಿಯಲ್ಲಿನ ನೀರಿನ ಮಟ್ಟ ಅಪಾಯ ಮಟ್ಟದಲ್ಲಿರುತ್ತದೆ. ಇದರಿಂದ ಹೊನ್ನಾಳಿ, ನ್ಯಾಮತಿ, ಹರಿಹರ ತಾಲ್ಲೂಕುಗಳಲ್ಲಿನ ನದಿ ಪಾತ್ರದಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗುತ್ತದೆ.

---

# ಪಾಲಿಕೆಯ ವ್ಯಾಯಾಮ ಶಾಲೆ ಕಟ್ಟಡ ಶಿಥಿಲ

## ಹಳೆ ಕಟ್ಟಡಗಳ ಅವಶೇಷ, ಸುತ್ತಮುತ್ತಲಿನ ಮನೆಗಳ ತ್ಯಾಜ್ಯ ಹಾಗೂ ಶೌಚ ಗುಂಡಿಯಾಗಿ ಪರಿವರ್ತನೆ

• **ಉದಯವಾಹಿನಿ ಹುಬ್ಬಳ್ಳಿ**

ಹಳೇ ಹುಬ್ಬಳ್ಳಿಯ ಚೆನ್ನಪೇಟೆಯಲ್ಲಿನ ನಾರಾಯಣ ಸೋಪಾದಲ್ಲಿರುವ ಮಹಾನಗರ ಪಾಲಿಕೆಯ ವ್ಯಾಯಾಮ ಶಾಲೆ ಕಟ್ಟಡವು ಸಂಪೂರ್ಣವಾಗಿ ಶಿಥಿಲವಾಗಿದ್ದು, ಇಡೀ ಕಟ್ಟಡ ಕುಸಿಯುವ ಸ್ಥಿತಿಯಲ್ಲಿದೆ. ಅರವಿಂದ ನಗರದ ಸೇರಿದಂತೆ ಚೆನ್ನಪೇಟೆ, ನಾರಾಯಣ ಸೋಪಾ, ಪಾಂಡುರಂಗ ಕಾಲೊನಿಯ ಯುವಕರ ವ್ಯಾಯಾಮಕ್ಕೆ ಅನುಕೂಲವಾಗಲಿ ಎಂದು 40 ವರ್ಷಗಳ ಹಿಂದೆ 50X50 ಅಳತೆಯಲ್ಲಿ ಮಹಾನಗರ ಪಾಲಿಕೆ ವತಿಯಿಂದ ವ್ಯಾಯಾಮ ಶಾಲೆ ಕಟ್ಟಡ ನಿರ್ಮಿಸಲಾಗಿತ್ತು.

ಕಟ್ಟಡವು ಕ್ರಮೇಣ ಶಿಥಿಲ ಹಂತ ತಲುಪಿದಂತೆ, ನಿರ್ವಹಣೆ ಇಲ್ಲದೇ ಪಾಳು ಬಿದ್ದಿತು. ಕಟ್ಟಡದ ನಾಲ್ಕೂ ಪಿಲ್ಲರ್‌ಗಳ ತಳಭಾಗದ ಸಿಮೆಂಟ್ ಕಳಚಿ ಬಿದ್ದಿದ್ದೆ. ಕಬ್ಬಿಣದ ಸರಳುಗಳು ತುಕ್ಕು ಹಿಡಿದು


ಉದಯವಾಹಿನಿ ಚಿತ್ರ

**ಕಟ್ಟಡ ಕುಸಿಯುವ ಸ್ಥಿತಿಯಲ್ಲಿ**

ಹೊರಗೆ ಬಂದಿವೆ. ಕಟ್ಟಡವು ಬೀಳುವ ಸ್ಥಿತಿಯಲ್ಲಿದೆ. ವ್ಯಾಯಾಮ ಶಾಲೆಯಲ್ಲಿ ಯಾವುದೇ ಪರಿಕರಗಳಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಬಾಗಿಲು ಮುಚ್ಚಿದೆ. ಇದೀಗ ಇಡೀ ಕಟ್ಟಡವು ಹಳೆ ಕಟ್ಟಡಗಳ ಅವಶೇಷ, ಸುತ್ತಮುತ್ತಲಿನ ಮನೆಗಳ ತ್ಯಾಜ್ಯ ಹಾಗೂ ಶೌಚ ಗುಂಡಿಯಾಗಿ ಪರಿವರ್ತನೆಯಾಗಿದೆ.

ವ್ಯಾಯಾಮ ಶಾಲೆಯ ಕಟ್ಟಡವು ಶಿಥಿಲವಾಗಿದ್ದು, ಕಟ್ಟಡವನ್ನು ತೆರವುಗೊಳಿಸಿ, ಇಲ್ಲಿನ ಜನರ ಅನುಕೂಲಕ್ಕಾಗಿ ಕರ್ನಾಟಕ ಒನ್ ಕೇಂದ್ರ, ಅಂಗನವಾಡಿ ಕಟ್ಟಡ ಅಥವಾ ಸಮುದಾಯ ಆರೋಗ್ಯ ಕೇಂದ್ರವನ್ನು ನಿರ್ಮಿಸಿ ಎಂದು ಈಚೆಗೆ ಪಾಲಿಕೆ ಅಧಿಕಾರಿಗಳಲ್ಲಿ ಸ್ಥಳೀಯರು ಮನವಿ ಮಾಡಿದ್ದರು. ಆದರೂ ಪ್ರಯೋಜನವಾಗಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

> **ವ್ಯಾಯಾಮ ಶಾಲೆಯು ಹಿಂದೆ ಚೆನ್ನಾಗಿತ್ತು. ಸುತ್ತಮುತ್ತಲಿನ ಭಾಗದ 20ಕ್ಕೂ ಹೆಚ್ಚು ಯುವಕರು ನಿತ್ಯ ಬೆಳಿಗ್ಗೆ, ಸಂಜೆ ಇಲ್ಲಿ ವ್ಯಾಯಾಮ ಮಾಡುತ್ತಿದ್ದರು. ಸರಿಯಾದ ನಿರ್ವಹಣೆ ಇಲ್ಲದೆ ಶಾಲೆ ಬಾಗಿಲು ಮುಚ್ಚಿತು. ಕ್ರಮೇಣ ವ್ಯಾಯಾಮದ ಕಬ್ಬಿಣದ ಪರಿಕರಗಳು ಕಳವಾದವು. ಹುಡುಗರು ಇಲ್ಲಿಗೆ ಬರುವುದನ್ನೇ ನಿಲ್ಲಿಸಿದರು. ಇದರಿಂದಾಗಿ ಇಡೀ ಕಟ್ಟಡವು ಪಾಳು ಬಿದ್ದಿತು. ಇವಾಗ ಕಟ್ಟಡ ಪಿಲ್ಲರ್‌ಗಳ ತಳಭಾಗವು ಮಳೆ ನೀರು, ಸುತ್ತಮುತ್ತಲಿನ ಮನೆಗಳ ಶೌಚ ನೀರಿನಿಂದ ಸಂಪೂರ್ಣವಾಗಿ ಹಾಳಾಗಿದೆ. ಕಬ್ಬಿಣದ ಸರಳುಗಳು ತುಕ್ಕು ಹಿಡಿದಿವೆ. ಯಾವ ಸಮಯದಲ್ಲಾದರೂ ಬೀಳುವ ಸ್ಥಿತಿಯಿದೆ**
> **-ಸಂಜಯ್ ಬೂತೆ, ನಾರಾಯಣ ಸೋಪಾದ ನಿವಾಸಿ**

ನಿರಂತರ ಮಳೆಯಿಂದಾಗಿ ಕಟ್ಟಡದ ಇಡೀ ಭಾಗವು ನೀರಿನಿಂದ ನೆನೆದಿದೆ. ಒಂದು ವೇಳೆ ಕುಸಿದು ಬಿದ್ದರೆ, ಕಟ್ಟಡದ ಸುತ್ತಮುತ್ತ ಇರುವ 15ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗುವ ಸಾಧ್ಯತೆ ಇದೆ.

ಅಲ್ಲದೆ ಕಟ್ಟಡದ ಸುತ್ತಲೂ ಮಕ್ಕಳು ಆಟವಾಡುವುದರಿಂದ ಮಕ್ಕಳ ಜೀವಕ್ಕೆ ಹಾನಿಯಾಗುವ ಸಾಧ್ಯತೆಯೂ ಇದೆ’ ಎಂದು ಕಟ್ಟಡದ ಬಳಿಯ ಮನೆಯೊಂದರ ನಿವಾಸಿ ಪರಶುರಾಮ ಕಬಾಡಿ ಆತಂಕ ವ್ಯಕ್ತಪಡಿಸುತ್ತಾ ಶಿಥಿಲವಾಗಿದ್ದ ಕಟ್ಟಡವನ್ನು ತೋರಿಸಿದರು.

---

# ನೆರೆ ಪರಿಹಾರ 777 ಕೋಟಿ ಬಿಡುಗಡೆ: ಕೃಷ್ಣ ಬೈರೇಗೌಡ

• **ಉದಯವಾಹಿನಿ ಹೊಳೆನರಸೀಪುರ**

ರಾಜ್ಯದಲ್ಲಿ ನೆರೆ ಪರಿಹಾರ ಹಾಗೂ ಇತರೆ ಕಾರ್ಯಕ್ರಮಗಳಿಗೆ ಒಟ್ಟು 777 ಕೋಟಿ ಬಿಡುಗಡೆ ಮಾಡಲಾಗಿದೆ. ಹಾಸನ ಜಿಲ್ಲೆಗೆ 23 ಕೋಟಿ ನೀಡಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಶನಿವಾರ ತಿಳಿಸಿದರು.

ಪಟ್ಟಣದಲ್ಲಿ ನೆರೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ನೆರೆ ಹಾವಳಿಗೆ ತುತ್ತಾದವರಿಗೆ ತಕ್ಷಣ ನೆರವು ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು. ಮನೆಗೆ ಭಾಗಶಃ ಹಾನಿಯಾದರೆ 50 ಸಾರ ಕೊಡಲು ಮುಖ್ಯಮಂತ್ರಿಯೊಂದಿಗೆ ಚರ್ಚಿಸಲಾಗಿದೆ. ಪೂರ್ಣ ಹಾನಿಯಾದರೆ 1.25 ಲಕ್ಷ ಪರಿಹಾರದ ಜೊತೆ ಹೊಸ ಮನೆ ನೀಡುತ್ತೇವೆ. ಈ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆ’ ಎಂದರು. ರಾಜ್ಯದಲ್ಲಿ ವಾಡಿಕೆ ಪ್ರಕಾರ 41.9 ಸೆಂ.ಮಿ ೀ. ಮಳೆ ಯಾಗಬೇಕಿತ್ತು. ಈಗಾಗಲೇ 54 ಸೆಂ.ಮೀ.ಗಿಂತ ಹೆಚ್ಚು ಮಳೆಯಾಗಿದೆ. 600 ಮನೆಗಳು ಬಿದ್ದಿವೆ. ಸಾವುಗಳು ಸಂಭಸಿವೆ. 114 ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ. ಕಾಲಕಾಲಕ್ಕೆ ಪರಿಹಾರ ನೀಡಲಾಗುತ್ತಿದೆ’ ಎಂದರು.

**ಮೇಕೆದಾಟು, ಕಳಸಾ- ಬಂಡೂರಿಗೆ ಅನುಮತಿ ಕೊಡಿಸಿ:** ದೊಡ್ಡ ಯಜಮಾನರು, ಚಿಕ್ಕ ಯಜಮಾನರು


ಉದಯವಾಹಿನಿ ಚಿತ್ರ

**1.25 ಲಕ್ಷ ಪರಿಹಾರದ ಜೊತೆ ಹೊಸ ಮನೆ**

ನಿನ್ನೆ ಪ್ರಧಾನಿಯನ್ನು ಭೇಟಿ ಮಾಡಿದ್ದಾರೆ. ಭೇಟಿ ವೇಳೆ ಪ್ರಧಾನಿ ಕೈ ಡಿದು, ಮೇಕೆದಾಟು, ಕಳಸಾ- ಬಂಡೂರಿ ಯೋಜನೆಗೆ ಸಹಿ ಹಾಕಿಸಿದ್ದರೆ ನಾವು ಧನ್ಯವಾದ ಹೇಳಿ ಕೈ ಮುಗಿಯುತ್ತಿದ್ದೆವು’ ಎಂದು ಎಚ್.ಡಿ. ದೇವೇಗೌಡ ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರನ್ನು ಪರೋಕ್ಷವಾಗಿ ಟೀಕಿಸಿದರು. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕದಿಂದ ಒಬ್ಬೊಬ್ಬ ಕ್ಯಾಬಿನೆಟ್ ದರ್ಜೆ ಸಚಿವರಾಗಿದ್ದಾರೆ. ಮೇಕೆದಾಟು, ಕಳಸಾ-ಬಂಡೂರಿ ಯೋಜನೆಗೆ ಏಕೆ ಅನುಮತಿ ಕೊಡಿಸಲು ಆಗುತ್ತಿಲ್ಲ ಎಂದು ಪ್ರಶ್ನಿಸಿದರು.

ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಅನ್ಯಾಯ ಮಾಡಲಾಗಿದೆ. ಭದ್ರಾ ಮೇಲ್ದಂಡೆ ಯೋಜನೆಗೆ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ. ಘೋಷಿಸಿರುವ 5 ಸಾರ ಕೋಟಿಯನ್ನು ಬಿಡುಗಡೆ ಮಾಡಿಸಿ’ ಎಂದು ಒತ್ತಾಯಿಸಿದರು.

# ಭಾರತ-ಶ್ರೀಲಂಕಾ 2ನೇ ಟಿ20 ಪಂದ್ಯಕ್ಕೆ ಮಳೆ ಅಡ್ಡಿ

## ಶ್ರೀಲಂಕಾ 161 ಭಾರತಕ್ಕೆ ಗೆಲ್ಲಲು ಸವಾಲಿನ ಗುರಿ



ಭಾರತಕ್ಕೆ ಸವಾಲಿನ ಗುರಿ

ಭಾರತದ ವಿರುದ್ಧದ 2ನೇ ಟಿ20 ಪಂದ್ಯದಲ್ಲಿ ಶ್ರೀಲಂಕಾ ತಂಡ ಗೆಲ್ಲಲು 162 ರನ್ ಗಳ ಸವಾಲಿನ ಗುರಿ ನೀಡಿದೆ. ಪಳ್ಳೆಕೆಲೆ ಅಂತಾರಾಷ್ಟ್ರೀಯ ಕ್ರಿಕೆಟ್ ಮೈದಾನದಲ್ಲಿ ನಡೆಯುತ್ತಿರುವ 2ನೇ ಟಿ20 ಪಂದ್ಯದಲ್ಲಿ ಟಾಸ್ ಸೋತರೂ ಮೊದಲು ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ಶ್ರೀಲಂಕಾ ತಂಡ ನಿಗಧಿತ 20 ಓವರ್ ನಲ್ಲಿ 9 ವಿಕೆಟ್ ನಷ್ಟಕ್ಕೆ 161 ರನ್ ಗಳ ಸವಾಲಿನ ಮೊತ್ತ ಪೇರಿಸಿದೆ. ಶ್ರೀಲಂಕಾ ಪರ ಆರಂಭಿಕರಾದ ಪಥುಂ ನಿಸಾಂಕಾ 32 ರನ್, ಕುಸಾಲ್ ಪೆರೆರಾ 53 ರನ್ ಮತ್ತು ಕಮಿಂಡು ಮೆಂಡಿಸ್ 26 ರನ್ ಗಳಿಸಿ ಲಂಕಾದ ಸವಾಲಿನ ಮೊತ್ತಕ್ಕೆ ಕಾರಣರಾದರು.

ಇನ್ನಿಂಗ್ಸ್ ಆರಂಭದಲ್ಲಿ ಭರ್ಜರಿ ಬ್ಯಾಟಿಂಗ್ ನಡೆಸಿದ ಶ್ರೀಲಂಕಾಗೆ ಮತ್ತೆ ಕೆಳ ಕ್ರಮಾಂಕದ ಬ್ಯಾಟರ್ ಗಳ ಕಳಪೆ ಪ್ರದರ್ಶನ ಬೃಹತ್ ಮೊತ್ತದ ಕನಸಿಗೆ ಮುಳುವಾಯಿತು. ಶನಕಾ ಮತ್ತು ಹಸರಂಗಾ ಶೂನ್ಯ ಸುತ್ತಿದರು. ಇನ್ನು ಭಾರತದ ಪರ ರವಿ ಬಿಷ್ಣೋಯ್ 3 ವಿಕೆಟ್ ಪಡೆದರೆ, ಅರ್ಶ್ ದೀಪ್ ಸಿಂಗ್, ಅಕ್ಸರ್ ಪಟೇಲ್ ಮತ್ತು ಹಾರ್ದಿಕ್ ಪಾಂಡ್ಯಾ ತಲಾ 2 ವಿಕೆಟ್ ಪಡೆದರು. ಮೊದಲ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ರಿಯಾನ್ ಪರಾಗ್ ಈ ಪಂದ್ಯದಲ್ಲಿ ವಿಕೆಟ್ ಪಡೆಯಲು ವಿಫಲರಾದರು.ಅಂತಿಮವಾಗಿ ಶ್ರೀಲಂಕಾ ನಿಗಧಿತ 20 ಓವರ್ ನಲ್ಲಿ 9 ವಿಕೆಟ್ ನಷ್ಟಕ್ಕೆ 161 ರನ್ ಗಳಿಸಿ ಭಾರತಕ್ಕೆ ಗೆಲ್ಲಲು 162 ರನ್ ಗಳ ಸವಾಲಿನ ಗುರಿ ನೀಡಿದೆ.

ಮಳೆಯಿಂದ ಆಟ ಸ್ಥಗಿತ: ಗುರಿ ಬೆನ್ನಟ್ಟಲು ಭಾರತದ ಆರಂಭಿಕರು ಅಖಾಡಕ್ಕಿಳಿದಿದ್ದಾರೆ. ಆದರೆ ಮಳೆಯಿಂದಾಗಿ ಪಂದ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಮಳೆ ನಿಂತ ಬಳಿಕ ಆಟ ಮತ್ತೊಮ್ಮೆ ಆರಂಭವಾಗಲಿದೆ.

ಆದರೆ ಈ ಪಂದ್ಯದಲ್ಲಿ 12 ಓವರ್?ಗಳನ್ನು ಕಡಿತಗೊಳಿಸಲಾಗಿದ್ದು, ಡಕ್ವರ್ತ್ ಲೂಯಿಸ್ ನಿಯಮದ ಪ್ರಕಾರ ಟೀಂ ಇಂಡಿಯಾಗೆ 8 ಓವರ್‌ಗಳಲ್ಲಿ 78 ರನ್‌ಗಳ ಟಾರ್ಗೆಟ್ ನೀಡಲಾಗಿದೆ. ಭಾರತ ತಂಡ ಈಗಾಗಲೇ 3 ಎಸೆತಗಳಲ್ಲಿ 6ರನ್ ಗಳಿಸಿದ್ದು, ಇದೀಗ 45 ಎಸೆತಗಳಲ್ಲಿ 72ರನ್ ಗಳಿಸಬೇಕಿದೆ. ಸಂಜು ಔಟ್ 78 ರನ್?ಗಳ ಗುರಿ ಬೆನ್ನತ್ತಿದ ಟೀಂ ಇಂಡಿಯಾ ಮೊದಲ ಓವರ್?ನಲ್ಲಿ 12 ರನ್ ಗಳಿಸಿ ಶುಭಾರಂಭ ಮಾಡಿತು. ಆದರೆ, ಎರಡನೇ ಓವರ್‌ನಲ್ಲಿ ಭಾರತಕ್ಕೆ ಮೊದಲ ಹೊಡೆತ ಬಿದ್ದಿತು. ಮಹಿಷ್ ತೀಕ್ಷಣ ಮೊದಲ ಎಸೆತದಲ್ಲಿಯೇ ಸಂಜು ಸ್ಯಾಮ್ಸನ್ ಅವರನ್ನು ಬೌಲ್ಡ್ ಮಾಡಿದರು. ಸೌತ್ ಆಫ್ರಿಕಾ ವಿರುದ್ಧ ನಡೆದಿದ್ದ ಏಕದಿನ ಸರಣಿಯ ಕೊನೆಯ ಪಂದ್ಯದಲ್ಲಿ ಸಂಜು ಸ್ಯಾಮ್ಸನ್ ಆಕರ್ಷಕ ಶತಕ ಸಿಡಿಸುವ ಮೂಲಕ ಸೋಲಿನ ಸುಳಿಯಲ್ಲಿದ್ದ ಪಂದ್ಯವನ್ನು ಗೆಲ್ಲಿಸಿದ್ದರು.

# ಮಹಿಳೆಯರನ್ನು ಸೋಲಿಸಿ ಚೊಚ್ಚಲ ಏಷ್ಯಾಕಪ್ ಗೆದ್ದ ಶ್ರೀಲಂಕಾ ತಂಡ

ಫೈನಲ್ ಪಂದ್ಯದಲ್ಲಿ ವೈಫಲ್ಯ ಕಂಡ ಭಾರತ ಮಹಿಳೆಯರ ತಂಡ ಆತಿಥೇಯ ಶ್ರೀಲಂಕಾ ವಿರುದ್ಧ 8 ವಿಕೆಟ್‌ಗಳ ಸೋಲು ಕಂಡಿದ್ದು, ಮಹಿಳೆಯರ ಏಷ್ಯಾ ಕಪ್ ಟ್ರೋಫಿ ಉಳಿಸಲು ವಿಫಲಗೊಂಡಿದೆ. ಕಳೆದ ಬಾರಿ ಭಾರತ ಚಾಂಪಿಯನ್ ಆಗಿತ್ತು, ಅಲ್ಲದೆ, ಈ ಬಾರಿಯೂ ತಂಡ ಉತ್ತಮವಾಗಿತ್ತು. ಆದರೆ, ಕಪ್ ಗೆಲ್ಲುವಲ್ಲಿ ಕೊನೇ ಕ್ಷಣದಲ್ಲಿ ಎಡವಿತು. ಇದೇ ವೇಳೆ ಚಾಮರಿ ಅಟ್ಟಪಟ್ಟು ನೇತೃತ್ವದ ಲಂಕಾ ವನಿತೆಯರು ಮೊದಲ ಬಾರಿಗೆ ಏಷ್ಯಾ ಕಪ್ ಟ್ರೋಫಿಗೆ ಮುತ್ತಿಟ್ಟಿದ್ದಾರೆ. ಫೈನಲ್ ಪಂದ್ಯದಲ್ಲಿ ಸಂಪೂರ್ಣವಾಗಿ ಪಾರಮ್ಯ ಮೆರೆದ ಲಂಕಾ ತಂಡ ಟ್ರೋಫಿ ಗೆದ್ದು ಸಂಭ್ರಮಿಸಿತು. ಭಾರತ ತಂಡ ಹಾಲಿ ಆವೃತ್ತಿಯಲ್ಲೂ ಬಲಾಢ್ಯ ತಂಡವಾಗಿತ್ತು.

ಈ ಹಿಂದಿನ ಎಂಟು ಆವೃತ್ತಿಗಳಲ್ಲಿ 7 ಟ್ರೋಫಿ ಗೆದ್ದಿತ್ತು. ಅಂತೆಯೇ 8ನೇ ಕಪ್ ಗೆಲ್ಲುವ ನಿರೀಕ್ಷೆಯಲ್ಲಿತ್ತು. ಆದರೆ, ಅದಕ್ಕೆ ಲಂಕಾ ವನಿತೆಯರು ಅವಕಾಶ ಕೊಡಲಿಲ್ಲ. ಕಳೆದ 8 ಆವೃತ್ತಿಗಳಲ್ಲಿ 5 ಬಾರಿ ಫೈನಲ್‌ನಲ್ಲಿ ಪ್ರವೇಶಿಸಿದ್ದ ದ್ವೀಪರಾಷ್ಟ್ರ, ಕೊನೆಗೂ 6ನೇ ಪ್ರಯತ್ನದಲ್ಲಿ ಗೆಲುವಿನ ಕನಸು ನನಸಾಗಿಸಿಕೊಂಡಿದೆ.

### ಮಂಧಾನ ಏಕಾಂಗಿ ಹೋರಾಟ

**ಬ್ಯಾಟಿಂಗ್ ಆರಂಭಿಸಿದ ಭಾರತ ಉತ್ತಮ ಆರಂಭ ಪಡೆಯಿತು. ಮೊದಲ ವಿಕೆಟ್‌ಗೆ 44 ರನ್ ಬಂದರೂ ಶಫಾಲಿ ವರ್ಮಾ 16 ರನ್‌ಗಳಿಗೆ ಆಟ ಮುಗಿಸಿದರು. ಫೈನಲ್‌ಗೆ ಎಂಟ್ರಿ ಪಡೆದ ಉಮಾ ಚೆಟ್ರಿ 9 ರನ್‌ಗೆ ನಿರ್ಗಮಿಸಿದರು. ಹರ್ಮನ್‌ಪ್ರೀತ್ ಕೌರ್ (11) ಬೇಗನೆ ಔಟಾದ ಕಾರಣ ದೊಡ್ಡ ಮೊತ್ತ ಪೇರಿಸುವ ಕನಸಿಗೆ ಬ್ರೇಕ್ ಬಿತ್ತು. ಸತತ ವಿಕೆಟ್ ಪತನದ ಮಧ್ಯೆಯೂ ಮಂಧಾನ ಅರ್ಧಶತಕ ಸಿಡಿಸಿ ಆಸರೆಯಾದರು. ಮಂಧಾನ 47 ಎಸೆತಗಳಲ್ಲಿ 10 ಬೌಂಡರಿ ಸಹಿತ 60 ರನ್ ಗಳಿಸಿ ತಂಡವನ್ನು 150ರ ಗಡಿ ದಾಟಿಸಲು ನೆರವಾದರು. ಜೆಮಿಮಾ ರೊಡ್ರಿಗಸ್ 29 ರನ್ ಗಳಿಸಿದರು. ಕೊನೆಯಲ್ಲಿ ರಿಚಾ ಘೋಷ್ ಅಬ್ಬರದ 30 ರನ್ ಕಲೆ ಹಾಕಿದರು. ಪೂಜಾ ವಸ್ತ್ರಾಕರ್ 5, ರಾಧಾ ಯಾದವ್ 1 ರನ್ ಗಳಿಸಿದರು.**



ಇಲ್ಲಿನ ಪಲ್ಲೆಕೆಲೆ ಕ್ರಿಕೆಟ್ ಸ್ಟೇಡಿಯಮ್‌ನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಲಂಕಾ ತಂಡ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 165 ರನ್ ಬಾರಿಸಿತು. ಪ್ರತಿಯಾಗಿ ಬ್ಯಾಟಿ ಮಾಡಿದ ಲಂಕಾ 18.4 ಓವರ್‌ಗಳಲ್ಲೇ 2 ವಿಕೆಟ್ ನಷ್ಟಕ್ಕೆ 167 ರನ್ ಬಾರಿಸಿ ಗೆಲುವಿನ ನಗೆ ಬೀರಿತು. ಸವಾಲಿನ ಗುರಿ ಬೆನ್ನಟ್ಟಿದ ಶ್ರೀಲಂಕಾ 7 ರನ್ ಗಳಿಸಿ ಮೊದಲ ವಿಕೆಟ್ ಕಳೆದುಕೊಂಡು ಆತಂಕಕ್ಕೆ ಬಿತ್ತು. ಆರಂಭಿಕ ಹಿನ್ನಡೆ ಮಧ್ಯೆಯೂ ನಾಯಕಿ ಚಾಮರಿ ಅಟ್ಟಪಟ್ಟು ಭಾರತೀಯ ಬೌಲರ್‌ಗಳನ್ನು ಹಿಮ್ಮೆಟ್ಟಿಸಿದರು. ಅವರಿಗೆ ಹರ್ಷಿತಾ ಸಮರವಿಕ್ರಮ ಬೆಂಬಲವಾಗಿನಿಂತರು. ಹೀಗಾಗಿ ಎರಡನೇ ವಿಕೆಟ್‌ಗೆ ಲಂಕಾ ತಂಡ 87 ರನ್ ಗಳಿಸಿತು. ಇದೇ ವೇಳೆ ಚಾಮರಿ ಅರ್ಧ ಶತಕ ಬಾರಿಸಿದರು.

43 ಎಸೆತಗಳಲ್ಲಿ 9 ಬೌಂಡರಿ, 2 ಸಿಕ್ಸರ್ ಸಹಿತ 61 ರನ್ ಗಳಿಸಿದ್ದ ಚಾಮರಿ ಔಟಾದರೂ ಹರ್ಷಿತಾ ಗೆಲುವಿನ ಕಡೆಗೆ ಮುನ್ನುಗ್ಗಿದರು. ಹರ್ಮನ್ ಪಡೆಯ ವಿರುದ್ಧ ಸವಾರಿ ಮಾಡಿ ಗೆಲುವಿನತ್ತ ಮುನ್ನಡೆಸಿದರು. ಹಾಗೆಯೇ ಅರ್ಧಶತಕ ಪೂರೈಸಿದರು.

# ಶುಭ್‌ಮನ್ ಗಿಲ್ ಬದಲಿಗೆ ಸಂಜು ಸ್ಯಾಮ್ಸನ್‌ಗೆ ಅವಕಾಶ



ಭಾರತ ಮತ್ತು ಶ್ರೀಲಂಕಾ ನಡುವಿನ ಮೂರು ಪಂದ್ಯಗಳ ಎರಡನೇ ಪಂದ್ಯ ಪಲ್ಲೆಕೆಲೆ ಅಂತರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆಯುತ್ತಿದೆ. ಮೊದಲ ಪಂದ್ಯವನ್ನು ಟೀಂ ಇಂಡಿಯಾ 43 ರನ್‌ಗಳಿಂದ ಗೆದ್ದು ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿದೆ.

ಈ ಪಂದ್ಯ ದಲ್ಲಿ ಟೀಂ ಇಂಡಿಯಾ ಗೆದ್ದರೆ ಸರಣಿಯಲ್ಲಿ ಅಜೇಯ ಮುನ್ನಡೆ ಸಾಧಿಸಲಿದ್ದು, ಇನ್ನೊಂದು ಪಂದ್ಯ ಬಾಕಿ ಇರುವಂತೆಯೇ ಸರಣಿ ಕೈವಶ ಮಾಡಿಕೊಳ್ಳಲಿದೆ. ಇತ್ತ ಈ ಪಂದ್ಯದಲ್ಲಿ ಶ್ರೀಲಂಕಾ ತಂಡಕ್ಕೆ ತಿರುಗೇಟು ನೀಡುವ ಅವಕಾಶವಿದ್ದು, ಸರಣಿಯನ್ನು ಸಮಬಲಗೊಳಿಸಲು ಯತ್ನಿಸಲಿದೆ. ಇನ್ನು ಈ ಪಂದ್ಯದ ಟಾಸ್ ಕೂಡ ಮುಗಿದಿದ್ದು, ಟಾಸ್ ಗೆದ್ದ ಟೀಂ ಇಂಡಿಯಾ ನಾಯಕ ಸೂರ್ಯಕುಮಾರ್ ಯಾದವ್ ಮೊದಲು ಬೌಲಿಂಗ್ ಮಾಡಲು ನಿರ್ಧರಿಸಿದ್ದಾರೆ. ಬೌಲಿಂಗ್ ಜೊತೆಗೆ ಉಭಯ ತಂಡಗಳ ಪ್ಲೇಯಿಂಗ್ 11 ಕೂಡ ಹೊರಬಿದ್ದಿದೆ.

ಸಂಜುಗೆ ಅವಕಾಶ: ಶ್ರೀಲಂಕಾ ವಿರುದ್ಧ ಟಾಸ್ ಗೆದ್ದು ಮೊದಲು ಬೌಲಿಂಗ್ ಮಾಡಲು ನಿರ್ಧರಿಸಿದ ಬಳಿಕ ಮಾತನಾಡಿದ ನಾಯಕ ಸೂರ್ಯಕುಮಾರ್ ಯಾದವ್ ಒಂದು ಬದಲಾವಣೆಯೊಂದಿಗೆ ತಂಡ ಕಣಕ್ಕಿಳಿ ಯಲಿದೆ ಎಂದರು. ನಿನ್ನೆಯ ಪಂದ್ಯದಲ್ಲಿ ಆರಂಭಿಕರಾಗಿ ಉತ್ತಮ ಪ್ರದರ್ಶನ ನೀಡಿದ್ದ ಶುಭ್‌ಮನ್ ಗಿಲ್ ಅನಾರೋಗ್ಯದ ಕಾರಣ ಎರಡನೇ ಟಿ20 ಪಂದ್ಯಕ್ಕೆ ಅಲಭ್ಯರಾಗಿದ್ದು, ಅವರ ಸ್ಥಾನದಲ್ಲಿ ಸಂಜು ಸ್ಯಾಮ್ಸನ್ ಕಣಕ್ಕಿಳಿಯಲಿದ್ದಾರೆ ಎಂದರು.

### ಉಭಯ ತಂಡಗಳು

**ಯಶಸ್ವಿ ಜೈಸ್ವಾಲ್, ಸಂಜು ಸ್ಯಾಮ್ಸನ್, ಸೂರ್ಯಕುಮಾರ್ ಯಾದವ್ (ನಾಯಕ), ರಿಷಬ್ ಪಂತ್ (ವಿಕೆಟ್ ಕೀಪರ್), ಹಾರ್ದಿಕ್ ಪಾಂಡ್ಯ, ರಿಯಾನ್ ಪರಾಗ್, ರಿಂಕು ಸಿಂಗ್, ಅಕ್ಷರ್ ಪಟೇಲ್, ಅರ್ಶ್ದೀಪ್ ಸಿಂಗ್, ರವಿ ಬಿಷ್ಣೋಯ್, ಮೊಹಮ್ಮದ್ ಸಿರಾಜ್. ಶ್ರೀಲಂಕಾ ತಂಡ: ಪಾತುಮ್ ನಿಸ್ಸಾಂಕಾ, ಕುಸಲ್ ಮೆಂಡಿಸ್ (ವಿಕೆಟ್ ಕೀಪರ್), ಕುಸಲ್ ಪೆರೆರಾ, ಕಮಿಂದು ಮೆಂಡಿಸ್, ಚರಿತ್ ಅಸಲಂಕಾ (ನಾಯಕ), ದಸುನ್ ಶನಕ, ವನಿಂದು ಹಸರಂಗ, ರಮೇಶ್ ಮೆಂಡಿಸ್, ಮಹಿಷ್ ತೀಕ್ಷಣ, ಮತಿಶ ಪತಿರಾನ, ಅಸಿತ ಫೆರ್ನಾಂಡೊ.**



# ಸೆಲ್ಫಿಗೆ ಪೋಸ್ ಕೊಡದ ತಾಪ್ಸಿ ಪನ್ನು ಮೇಲೆ ಸೋಷಿಯಲ್ ಮೀಡಿಯಾ ಸ್ಟಾರ್ ಕಿಡಿ

ಬಾಲಿವುಡ್ ಬೆಡಗಿ ತಾಪ್ಸಿ ಪನ್ನು ಸದ್ಯ ಅಕ್ಷಯ್ ಕುಮಾರ್ ಜೊತೆಗಿನ ಸಿನಿಮಾ ಕೆಲಸದಲ್ಲಿ ಬ್ಯುಸಿಯಾಗಿದ್ದಾರೆ. ಈ ಚಿತ್ರದ ಪ್ರಚಾರ ಕಾರ್ಯದ ವೇಳೆ, ಸೆಲ್ಫಿಗೆ ಪೋಸ್ ಕೊಡದ ತಾಪ್ಸಿ ಪನ್ನು ಮೇಲೆ ಸೋಷಿಯಲ್ ಮೀಡಿಯಾ ಸ್ಟಾರ್ ಅನನ್ಯ ಕಿಡಿಕಾರಿದ್ದಾರೆ.

ಅಕ್ಷಯ್ ಕುಮಾರ್ ನಟನೆಯ 'ಖೇಲ್ ಖೇಲ್ ಮೇ' ಎಂಬ ಚಿತ್ರದಲ್ಲಿ ತಾಪ್ಸಿ ನಾಯಕಿಯಾಗಿದ್ದಾರೆ. ಚಿತ್ರದ ಪ್ರಚಾರದ ಕೆಲಸಕ್ಕೆ ಚಾಲನೆಯನ್ನೂ ನೀಡಿರುವ ಚಿತ್ರತಂಡ ಹಾಡೊಂದರ ಬಿಡುಗಡೆ ಸಮಾರಂಭವನ್ನು ಹಮ್ಮಿಕೊಂಡಿತ್ತು. ಆಗ ಈ ಸಮಾರಂಭದಲ್ಲಿ ಸೋಷಿಯಲ್ ಮೀಡಿಯಾದ ಸ್ಟಾರ್ ಅನನ್ಯ ದ್ವಿವೇದಿ ಭಾಗಿಯಾಗಿದ್ದರು. ಬಳಿಕ ವೇದಿಕೆಯಲ್ಲಿ ತಾಪ್ಸಿಗೆ ಸೆಲ್ಫಿ ಕೇಳಿದರು.

ಅವರು ನಗುಮುಖದಿಂದಲೇ ಸೆಲ್ಫಿಗೆ ನಿರಾಕರಿಸಿದರು. ಇದೇ ಬೇಸರದಲ್ಲಿ ಅನನ್ಯ ದ್ವಿವೇದಿ ಅವರು ತಾಪ್ಸಿ ವಿರುದ್ಧ ಹರಿಹಾಯ್ದಿದ್ದಾರೆ. ತಾಪ್ಸಿಗೆ ಉತ್ತಮ ಪಿಆರ್ ತರಬೇತಿಯ ಅಗತ್ಯವಿದೆ ಎಂದು ಅನನ್ಯ ಸಾಮಾಜಿಕ ಜಾಲತಾಣದಲ್ಲಿ ಕಾಮೆಂಟ್ ಮಾಡಿದ್ದಾರೆ. ಅನನ್ಯಾ ವೈರಲ್ ವೀಡಿಯೋದಲ್ಲಿ ಈ ಬಗ್ಗೆ ಕಾಮೆಂಟ್ ಮಾಡಿದ್ದು, ಹಲವಾರು ಕ್ಯಾಮೆರಾಗಳಿಗೆ ಪೋಸ್ ನೀಡುತ್ತಿರುವಾಗ,ಸೆಲ್ಫಿಯನ್ನು ಏಕೆ ನಿರಾಕರಿಸುತ್ತಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನನ್ನಂತಹ ಪ್ರಭಾವಿಗಳನ್ನು ಕರೆದ ಕಾರಣವೆಂದರೆ ಅವರ ಹಾಡನ್ನು ಪ್ರಚಾರ ಮಾಡಲು. ಆಕೆಗೆ ನಿಜವಾಗಿಯೂ ಉತ್ತಮ ಪಿಆರ್ ತರಬೇತಿಯ ಅಗತ್ಯವಿದೆ ಎಂದು ಕುಟುಕಿದ್ದಾರೆ. ಇದೀಗ ತಾಪ್ಸಿ ನಡೆಗೆ ಪರ ಮತ್ತು ವಿರೋಧದ ಚರ್ಚೆ ನಡೆಯುತ್ತಿದೆ. ನಟಿ ಎಂಬ ಕಾರಣಕ್ಕೆ ಪ್ರತಿ ಸೆಲ್ಫಿಗೂ ಹೌದು ಎಂದು ಹೇಳಬೇಕಿಲ್ಲ ಎಂದು ಅಭಿಮಾನಿಗಳು ತಾಪ್ಸಿ ಪರ ಬ್ಯಾಟ್ ಬೀಸಿದ್ದಾರೆ.

# ಅಕ್ಕನ ಮದುವೆ ಸಂಭ್ರಮದಲ್ಲಿ ಮಿಂಚಿದ ಮೇಘಾ ಶೆಟ್ಟಿ




ನಟಿ ಮೇಘಾ ಶೆಟ್ಟಿ ಇದೀಗ ಅಕ್ಕನ ಮದುವೆ ಸಂಭ್ರಮದಲ್ಲಿ ಮಿಂಚಿದ್ದಾರೆ. ಮೇಘಾ ಸಹೋದರಿ ನಿಶಾ ಕೂಡ ನಟಿಯಾಗಿ ಮಿಂಚಿದವರು.

ಅವರ ಮದುವೆಗೆ ಸ್ಯಾಂಡಲ್‌ವುಡ್ ಸೆಲೆಬ್ರಿಟಿಗಳು ಹಾಜರಿ ಹಾಕಿ ಹೊಸ ಜೋಡಿಗೆ ಶುಭಕೋರಿದ್ದಾರೆ. ನಟಿಯ ಮನೆಯಲ್ಲಿ ಮದುವೆ ಸಂಭ್ರಮ ಮನೆ ಮಾಡಿದೆ. ಇದಕ್ಕಾಗಿಯೇ ಮೇಘಾ ಸಿನಿಮಾ ಕೆಲಸದಿಂದ ಬ್ರೇಕ್ ಪಡೆದುಕೊಂಡಿದ್ದರು.

ಮೇಘಾ ಅವರ ಹಿರಿಯ ಸಹೋದರಿ ನಿಶಾ ಶೆಟ್ಟಿ ಮದುವೆ ಬೆಂಗಳೂರಿನ ಖಾಸಗಿ ರೆಸಾರ್ಟ್‌ವೊಂದರಲ್ಲಿ ನಡೆದಿದೆ. ಸಹೋದರಿ ನಿಶಾ ಶೆಟ್ಟಿಗೆ ಹಿಂದೂ ಮತ್ತು ಕ್ರಿಶ್ಚಿಯನ್ ಪದ್ಧತಿಯಂತೆ ಅದ್ಧೂರಿಯಾಗಿ ಮದುವೆ ನಡೆದಿದ್ದು, ಈ ಸಮಾರಂಭದಲ್ಲಿ 'ಜೊತೆ ಜೊತೆಯಲಿ' ಸೀರಿಯಲ್ ಟೀಮ್, ನಟಿ ಶರಣ್ಯಾ ಶೆಟ್ಟಿ, ಯಶವಂತ್, ಕಾವ್ಯಾ ರಮೇಶ್ ಸೇರಿದಂತೆ ಅನೇಕರು ಭಾಗಿಯಾಗಿದ್ದರು. ಅಕ್ಕನ ಮದುವೆ ಮೇಘಾ ಶೆಟ್ಟಿ ಮಿಂಚಿದ್ದು ನೋಡಿ ನಿಮ್ಮ ಮದುವೆ ಯಾವಾಗ ಎಂದು ಫ್ಯಾನ್ಸ್ ಪ್ರಶ್ನೆ ಮಾಡಿದ್ದಾರೆ. ಮದುವೆಯಲ್ಲಿ ನಟಿ ಮುದ್ದಾಗಿ ಕಾಣಿಸಿಕೊಂಡಿದ್ದಾರೆ. ಅಂದಹಾಗೆ, ಕಳೆದ ವರ್ಷ ಮತ್ತೋರ್ವ ಸಹೋದರಿ ಸುಷ್ಮಾ ಶೆಟ್ಟಿ ಮದುವೆ ಗ್ರ್ಯಾಂಡ್ ಆಗಿ ಮಾಡಲಾಗಿತ್ತು. ಇನ್ನೂ ನಿಶಾ ಶೆಟ್ಟಿ ಅವರು ಬೆಂಗಳೂರು ಮೆಟ್ರೋ, ಗಲಾಟೆ, ಸೆಲ್ಸ್ ಸಿನಿಮಾ ಸೇರಿದಂತೆ ತಮಿಳಿನ ಸಿನಿಮಾದಲ್ಲೂ ನಟಿಸಿದ್ದಾರೆ.

# ಪ್ರಭಾಸ್ ಫ್ಯಾನ್ಸ್‌ಗೆ ಗುಡ್ ನ್ಯೂಸ್



ಡಾರ್ಲಿಂಗ್ ಪ್ರಭಾಸ್ ಅಭಿಮಾನಿಗಳಿಗೆ ಸಿಹಿಸುದ್ದಿ ಸಿಕ್ಕಿದೆ.

'ಕಲ್ಕಿ' ಸಿನಿಮಾದ ಯಶಸ್ಸಿನ ನಂತರ ಪ್ರಭಾಸ್ ಮುಂದಿನ ಚಿತ್ರದ ಬಗ್ಗೆ ಇಂಟರೆಸ್ಟಿಂಗ್ ಅಪ್‌ಡೇಟ್‌ವೊಂದು ಸಿಕ್ಕಿದೆ. ಪ್ರಭಾಸ್ ನಟನೆಯ 'ದಿ ರಾಜಾ ಸಾಬ್' ಸಿನಿಮಾದ ಫಸ್ಟ್ ಗ್ಲಿಂಪ್ಸ್ ರಿವೀಲ್ ಆಗಲಿದೆ. ಇದೇ ಜು.29ರಂದು ಸಂಜೆ 5 ಗಂಟೆಗೆ 'ದಿ ರಾಜಾ ಸಾಬ್' ಸಿನಿಮಾದ ಮೊದಲು ತುಣುಕು ಹೊರಬೀಳಲಿದೆ. ಪ್ರಭಾಸ್ ಲುಕ್ ಅನಾವರಣ ಆಗಲಿದೆ. ಚಿತ್ರದ ಗ್ಲಿಂಪ್ಸ್ ಕುರಿತು ಚಿತ್ರತಂಡ ಮಾಹಿತಿ ನೀಡಿದೆ. ಪ್ರಭಾಸ್ ಬ್ಯಾಕ್ ಸೈಡ್ ನಿಂತಿರುವ ಪೋಸ್ಟರ್ ರಿವೀಲ್ ಮಾಡಿ ಈ ಸಿಹಿಸುದ್ದಿಯನ್ನು ಅಭಿಮಾನಿಗಳಿಗೆ ತಿಳಿಸಿದ್ದಾರೆ. ಈ ಚಿತ್ರದಲ್ಲಿ ಪ್ರಭಾಸ್‌ಗೆ ನಿಧಿ ಅಗರ್‌ವಾಲ್ ಜೋಡಿಯಾಗಿ ಕಾಣಿಸಿಕೊಂಡಿದ್ದಾರೆ. ಮಾರುತಿ ಎಂಬುವವರು ನಿರ್ದೇಶನ ಮಾಡಿದ್ದಾರೆ. ಎಂದಿಗಿಂತ ಪ್ರಭಾಸ್ ಈ ಬಾರಿ ಸ್ಟೈಲೀಶ್ ಆಗಿ ಕಾಣಿಸಿಕೊಂಡಿದ್ದಾರೆ.

# ನ್ಯಾಚುರಲ್ ಸ್ಟಾರ್ ನಾನಿ ಸಿನಿಮಾದಲ್ಲಿ ಕೆಜಿಎಫ್ ನಟಿ



ಕೆಜಿಎಫ್ ಕೆಜಿಎಫ್ 2 ಸಿನಿಮಾಗಳ ಸಕ್ಸಸ್ ನಂತರ ಸೌತ್ ಸಿನಿಮಾ ಗಳಲ್ಲಿ ಶ್ರೀನಿಧಿ ಶೆಟ್ಟಿ ಬ್ಯುಸಿಯಾಗಿದ್ದಾರೆ. ಸದ್ಯ ನಾನಿ ನಟನೆಯ ಸಿನಿಮಾಗೆ ಶ್ರೀನಿಧಿ ಶೆಟ್ಟಿ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ ಎಂದು ಇದೀಗ ಸುದ್ದಿ ಹರಿದಾಡುತ್ತಿದೆ. ಕರಾವಳಿ ನಟಿ ಶ್ರೀನಿಧಿಗೆ ದೊಡ್ಡ ಮಟ್ಟದ ಫ್ಯಾನ್ ಬೇಸ್ ಇದೆ. ಕೆಜಿಎಫ್ ಸರಣಿ ಸಕ್ಸಸ್ ನಂತರ ನಟಿಯ ಮುಂದಿನ ಸಿನಿಮಾ ಅಪ್‌ಡೇಟ್‌ಗಾಗಿ ಫ್ಯಾನ್ಸ್ ಕಾಯುತ್ತಿದ್ದಾರೆ. ಈಗ ನಟಿಯ ಬಗ್ಗೆ ತಾಜಾ ಸಮಾಚಾರವೊಂದು ಸಿಕ್ಕಿದೆ. ನಾನಿ ತಾವೇ ಬರೆದು ನಟಿಸುತ್ತಿರುವ 'ಹಿಟ್ ಪಾರ್ಟ್ 3'ಗೆ ನಾಯಕಿಯಾಗಲು ಶ್ರೀನಿಧಿ ಜೊತೆ ತಂಡ ಮಾತುಕತೆ ನಡೆಸಿದೆಯಂತೆ.

ಈಗಾಗಲೇ ಹಿಟ್ 1 ಮತ್ತು ಹಿಟ್ 2' ಸಿನಿಮಾ ಸಕ್ಸಸ್ ಕಂಡಿದೆ. ಅದರಲ್ಲಿ ಹಿಟ್ 2 ಚಿತ್ರದಲ್ಲಿ ಗೆಸ್ಟ್ ರೋಲ್‌ನಲ್ಲಿ ಕಾಣಿಸಿಕೊಂಡಿದ್ದ ನಾನಿ, ಈಗ ಹಿಟ್ 3' ಚಿತ್ರದಲ್ಲಿ ಲೀಡ್ ರೋಲ್‌ನಲ್ಲಿ ನಟಿಸಲಿದ್ದಾರೆ.

ಹಾಗಾಗಿ ನಾನಿ ಜೊತೆ ಡ್ಯುಯೇಟ್ ಹಾಡಲು ಕೆಜಿಎಫ್ ನಟಿಗೆ ಚಾನ್ಸ್ ಸಿಕ್ಕಿದೆ ಎನ್ನಲಾಗಿದೆ. ಇದೇ ಸಿನಿಮಾದಲ್ಲಿ ನಾನಿ ಮತ್ತು ಶ್ರೀನಿಧಿ ಎದುರು ರಾಣಾ ದಗ್ಗುಬಾಟಿ ಖಡಕ್ ಆದ ಪಾತ್ರ ಮಾಡಲಿದ್ದಾರಂತೆ.

ಸದ್ಯ ಈಗ ಹರಿದಾಡುತ್ತಿರುವ ಈ ಸುದ್ದಿ ಸೋಷಿಯಲ್ ಮೀಡಿಯಾದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಅಷ್ಟಕ್ಕೂ ಈ ಸುದ್ದಿ ನಿಜನಾ ಚಿತ್ರತ್ರಂಡ ಅನೌನ್ಸ್ ಮಾಡುವವರೆಗೂ ಕಾಯಬೇಕಿದೆ.





# ಬಾತ್ ರೂಮ್ ವಿಡಿಯೋ ಲೀಕ್ ಆಗಿದ್ದು ನಿಜ ಎಂದು ಒಪ್ಪಿಕೊಂಡ ಊರ್ವಶಿ ರೌಟೇಲಾ

ಬಾಲಿವುಡ್ ಬೆಡಗಿ ಊರ್ವಶಿ ರೌಟೇಲಾ ಸದಾ ಒಂದಲ್ಲಾ ಒಂದು ರೀತಿ ಸುದ್ದಿಯಲ್ಲಿರುತ್ತಾರೆ.

ಇತ್ತೀಚೆಗೆ ನಟಿಯ ಸ್ನಾನದ ವಿಡಿಯೋ ಲೀಕ್ ಆಗಿತ್ತು. ಈ ಬಗ್ಗೆ 'ಐರಾವತ' ನಟಿ ಊರ್ವಶಿ ಮಾಧ್ಯಮಕ್ಕೆ ಪ್ರತಿಕ್ರಿಯೆ ನೀಡಿದ್ದಾರೆ.

ಸಿನಿಮಾವೊಂದರ ಪ್ರಚಾರ ಕಾರ್ಯದಲ್ಲಿ ನಟಿ ಮಾತನಾಡಿ, ಕ್ಲಿಪ್ ಸೋರಿಕೆಯಾದ ದಿನ, ನಾನು ಅಸಮಾಧಾನಗೊಂಡಿದ್ದೆ. ಖಂಡಿತವಾಗಿಯೂ ಇದು ನನ್ನ ವೈಯಕ್ತಿಕ ಕ್ಲಿಪ್ ಅಲ್ಲ, ಇದು ಘುಸ್ಪೈತಿಯೇ ಚಲನಚಿತ್ರದ ಭಾಗವಾಗಿದೆ ಎಂದಿದ್ದಾರೆ.

ಯಾವ ಹುಡುಗಿಗೂ ಈ ರೀತಿ ಆಗಬಾರದು ಎಂದು ನಟಿ ಮಾತನಾಡಿದ್ದಾರೆ. ನಟಿಯ ಸ್ನಾನದ ವಿಡಿಯೋ ವೈರಲ್ ಆದಾಗ ಇದನ್ನು ಪಿಆರ್ ಸ್ಟಂಟ್ ಎಂದು ಹೇಳುತ್ತಿದ್ದರು. ಊರ್ವಶಿ ವಿಡಿಯೋದಲ್ಲಿ ಮಂಗಳಸೂತ್ರ ಕೂಡ ಧರಿಸಿದ್ದರು. ಹೀಗಾಗಿ ಇದು ಫೇಕ್ ಎಂದು ಹೇಳಲಾಗಿತ್ತು. ಘುಸ್ಪೈತಿಯೇ ಸಿನಿಮಾದಲ್ಲಿ ಊರ್ವಶಿ ನಾಯಕಿಯಾಗಿ ನಟಿಸಿದ್ದಾರೆ. ಆಗಸ್ಟ್ 9ರಂದು ಬಿಡುಗಡೆಯಾಗಲಿದೆ. ಅಕ್ಷಯ್ ಒಬೆರಾಯ್ ಅವರೊಂದಿಗೆ ಊರ್ವ ಶಿ ಚಿತ್ರದಲ್ಲಿ ನಟಿಸಿದ್ದಾರೆ. ಚಿತ್ರವನ್ನು ಸುಸಿ ಗಣೇಶನ್ ನಿರ್ದೇಶಿಸಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966